p 95E

App. F. IX-4

Previous References 1928-29 (G. R. Pa.) **File No.** 28-28

Serial Nos.

Later References

General and Revenue Secretariat.

Serial Nos. 1.

Part B for April 1929.

SUBJECT

Sending copies of lists of Vacancies to certain hotels and institutions with a view to give wider publicity to Vacancies advertised in the Gazette.

01695

ONLY KANARESE NEWSPAPER. CIRCULATING THROUGHOUT THE MYSORE STATE. PUBLISHING DAY: THURSDAY.

The Vrittanta Patrike

MYSORE CITY

EDITOR:
REV. E. STANLEY EDWARDS.

ASST. EDITOR:
MR. T. KRISHNA RAO.

Kindly address all Business Communications to the Manager, "Vrittanta Patrike," Mysore City.

BUSINESS MANAGER:
MR. THOS. GOULD.

4/7/26

9th July 26

GEN. & REV. SECTION
10. JUL. 1926
G. D. SECTION.

The Secretary,
Recruitment Board, Bangalore.

Dear Sir,

The Editor directs me to invite your attention to a letter published in this week's "Vrittanta Patrike", a Copy of which I am sending you by this Post under Separate Cover.

Yours faithfully
T. Krishna Rao

G.R.S. III—3]

Routine Notes.

[To be used only for notes, requisitions, etc., not intended for permanent record.]

---

1. To Mr G D Seaton for kind G
Stating as to whether bills
report has been sent.

JP
14/7
15/7
G D Seaton

2. The G D Seaton for Stating Whether the papers
Report has since been
read

JP
19/7
G D Seaton

3) not yet received
and this may be ascertained in the
Library

19/7

N.B.—Should routine notes be written on small slips, the notes must be copied, or slips pasted on this form.

G.R.S. III—3] 47

Routine Notes.

[To be used only for notes, requisitions, etc., not intended for permanent record.]

---

1) Re Library for Kind[ly] perusal
~~put up~~ a copy of the Vrittanta
Patrika regd to.
(Sr
Library).

2) An Article under the
heading "C. R. B" published
in the Vrittanta Patrike
dated 8th July 1926. (page 8)

A certain villager requests
the Publisher to make arrangements
to have the vacancies
published in this paper
as before as that published
in the Mysore Gazette cannot
reach the Candidates residing
in the far off villages.

3) In the meeting of the C. R. Board
held on the 30th ult 1925 it was
decided that copies of the list
of vacancies might be sent
to 4 papers for publications.

Hug. X

X. 1) Vokkaligara Patrike
2) Vrittanta "
3) Mysore Star
4) Alkalami

N.B.—Should routine notes be written on small slips, the notes must be copied, or slips pasted on this form

47

G.R.S. III—3]

Routine Notes.

[To be used only for notes, requisitions, etc., not intended for permanent record.]

6) As all the papers except Al Kalami were not publishing these lists regularly in their papers the lists were ordered not to be sent.

7) A copy of the list is being sent regularly to the Editor, Al Kalami.

8) Subtd for orders whether a copy of the vacancy list may be sent in future to the Vrittanta Patrika.

ms 11/8.

9) Where are the previous references.

hsg 11/8

Hag. Q

10) The previous papers are traced and put up.

ms 17/8.

11) Why was no reminder issued to the D.C. so far? — See this office letter No 4631 dated 24-2-26

hsg

N.B —Should routine notes be written on small slips, the notes must be copied, or slips pasted on this form.

12) Subtd with a draft reminder.

ms. 17/8.

13) Issue reminder. Not explained as forthcoming for many years

hsg

Issued No. E. 1010 dated 19.8.26.

C.R.B.

14) Resubtd.

ms. 21/8.

47

G.R.S. III—31

Routine Notes

[To be used only for notes, requisitions, etc., not intended for permanent record.]

15) Kind reference is invited to the correspondence in the Vruttanta Patrika of 8th July. (Flag W.) in which a certain Mudaliar requests the editor to make arrangements to publish the list of vacancies in the paper. In accordance with the decision of the Board, lists of vacancies were sent to the Editors of local papers, including Vruttanta Patrika, for five weeks, but except the paper in question, which however published only a few important vacancies that too only in one week, none of the other papers took any action. In these circumstances, the Board resolved that the arrangement may be discontinued. As it was however considered necessary to give wide publicity to the existence of vacancies, it was also resolved that copies of the list may be sent to recognised Associations, Hostels etc. through the Secretariat Office. The D.G. has been requested to furnish a list of such Associations & Hostels. He has also been reminded. In these circumstances, no action is perhaps necessary on the letter of the Book Editor

Chairman
CRBoard
24/8.

2196
24/8

16) Mr. Mehta briefly informed as above & told that if the writer disputed said he should do so.

24/8

24/8

N.B.—Should routine notes be written on small slips, the notes must be copied, or slips pasted on this form

Serial No.

17) Draft Subtd.
N.S. 2/7/28

18) For approval
cancy) 2/8

19) Issue
2/8/V
2/8

Issued No. G. 1325 dated 3. 9. 1926

From
The D. G. of Education.
Letter No. D. dis. 1660. 57. 29/1926.
Forwards two lists, one relating to Students' Hostels and the other of Associations in the State.

Hon. R.

20) As per resolution of the 24th Board meeting, the D. G. E was requested to send the above lists for giving wide publicity to the existence of vacancies. According to the lists there are 70 Students' Hostels and 20 Other Associations in the State. The Compiler may perhaps be requested to Strike off 90 copies extra more of the C. R. B. Vacancy notifications along with the Gazette Copies and despatch the same to these Hostels & Associations. (After obtaining orders a copy of the lists will be sent to the Compiler for his reference.)

21) NS 4/9

NOTE—Contn. sheet.

Serial No.

22) It is perhaps not necessary to send the lists to all the hostels & associations. Some of the hostels & associations to which the lists may be sent, are marked in the statements in red & blue. A letter may be written to the managers of the hostels & the Secretaries of the Associations concerned, requesting that the lists received may be kindly exhibited in a prominent place, so as to be accessible to the candidates in general. It may also be published in the Gazette in his or three issues, that lists of vacancies will be available for perusal in the hostels & associations in question.

Chairman
CRB
Through Cmee(Ty)

Sd
6/9

2741/7/9

23) Yes
&
7/9 Sd 7/9

24) Yes 10/9/26

Sd 9/9

From The Editor, Vrittanta Patrika. Nile.

25) States that he would be glad to publish the vacancies, in his paper if Govt would please to send him the lists.

26) Submit for orders whether a copy of the vacancy list may be sent to him.

Sd 14/9/26 2 Drafts submitted with reference to paras 22 & 24

27) Please put up clean copies
Sd 14/9

NOTE—Contn. Sheet

WD 01264—GPB—40,000—17-12-25

General and Revenue Secretariat | File No. | of 192 .

Serial No.

3153/17/9

Clean copies asked

17-9-26

29) Two drafts submitted for approval before issue.

The letter received from the Editor, Vivekavardhini Patrika is submitted for perusal. If approved, a copy of the list will also be sent to the Editor of the above paper.

1st member) 17/9.

30) Approved

17/9

17/9

The Compiler, Mysore Gazette

Letter no. 180/C.R.B. dt. 28-9-26.

Requests him to publish the enclosed list of Hostels & Institutions in 3 or 4 issues of the Gazette and forward 80 copies of the list of vacancies published in each weeks' Gazette.

The Managers of Hostels

" Secretaries, Public Libraries, B'lore & Mysore.

Requests that the lists of vacancies sent to them may be exhibited in a prominent place so as to be easily accessible for perusal to intending applicants the public in general.

This file may be destroyed 28/9.

B Rel 7/11/28

NOTE—Contn. Sheet

5-10 ತಾಂಡ್ಯದವರು ಸೇರಿ ಕಾರ್ಫರ್ಟಿನ ಆಚರಣೆಯಂತೆ ನಡೆದುಕೊಳ್ಳಲು ಕಟ್ಟುಪಾಡುಮಾಡಿಕೊಂಡು ಸೆಕ್ರಿಟರಿಯವರಿಗೆ ಪತ್ರ ಬರೆದಿರುತ್ತಾರೆ. ಮತ್ತು ಮೈಸೂರು ದೇಶದ ಅನೇಕ ಕಡೆಯಿಂದ ಕಾರ್ಫರ್ಟಿನ್ ಪರಾಪುಗಳಂತೆ ನಡೆದುಕೊಳ್ಳುತ್ತಿದೇವೆಂದು ಕಾಗದಗಳು ಬರೆದಿರುತ್ತಾರೆ. ಮತ್ತು ನತವಳಿಕೆ ಪುಸ್ತಕಗಳು ಜಾಗ್ರತೆ ಕಳುಹನಬೇಕೆಂದು ಅಪೇಕ್ಷಿಸುತ್ತಾರೆ. ಪುಸ್ತಕಗಳು ಅಚ್ಚುಹಾಕಿನಲು ಪ್ರಯತ್ನ ನತೆಯುತ್ತಾ ಇದೆ. ಅಚ್ಚಾದ ಕೂಡ್ಲೆ ಪ್ರಸಿದ್ಧಿಪಡಿಸಲಾಗಿದೆ.

ಇದೇ ರೀತಿಯಾಗಿ ನಮ್ಮ ಸಹೋದರರೆಲ್ಲಾ ಎಲ್ಲಾ ಕಡೆಯಲ್ಲಿಯೂ ಪ್ರಯತ್ನಮಾಡಿದ್ದೇ ಆದರೆ ನಮ್ಮ ಸಮಾಜವು ಜಾಗ್ರತೆಯಲ್ಲಿಯೇ ಅಭಿವೃದ್ಧಿಗೆ ಬಂದು ನಾವು ಸಹ ಗಣ್ಯಪ್ರಜೆಗಳಾಗುತ್ತೇವೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈ ಸಮಾಚಾರವನ್ನು ಚಂದಾದಾರರೂ ದೇಶಾಭಿಮಾನಿಗಳೂ ಸ್ಕೂರ್ ಮಾನ್ಯರೇ ಮೊದರಾದವರೂ ದಯವಿಟ್ಟು ಲಂಬಾಣಿ ಸಹೋದರರು ಊರಿಂದ ದೂರವಾಗಿರುವದರಿಂದ ಅವರಿಗೆ ತಿಳುವಳಿಕೆ ಕೊಡಬೇಕಾಗಿ ಬೇಡಿಕೊಳ್ಳುತ್ತೇನೆ. — ಜಾತರ್‌ನಾಯ್ಕ,
ಲಂಬಾಣಿ ಕಾರ್ಫರ್ಟಿನ್ ಸೆಕ್ರಿಟರಿ, ಹರಿಯೂರು.

ಕೋಲಾರದ ಮ್ಯುನಿಸಿಪಲ್ ವಿಚಾರಗಳು.

ಅಯ್ಯಾ,—ಕೋಲಾರದ ಟೌನಿಗೆ ನೇರಿದ ಕಿಲಾರಿಪೇಟೆ, ಉಪ್ಪಾರಪೇಟೆ, ಅಕ್ಕಪಕ್ಕದಲ್ಲಿರುವ ರಸ್ತೆಗಳಿಗೆ ಅನೇಕ ವರ್ಷಗಳಿಂದ ಕಾಮಗಾರಿಯನ್ನು ಮಾಡಿಸಲಲ್ಲ. ನಾವು ಸಮಕ್ಷಮ ಹೇಳಿಕೊಂಡು ಅರ್ಜಿಗಳನ್ನು ಹಾಕಿಕೊಂಡಾಗ್ಯೂ ಹಿಂದೆ ಇದ್ದ ನಾಗಿ—ಆಫಿಷಿಯರ್ ಪೈಸಿಡೆಂಟರುಗಳು ಅಹವಾಲುಗಳನ್ನು ಅಂಗೀಕರಿಸಿ ನಮ್ಮ ಪ್ರಾರ್ಥನೆಯನ್ನು ನೆರವೇರಿಸಲಲ್ಲ. ಈ ಡಿವೀಜಿಗೆ ಸಂಬಂಧಪಟ್ಟ ಕೌನ್ಸೆಲರುಗಳು ಬಡವರ ಸೌಕರ್ಯಗಳಿಗೆ ಗಮನಕೊಡಲಲ್ಲ. ಕಂದಾಯವನ್ನು ಮಾತ್ರ ಪುನಃ ಹೆಚ್ಚುಮಾಡಿರುತ್ತಾರೆ. ಹೀಗಿದ್ದರೂ ಕೂಡ ನಾವು ಕೊಡುವ ತೆರಿಗೆಗಳಿಗೆ ಅನುಗುಣವಾಗಿ ಒಂದು ವರುಷವಾದರೂ ರಸ್ತೆ ಕಾಮಗಾರಿ ವಗ್ಯೆರೆ ಮೇಲ್ಕಂಡ ಪೇಟೆಗಳಲ್ಲಿ ಮಾಡಿನದೆ ಈ ಪೇಟೆಗಳ ಕಂದಾಯದ ಉತ್ಪತ್ತಿಯನ್ನು ಬೇರೆ ಪೇಟೆಗಳಿಗೇನೇ ಅನ್ಯಾಯನುವಂತೆ ಮಾಡಿಕೊಂಡು ಬರುತ್ತಿರುವುದು ತುಂಬಾ ಶೋಚನೀಯವಾಗಿರುತ್ತೆ. ಕಿರಾರ್‌ಪೇಟೆ, ಉಪ್ಪಾರ್ ಪೇಟೆಗಳು ಟೌನಿಗೆ ಮಧ್ಯಪ್ರದೇಶವಾಗಿ ಎಲ್ಲಾ ಜನರೂ ತಿರುಗಾಡುವಂಥಾದ್ದಾಗಿವೆ. ಇಲ್ಲಿ ದನಕರುಗಳೂ ಗಾಡಿಗಳೂ ತಿರುಗಾಡುವುದು ಜಾಸ್ತಿ. ಈ ಪೇಟೆಯ ರಸ್ತೆಗಳಿಗೆ ಪ್ರತಿ ವರ್ಷವೂ ಕಾಮಗಾರಿ ಮಾಡಿನದೆ ಇರುವುದರಿಂದ ಮಳೆ ಬಂದು ರಸ್ತೆಯೆಲ್ಲಾ ಕತ್ತರಿಸಿಹೋಗಿರುತ್ತೆ. ಮಳೆ ನೀರು ರೋಡಿನಲ್ಲಿ ಹರಿದು ರಸ್ತೆಯೆಲ್ಲಾ ಹಳ್ಳಕೊಳ್ಳಗಳಾಗಿವೆ. ರಸ್ತೆಯು ಮಟ್ಟವಾಗಿ ಇಲ್ಲದಕಾರಣ ರಾತ್ರಿ ವೇಳೆ ನಂಚಾರಮಾಡುವುದು ಮುದುಕರಿಗೆ ತುಂಬಾ ತೊಂದರೆಯಾಗಿರುತ್ತೆ. ರಸ್ತೆಯ ಪಕ್ಕಗಳಲ್ಲಿ ಚರಂಡಿಗಳೇ ಇಲ್ಲ. ನೆಲವು ಪೂರ್ವದ ಮಟ್ಟಕ್ಕಿಂತ ಒಂದು ಅಡಿ ಕಮ್ಮಿಯಾಗಿ ಎಲ್ಲಿ ನೋಡಿದರೂ ಮಳೆನಿಂದ ತುಂಬಿರುತ್ತೆ. ಆದ್ದರಿಂದ ನಮ್ಮ ರಸ್ತೆಗಳಿಗೆ ಕಾಮಗಾರಿ ಮಾಡಿಸುವುದು ಅವಶ್ಯಕವಾಗಿರುತ್ತದೆ. ಚರಂಡಿಗಳನ್ನು ಹಪ್ಪಡಿಗಳಿಂದ ಹಾನಬೇಕು. ರಸ್ತೆಗೆ ಗ್ರಾವರ್ ವಗ್ಯೆರೆ ಮಣ್ಣಿನಿಂದ ಗಟ್ಟಿಮಾಡಿನದೇಕು. ಕೆಲವು ಅಡ್ಡ ರಸ್ತೆಗಳಿಗೆ ಸೇತುವೆಗಳನ್ನು ಮಾಡಿನಬೇಕು. ಈಗ ತಾಫಾ ನಂಜಪ್ಪನವರ ಮನೆಯ ವರೆಗೂ ಹಪ್ಪಡಿಗಳ ಚರಂಡಿ ಇದೆ. ಅದನ್ನು ಮುಂದಕ್ಕೆ ತಗೆದುಕೊಂಡು ಹೋಗಿ ಕಲಂದ್ರಸಾಬರ [illegible] ಮುಸ್ತಕ್ಕನವರ ಮನೆಯ ಕೊನೆಯಿಂದ ತಾಫಾ-ನಂಜಪ್ಪನವರ ಮನೆಯ ಬಳಿಯಿಂದ ತರಬಹುದಾದ ಚರಂಡಿಗೆ ಅಂದರೆ ಕಿರಾರಿ ರಾಮದಾನಪ್ಪನವರ ಮನೆ ಬಳಿ ನೇರಿನಬಹುದು. ಇನ್ನೂ ಕೆಲವು ಲಾಂಡ್ರಗಳನ್ನು ಹಾಕಿನಬೇಕು. ಇಲ್ಲಿ ದನಕರುಗಳು ಜಾಸ್ತಿಯಾಗಿರುವುದರಿಂದ ಮಧ್ಯ ಪ್ರದೇಶದಲ್ಲಿ ಒಂದು ಕೊಳಾಯಿ ಹಾಕಿಸಿ ಆದರ ಪಕ್ಕದಲ್ಲಿ ಒಂದು ತೊಟ್ಟಿಯನ್ನು ಕಟ್ಟಿಸಿ ಕೊಡಬೇಕು. ಕೆಲವು ದಿವನಗಳ ಕೆಳಗೆ ಡೆಪ್ಯುಟಿ ಕಮಿಷರ್‌ರವರು ಚಿತ್ತೈಸಿದ್ದಾಗ ಈ ವಿಷಯಗಳನ್ನು ಅವರ ನಮಕ್ಷವು ಚಿತ್ರಕ್ಕೆ ತಂದಿರುತ್ತೇವೆ. ಅವರು ಈ ನಲ ಬಡ್ಡಟ್ಟಿನಲ್ಲಿ ಮಾಡಿಸುವಂತೆ ಹೇಳಿದರು. ಆದ್ದರಿಂದ ಮ್ಯುಸಿಪಲ್ ಪ್ರೆಸಿಡೆಂಟರೂ, ಕೌನ್ಸೆಲರುಗಳೂ ಈ ವ್ಯಾಂತ್ಯದ ಪ್ರಜೆಗಳ ಮೇರೆ ದಯವಿಟ್ಟು ಈ ನಾಲನಲ್ಲಿಯಾದರೂ ದುಸ್ಥಿತಿಯಲ್ಲಿರುವ ಈ ರಸ್ತೆಗಳನ್ನು ಸರಿಪಡಿಸಿ ಕೋಭಾಯಮಾನವಾಗಿ ಮಾಡುವೆಂದು ನಂಬಿ ಪ್ರಾರ್ಥಿಸುತ್ತೇವೆ.

ಅಲ್ಲದೆ ಮತ್ತೊಂದು ಕೋರಿಕೆ ಏನೆಂದರೆ ಕಿರಾರಿಪೇಟೆ ಕಡೆಯ ನರ್ಸ್ ಹಿದ್ದಿನಲ್ಲಿ ಕೆಲವು ವರ್ಷಗಳಿಂದ ನಾಹುಕಾರ್ ಚನ್ನಂಜಪ್ಪನವರು ಕೇಂದಿ ಅಂಗಡಿಯನ್ನು ಇಟ್ಟುಕೊಂಡು ಬಂದಿದ್ದರಿಂದ ಅಜುಬಾಜು ಜನಗಳಿಗೆ ವ್ಯಾಪ್ತವಾದ ದುಃಖ ಮತ್ತು ಕಷ್ಟಗಳು ಹೇಳಲೂ ಸಾಧ್ಯವಲ್ಲ. ನಾಲದ್ದಕ್ಕೆ ದನದ ಮಾಂಸವನ್ನು ಅದರ ಹತ್ತಿರದಲ್ಲಿಯೇ ಎಕ್ಕುಯಿಸುವುದೂ ಜಾರಿಗೆ ಬಂದಿರುತ್ತೆ. ಈ ವಿಚಾರದಲ್ಲಿ ಉದಾರಗುಣವುಳ್ಳ ಮಾ|| ಚಿಕ್ಕಚನ್ನಂಜಪ್ಪ ಕೆಟ್ಟರವರು ಮುಂದಕ್ಕೆ ಅಲ್ಲಿ ಅಂಗಡಿಯನ್ನು ಇಡಿಸುವುದಿಲ್ಲವೆಂದು ಜನರಲ್ಲಿ ಹೇಳುತ್ತಿದ್ದು, ಅದಕ್ಕೆ ತಕ್ಕಂತೆ ಅವರ ಶೇಂದಿ ಕಂಟ್ರಾಕ್ಟನ್ನು ತಪ್ಪಿಹೋದರೂ ಅದೇ ನ್ಯಳ ದಲ್ಲಿ ಷರಾಬು ಅಂಗಡಿಯನ್ನು ಪುನಃ ಇಟ್ಟರಾವುದು ಬಹಳ ವಿಚಾರವಾಗಿದೆ. ಇದರಿಂದ ಅವರು ನಭ್ಯ ಪ್ರಜೆಗಳಿಗೆ ತೊಂದರೆ ಇಲ್ಲದೆ ಉತ್ತಮವು ಕೆಡದಂತೆ ಇದಕ್ಕೆ ಗಮನಕೊಟ್ಟು ತಕ್ಕ ಏರ್ಪಾಟು ಮಾಡಬಲ್ಲರೆಂದು ನಂಬುತ್ತೇವೆ.

ಪ್ರಜೆಗಳು.

[ಇದಕ್ಕೆ 15 ಜನಗಳ ರುಜು ಮಾಡಲ್ಪಟ್ಟಿವೆ—ಎಡಿ.]

ದೇವನಹಳ್ಳಿಯಲ್ಲಿ ಸ್ಕೂರ್ ನಂಬಂಧಪಾದ ಪುಸ್ತಕಗಳನ್ನು ಒಬ್ಬ ವ್ಯಾಪಾರಿಯಲ್ಲೇ ಕೊಂಡುಕೊಳ್ಳಬೇಕಂಬ ನಿರ್ಬಂಧವೇನೂ ವಿದ್ಯಾರ್ಥಿಗಳಿಗೆ ಇಲ್ಲವೆಂದೂ, ಯೋ. ಕೆ. ಪರೀಕ್ಷೆಯಲ್ಲಿ 5-6 ಮಂದಿ ತೇರ್ಗಡೆ ಹೊಂದಿರುವುದು ದೌರ್ಭಾಗ್ಯವೇನೂ ಅಲ್ಲವೆಂದೂ "ನಿಷ್ಪಕ್ಷಪಾತಿ" ನಮಗೊಂದು ದೀರ್ಘವಾದ ಬಾತ್ಮಿ ಬರೆದಿದಾರೆ.

ಪ್ರತ್ಯಕ್ಷ ದರ್ಶಿ, ತುಮಕೂರು—ಈ ಪತ್ರಿಕೆಯಲ್ಲಿ ನೀವು ಬರೆಯುವ ವಿಷಯ ಪ್ರಕಟವಾಗಿದೆ.

ಎಸ್. ಸಿ. ನರಸಿಂಗರಾವ್—ನಿಮ್ಮ ಪ್ರಶ್ನೆಗಳ ಉದ್ದೇತವೇನೆನ್ನುವುದು ತಿಳಿಯಲಿಲ್ಲ.

ಪ್ರತ್ಯಕ್ಷದರ್ಶಿ—ನ್ಯಾಯಪಕ್ಷವಾತಿ, ಗುಡಿಬಂಡೆ—ನಿಮ್ಮ ಬಾತ್ಮಿಯನ್ನು ಓದುವುದು ಕಷ್ಟ ಮತ್ತು ವಿವರಣೆಯು ವಿಪರೀತವಾಗಿದೆ. ಬಾತ್ಮಿಯನ್ನು ನಂಕ್ಷೇಪವಾಗಿಯೂ ನ್ಪುಟಾಕ್ಷರಗಳಿಂದಲೂ ಬರೆಯಿಬೇಕೆಂದು ಕೋರುತ್ತೇವೆ.

ಒಬ್ಬ ವಿದ್ಯಾರ್ಥಿ, ಶಿವಮೊಗ್ಗೆ—ವಿದ್ಯಾರ್ಥಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುವವರೂ, ವಿದ್ಯಾಬೋಧಕರೂ ಕರೆತು ವಿಷಯವನ್ನು ಕುರಿತು ಆರೋಚಿಸಿ ಇರಾಖೆಗೆ ಬರೆದರೆ ಕೃಪಾಪಚಬಹುದು. ವಿದ್ಯಾರ್ಥಿಗಳ ಬಾತ್ಮಿಗಳಿಗೆ ಈ ಪತ್ರಿಕೆಯಲ್ಲಿ ನ್ಥಳ ದೊರೆಯಲಾರದು.

ಸಿ. ಎಸ್. ಕೆ. ರಾಮಯ್ಯ, ಬೌರಿಂಗ್‌ಪೇಟೆ—ನಿಮ್ಮ ಬಾತ್ಮಿಯಲ್ಲಿ ವಿವರಿಸಿರುವ ಕೃತ್ಯಗಳು ಅದೇ ರೀತಿ ನಡೆದಿದ್ದರೆ ನಂಗತಿಯನ್ನು ನ್ಥಳೀಯ ಅಧಿಕಾರಿಗಳಿಗೆ ತಿಳಿಸಿ ನಿಮಗೆ ತಿಳಿದ ವಿಚಾರಗಳನ್ನು ಹೇಳಿದರೆ ಅವರೇ ತನಿಖೆಯಿಂದ ಕ್ರಮಪಡಿನುತ್ತಾರೆ. ನೀವು ಹೇಳಿರುವಂತೆಯೇ ನಂಗತಿಗಳು ನಡೆದಿವೆ ಎನ್ನುವುದರಲ್ಲಿ ನಮಗೆ ನಂಬಿಕೆ ನಾಲದು. —ಎಡಿ.]

ತಾಲ್ಲೂಕುಗಳ ವರ್ತಮಾನ

ಕ್ಲೋನ್‌ಪೇಟೆ.—ಕಳೆದ ಎರಡು ವಾರಗಳಿಂದ ತಪ್ಪದೆ ಆಗಾಗ್ಗೆ ಮಳೆ ಬೀಳುತ್ತಾ, ಹವಾ ತಂಪಾಗಿರುತ್ತೆ. ಹೊಲದ ಬಿತ್ತನೆಗೆ ಪುರುಮಾಡಿರುತ್ತಾರೆ.—ಕಳೆದ 21 ನೇ ತಾ. ದಿನ ಶ್ರೀಮದ್‌ಮಹಾರಾಜರವರ ವರ್ಧಂತಿ ನಿಮಿತ್ತ ಇಲ್ಲಿನ ನರ್ಸ್ ಡಿವೀಜಿ ಆಫೀನರು, ಅಮರ್‌ದಾರ್ರು ಮತ್ತು ಮ್ಯುನಿಸಿಪರ್ ಮೆಂಬರುಗಳೂ, ಪುರನಿವಾನಿಗಳೂ ನೇರಿ ತುಂಬಾ ವೈಭವದಿಂದ ಪ್ರಭುಗಳ ಫೋಟೋ ಮೆರವಣಿಗೆಮಾಡಿ ಸ್ಕೂರ್ ಬಾಲಕಬಾಲಕಿಯರಿಂದ ಆಟವಾಟಗಳನ್ನಾಡಿಸಿ ಬಹುಮಾನವನ್ನೂ ಮಿಠಾಯಿ ಮುಂತಾದ್ದನ್ನೂ ಹಂಚಿ ಸಿದರು. ನರ್ಸ್ ಡಿವೀಜಿ ಆಫೀನರ್ ಮಾ|| ಟಿ. ಗೋವಿಂದರಾಯರು ಉದಾರವಾಗಿ ಬಾಲಕಬಾಲಕಿಯರಿಗೆ ಬಹುಮಾನ ಕೊಟ್ಟದ್ದಲ್ಲದೆ ಶ್ರೀಮದ್‌ಮಹಾರಾಜರ 43 ನೇ ವರ್ಷ ವರ್ಧಂತಿಯ ಪ್ರಾಪಕಾರ್ಥವಾಗಿ ಟವ್ ವಾಸಿಗಳಿಗೆ ಅನಕೂಲವಾಗಿರುವಂತೆ ಕೆಲವು ಗಿಡಗಳನ್ನು ನೆಡಿಸಿದರು.—ಇಲ್ಲಿಗೆ ಮಾ|| ನಿ. ನರಸಿಂಹಾಚಾರ್ರು ಪೋಲೀಸ್ ಇನ್‌ಸ್ಪೆಕ್ಟರಾಗಿ ಬಂದಾರಭ್ಯ ಕಳುವು ಮುಂತಾದ ಕೇನುಗಳನ್ನು ಪತ್ತೆಮಾಡಿದ್ದಲ್ಲದೆ ಕೆಲವು ತುಂಟರಿಂದ ಊಂಟಾಗುತ್ತಿದ್ದ ಹಾವಳಿಯನ್ನು ತಪ್ಪಿಸಲು ಮೊಕದ್ದಮೆ ಮಾಡಿರುವದ್ದರಿಂದ ಪುಂಡು ಜನಗಳಿಗೆ ಭಯವಾಗಿ ಪ್ರಜೆಗಳು ನುಖವಾಗಿರುತ್ತಾರೆ. ಟವ್ ರಾತ್ರಿಗನ್ತು ನಮರ್ಪಕವಾಗಿ ನಡೆಯುತ್ತಿದೆ.

ಕಾನಕಾನಹಳ್ಳಿ.—ಈ ತಾಲ್ಲೂಕಿನಲ್ಲಿ ಮಳೆಯಾಗಿ ಜನಗಳು ಬೀಜಗಳನ್ನು ಬಿತ್ತುತ್ತಾ ಇರುತ್ತಾರೆ.—ಟವ್‌ನಲ್ಲಿ ಅಂಗಡಿಗಳ ಮುಂದೆ ಜನಗಳು ಭರ್ತಿ ಗಾಡಿಗಳನ್ನು ನಿಲ್ಲಿಸಿ ತಿರುಗಾಡುವ ಜನಗಳಿಗೆ ದಾರಿ ಬಡದೆ ಅಡ್ಡವಾಗಿ ನಿಲ್ಲಿನುತ್ತಾರೆ. ಈ ವಿಚಾರದಲ್ಲಿ ಅಮರ್ದಾರ್ ಸಾಹೇಬರು ನಿಗಾ ಕೊಟ್ಟರೆ ಜನಗಳಿಗೆ ನೌಕರ್ಯವಾಗುತ್ತೆ.—ಈ ತಾಲ್ಲೂಕಿಗೆ ನೇರಿದ ಹೂಕುದದ ದಾಖರೆ ಕೆಬ್ಬೆದೊಡ್ಡಿ ಗ್ರಾಮದ ನಿದ್ದೇಗೌಡ ಎಂಬುವನು ಅವನ ಹೆಂಡತಿ ಕೆಂಪಿ ಎಂಬುವಳೂ, ನದರಿ ಗ್ರಾಮದ ಯಜಮಾನ ಮುಗರೇ ಗೌಡನ ಅಳು ಮುತ್ತ ಎಂಬುವನೂ ನಿದ್ದೇಗೌಡನ ಮನೆಯಲ್ಲಿ ಕಳೆದ ಮಾಹೆ 19 ನೇ ತಾ. ಇದ್ದುದನ್ನು ನಿದ್ದೇಗೌಡನು ಕಂಡು, ಅವರಿಬ್ಬರನ್ನೂ ಕುಡಿಲಿನಿಂದ ಕತ್ತರಿಸಿ, ಅವರಿಬ್ಬರ ತರೆಗಳನ್ನೂ ನಿದ್ದೇಗೌಡ ತೆಗೆದು ಕೊಂಡು ಬಂದು ಕೋಡಿಹಳ್ಳಿಯಲ್ಲಿರುವ ಪೋಲೀಸ್ ನರ್ ಇನ್‌ಸ್ಪೆಕ್ಟರ್ ಮಾ|| ಭೋಗಪ್ಪನವರಲ್ಲಿ ಹಾಜರುಮಾಡಿದನೆಂದೂ, ಕೇನನ್ನು ಪೋಲೀಸಿನವರು ತನಿವೆಮಾಡುತ್ತಲಿವಾರೆಂದೂ ತಿಳಿದುಬರುತ್ತದೆ. ನಮ್ಮ ಮೈಸೂರು ಸೀಮೆಯಲ್ಲಿ ಅನೇಕ ಕಡೆ ಖೂನಿಗಳು ನಡೆದಿವೆ. ಆದರೆ ಹೀಗೆ ಇಬ್ಬರನ್ನು ಕಡಿದು ಅವರ ಎರಡು ತರೆಗಳನ್ನೂ ತಂದು ತಾನಾಗಿಯೇ ಹಾಜರುಮಾಡಿದ್ದು ಅಪೂರ್ವ.—ಸಾತನೂರು ರೋಡು ಮತ್ತು ಕೋಡಿಹಳ್ಳಿ ರೋಡು ಸಹ ರಿಪೇರಿ ಇಲ್ಲದೆ ರಸ್ತೆಗಳೆಲ್ಲಾ ಕೊರಕಲುಗಳು ಬಿದ್ದು ನಂತೆಗೆ ಹೋಗುವ ಗಾಡಿಗಳಿಗೆ ಬಹಳ ತೊಂದರೆಯಾಗಿರುತ್ತೆ. ಕೂಡಲೇ ನಂಬಂಧಪಟ್ಟ ಇರಾಖೆಯವರು ನರಿಪಡಿಸಿ ರಿಪೇರಿ ಪೂರ್ತಿಮಾಡಿಸುತ್ತಾರೆಂದು ನಂಬಿರುತ್ತೇವೆ.

ಚಿತ್ರದುರ್ಗ.—ಎರಡು ವಾರಗಳ ಕೆಳಗೆ ಮೂರು ದಿನಗಳ ತನಕ ಒಳ್ಳೆ ಮಳೆ ಆಗಿದೆ. ಜೋಳ ಮತ್ತು ರಾಗಿ ಪೈರುಗಳು ಚೆನ್ನಾಗಿ ಬೆಳೆದಿವೆ. ಈಗ [illegible] ಮಳೆ ಬರುತ್ತಲೂ ಇದೆ. ನೀರಿನ ಕಷ್ಟ ಪರಿಹಾರವಾಗಿ ಹೆಸರು ಅಲಸಂದೆ ಕಾಳುಗಳ ತಿಂಗಳು ಹೋಗುವಾರ 21 ನೇ ತಾ. ನಮ್ಮನ್ನಾಳುವ ಮಹಾರಾಜರವರ 43 ನೇ ವರ್ಷ ವರ್ಧಂತಿ ಮಹೋತ್ಸವವು ಕೋಲಾಹಲದಿಂದ ನಡಿಸಲ್ಪಟ್ಟಿತು. ಟವ್ ಹಾಲನಲ್ಲಿ ಸಭೆ ಸೇರಿ ಪ್ರಭುಗಳ ಗುಣಕಥನಗಳನ್ನು ನಡಿಸಿ ಬಡವರಿಗೆ ದವನ, ಬಟ್ಟೆ ಮುಂತಾದವುಗಳನ್ನು ಕೊಡಿಸಿದರು. ಬಾಲಕ ಬಾಲಕಿಯರಿಗೆ ಮಿಠಾಯಿ ಹಂಚಿಸಿದರು. ಸಾಮಂಕಾಲ ವಿದ್ಯಾರ್ಥಿಗಳಿಗೆ ಪಂದ್ಯಗಳನ್ನು ನಡಿಸಿ ಬಹುಮಾನಗಳನ್ನು ಕೊಟ್ಟರು. ಬಾಣಾಬಿರನುಗಳೂ ದೀಪೋತ್ಸವವೂ ಮಾಡಲ್ಪಟ್ಟವು. ಮುನಲ್ಮಾನರಲ್ಲಿ ವಾಜಿ ಮುಂತಾದವರು ಸೇರಿ ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡಿ ಫೆಲಗ್ರಾಂ ಕೊಟ್ಟರು.—ಜೂರ್ಮೆ ಪ್ರಾರಂಭದಿಂದ ದೀಪದ ಕೀಮೇ ಎಣ್ಣೆ, ತೆಂಗಿನಕಾಯಿ, ವೀಳ್ಯದೆಲೆಗಳ ಹೊರ್ತು ಇತರ ಎಲ್ಲಾ ಪದಾರ್ಥಗಳಿಗೂ ನುಂಕವನ್ನು ಪಪಾ ಮಾಡಿರುವುದಾಗಿಯೂ, ಗಾಡಿಗಳಿಗೆ ಜನರು ನಂಬರು ಹಾಕಿಸಿಕೊಳ್ಳಬೇಕೆಂದೂ ನಮ್ಮ ಮ್ಯುನಿಸಿಪಾಲಿಟಿಯವರು ಇನ್ತಿಹಾರು ಹಾಕಿಸಿರುತ್ತಾರೆ.—ಕಳೆದ ಜೂರ್ 21 ನೇ ತಾ. ಸೋಮವಾರ ಸಂತೆಯಲ್ಲಿ ಹಗ್ಗ ಮುಂತಾದವುಗಳನ್ನು ಮಾಡುವ ಕೊರಚರ ರಾಮ ಎಂಬವನು 19 ನಾಲ್ಕಾಣೆ ಮತ್ತು 5 ಎರಡಾಣೆ ಬೋಟಾ ನಾಣ್ಯಗಳನ್ನೂ 6 ಪಿತ್ತಾಳೆ ವರಹಾಗಳನ್ನೂ ಮಾರುತ್ತಿದ್ದನೆಂದು ಪೋಲೀಸಿನವರು ಹಿಡಿದು ಲಾಕಪ್ಪಿನಲ್ಲಿ ಇಟ್ಟಿರುತ್ತಾರೆ.

ಪುಣನೂರು.—ನೋನೇ ಮಳೆಯೇ ಹೊರ್ತು ದೊಡ್ಡ ಮಳೆಯಾಗಲಲ್ಲ. ರೈತರು ಈಗ ಬಿತ್ತಲು ಪ್ರಾರಂಭಿಸಿದಾರೆ. ಧಾರಣೆವಾಸಿಗಳು ವಿರಾತ್ತಲಿವೆ. ಬಡಬಗ್ಗರ ಮತ್ತು ಕೂಲಿವಾಡಿನವರ ಸ್ಥಿತಿ ಶೋಚನೀಯವಾಗಿದೆ.—ಕಳೆದ ತಿಂಗಳು ತಾ. 29-30 ರಲ್ಲು ಇಲ್ಲಿನ ಅಮೃತಮಹಲ್ ಇರಾಖೆಯ ಅನೇಕ ವಸ್ತುಗಳು ಹರಾಜಾದವು. ಪ್ರಸಿದ್ಧ ಇಲಾವಾ ಹನುಗಳೂ, ಕರುಗಳೂ ಕೂಡ ಹರಾಜಿಗೆ ಇಟ್ಟರುವುದನ್ನು ನೋಡಿ ಅನೇಕರು ಆಶ್ಚರ್ಯಗೊಂಡರು. ನದರಿ ಇರಾಖೆಯ ಅಧಿಕಾರಿಯಾದ ಮಾ|| ನರನೋಜಿರಾಯರಿಗೆ ಬೆಂಗಳೂರು ಹೆಡ್ಕಾರ್ಟರ್ ಫಾರಂಗೆ ವರ್ಗವಾಗಿರುವುದೆಂದು ತಂತೀ ವರ್ತಮಾನವು ಅಕಸ್ಮಾತ್ತಾಗಿ ಬಂತು. ಇವರು ಈ ನ್ಥಳಕ್ಕೆ ಬಂದು 4-6 ತಿಂಗಳ ಮಾತ್ರವೇ ಆಗಿತ್ತಾಗಿ ಬಂತು. ಇವರು ಈ ನ್ಥಳಕ್ಕೆ ಬಂದು 4-6 ತಿಂಗಳ ಮಾತ್ರವೇ ಆಗಿದ್ದರೂ ಎಲ್ಲರ ವಿಶ್ವಾಸಕ್ಕೆ ಪಾತ್ರರಾಗಿರುತ್ತಾ ಒಂದು ಪ್ರಗಾಯಸ್ಥ ಸಮಾಜವನ್ನು ಏರ್ಪಡಿಸಿ ಕ್ಲಬ್ಬು, ರೀಡಿಂಗ್ ರೂಮು ಮುಂತಾದವುಗಳಲ್ಲಿ ಬೆರೆಯುತ್ತಿದ್ದರು. ತಾ. 4 ರಲ್ಲು ಇಲ್ಲಿನ ಎಲ್ಲಾ ಅಧಿಕಾರವರ್ಗದವರೂ, ಅವರ ಹಿತಮಿತ್ರರೂ ಸೇರಿ ಮಾ|| ಚಂಪಶೇಜರ ದೀಕ್ಷಿತರ ಅಧ್ಯಕ್ಷತೆಯಲ್ಲಿ ಒಂದು ನಂತೋಷ ಕೂಟವನ್ನು ನಡಿಸಿ ಅವರಲ್ಲಿದ್ದ ಸಹಜಗುಣ ಕಥನಗಳನ್ನೂ ಇಲಾವಾ ಕೆಲನಗಳ ಮುತುವರ್ಜಿಯನ್ನೂ ವಿವರಿಸಿದ ಮೇರೆ ತಕ್ಕ ಸನ್ಮಾನ ಗಳನ್ನು ಮಾತಿ ಕಳುಹಿಸಿಕೊಟ್ಟರು.—ಶಿವ್ಯತಮಹಲ್ ಇರಾಖೆಯ ವಸ್ತಾರ 5-6 ಸಾವಿರ ರೂಪಾಯಿನ ಕಚೇರಿಯು ಪಾಳುಗೋಡೆಗಳಾಗಿ ನಿಂತಿರುವುದು. ಮತ್ತೆ 30 ದೊಡ್ಡ ಅಂಕಣಗಳುಳ್ಳ ನಾಲು ಮನೆಗಳು ಸಹ ನಂಪೂರ್ಣವಾಗಿ ಮುರಿದುಬಿದ್ದು ಅನಪ್ಕರವಾಗಿದೆ. ಈ ನ್ಥಿತಿಗೆ ಬಂದಿರುವ ಕಟ್ಟಡಗಳನ್ನು ರಿಪೇರಿ ಮಾಡಿನುವುದಕ್ಕೆ 15 ನಾವಿರ ರೂಪಾಯಾದರೂ ಆಗಬಹುದೆಂದು ಬಲ್ಲವರು ಹೇಳುತ್ತಾರೆ.—ನೀರಿನ ಕೊಳಾಯಿಗಳನ್ನು ಇಡಿನಬೇಕೆಂದು ಬಹು ವರ್ಷಗಳಿಂದಲೂ ಯೋಚನೆಯಿದ್ದದ್ದನ್ನು ತೆಪ್ಪಿ ಕಮಿಷರ್ಟರು ನ್ಪೆಷಲ್ ಇಂಜನಿಯರನ್ನು ಕರೆದು ನೆಯಲ್ಲಿದ್ದದ್ದನ್ನು ತೆಪ್ಪಿ ಕಮಿಷರ್ಟರು ನ್ಪೆಷಲ್ ಇಂಜನಿಯರನ್ನು ಕರೆದು ಕೊಂಡುಬಂದು ಅಜುಮಾಯಿಷಿ ಮಾಡಿನಿದರು. ಈ ವರುಷದಲ್ಲೇ ಈ ಕೆಲನವು ಪ್ರಾರಂಭವಾಗುವವಾಗಿ ವರ್ತಮಾನವಾದರೂ ಇನ್ನೂ ಅದರ ವಿಚಾರವೇ ಇಲ್ಲ. ಮಳೆ ಬೆಳೆ ಕೂಲ ವಗ್ಯೆರೆ ಇಲ್ಲದಿರುವುದರಿಂದ ಈಗಲಾದರೂ ಇದನ್ನು ಪ್ರಾರಂಭಿಸಿ ಅನೇಕರ ಜೀವನಕ್ಕೂ, ಕೂಲಿವಾಡಿನವರಿಗೂ ಅನುಕೂಲವಾಗುವಂತೆ ಮಾಡಿದರೆ ಈ ಕ್ಷಾಮಕಾಲದಲ್ಲಿ ನರ್ಕಾರದವರೇ ಬಡವರನ್ನು ಕಾವಾಡಿದಂತೆ ಆಗುತ್ತದೆ.

ASIAN LIFE POLICY

BONUS DECLARED Rs. 50

for each policy of Rs. 1,000
for Quinquennium

Now is the time to take a Life Policy of Asian.
Good opportunity to take the Agency
for your District

ASIAN ASSURANCE COMPANY, LTD.
BOMBAY

Apply to :— [23-2]
RAMU & BROS., CHIEF AGENTS, BANGALORE
or to
The Manager, 30 THAMBU CHETTY STREET, Madras.

ಮಿತವಾದ ಬೆಲೆಗೆ ಅಮಿತವಾದ ಬೆಳಕು
ಪ್ರತಿಯೊಬ್ಬರೂ ಗಮನಿನಬೇಕಾದ ವಿಷಯ.

ಬೆಂಗಳೂರು.—ಇದೇ ತಾ. 4 ನೇ ಭಾನುವಾರ ಸಾಯಂಕಾಲದಲ್ಲಿ ಬೆಂಗಳೂರು ಸಿಟಿ ಕೋಚೆಯ ಮುಂಭಾಗದಲ್ಲಿ ರಿಟೈರ್ಡ್ ಚೀಫ್ ಇಂಜಿನಿಯರ್ ರಾಜನಭಾಭೂಷಣ ಮಿ॥ ಕರ್ನೂರ್‌ಶ್ರೀನಿವಾಸರಾಯರವರು ಬಡ್ಡರ್ ಫಂಡಾರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿರುವುದನ್ನೂ ಮತ್ತು ಬಡ್ಡರನ್ನು ನೇಯುವುದರಲ್ಲೂ ಉಪಯೋಗಿಸುವುದರಲ್ಲಿಯೂ ನಮ್ಮ ಧರತುಂಡದವರಿಗೆ ಉಂಟಾಗುವ ಅನೇಕ ಗುಣಗಳನ್ನೂ ತೋರಿಸಿ ಬಹಳ ಕಾಲ ಉಪನ್ಯಾಸವನ್ನು ನಡಿಸಿದರು. ಮೇಲ್ಕಂಡ ಉಪನ್ಯಾಸಕ್ಕೆ ದೇಶಪಾಂಡೆ ಗಂಗಾಧರರಾಯರವರೂ, ಸಿ. ರಾಜಗೋಪಾಲಚಾರ್ಯರವರೂ, ಇನ್ನೂ ಅನೇಕ ಮಂದಿ ದೊಡ್ಡ ದೊಡ್ಡ ಮನುಷ್ಯರೂ ದಯಮಾಡಿದ್ದರು. ಈ ವಿಷಯವಾಗಿ ಮಹಾತ್ಮಾ ಗಾಂಧಿಯವರೂ ವೈಸ್ರಾಯಿಗಳಾದ ಅನೇಕ ಕಾಂಗ್ರೆಸ್ ಪೆಂಬರುಗಳೂ ಪಟ್ಟಿರುವ ಅಭಿಪ್ರಾಯಗಳನ್ನೂ, ಇನ್ನೂ ಅನೇಕ ವಿಷಯಗಳನ್ನೂ ಅಧ್ಯಕ್ಷರವರು ಬಹಳ ವಿಶದವಾಗಿ ತಿಳಿಸಿದರು. ಮತ್ತು ನ್ಯಾಯವಾಗಿ ಧಾರವನ್ನು ತಮಾರ್ಜಾದಿ ತಮ್ಮ ತಮ್ಮ ಬಟ್ಟೆಗಳನ್ನು ತಾವೇ ಮಾಡಿಕೊಳ್ಳುವುದರಲ್ಲಿ ಇಂಡಿಯಾ ದೇಶದ ದಾರಿದ್ರ್ಯವು ಹತವಾಗಿ ವಿಶ್ವೈರ್ಯವಂತರಾಗುವುದರಲ್ಲಿ ಏನೂ ಸಂದೇಹವಿಲ್ಲವೆಂದು ತಿಳಿಸಿದ್ದರಲ್ಲದೆ ಸಂವತ್ಸರಕ್ಕೆ 60 ಕೋಟಿ ರೂಪಾಯಿ ಪರದೇಶಗಳಿಗೆ ಇಂಡಿಯಾ ದೇಶದಿಂದ ಹೋಗುವುದನ್ನು ನಿಲ್ಲಿಸುವುದರಲ್ಲಿ ಪ್ರತಿಯೊಬ್ಬ ಮನುಷ್ಯನೂ ಪುಣ್ಯವಂತನಾಗುವುದಲ್ಲದೆ ಇಂಡಿಯಾ ದೇಶದ ಹಣವನ್ನು ಮಿಗಿಸಿಕೊಂಡು ಸ್ವಾತಂತ್ರ್ಯಮಾನ, ನಂತೋಷಗಳನ್ನು ಪಡೆಯಬಹುದೆಂದು ಹೇಳಿದರು. ಬಡ್ಡರ್ ಫಂಡಾರವನ್ನು ಬೆಂಗಳೂರಲ್ಲಿ ತೆಗೆದಿರುವುದು ಅನೇಕ ಬಡವರಿಗೂ ದೇಶಾಭಿಮಾನಿಗಳಿಗೂ ಕಾಂಗ್ರೆಸ್ ಪ್ರೀತಿಯುಳ್ಳವರಿಗೂ ಬಹಳ ಅನುಕೂಲವನ್ನೂ ನಂತೋಷವನ್ನೂ ಉಂಟುಮಾಡಿರುತ್ತೆ.

ಕ್ಲೋಸ್‌ಪೇಟೆ ತಾ॥ ನುಗ್ಗನಹಳ್ಳಿ.—ಕಳೆದ ತಿಂಗಳು 20 ನೇ ತಾ. ಈ ಗ್ರಾಮದ ಜಮೀರ್ದಾರ್ ಮಿ॥ ಲಿಂಗಪ್ಪನವರು ತಮ್ಮ ಮೊಮ್ಮಗಳ ವಿವಾಹ ಮಹೋತ್ಸವವನ್ನು ಬಹಳ ವೈಭವದಿಂದ ನಡಿಸಿದರು. ಬಂದೇ ಮತದ ಶ್ರೀಸ್ವಾಮಿಗಳೇ ಮುಂತಾಗಿ ಅನೇಕ ಬಂಧುವರ್ಗದವರು ನೆರೆದಿದ್ದರು. ಈ ಮಹೋತ್ಸವಕಾಲದಲ್ಲಿ ನಾವಿಬ್ಬರು ಜನಗಳಿಗೆ ನಂತರ್ಪಣೆನೆಡಿಸಿದರು. ಈ ಗ್ರಾಮದ ಬಳಿ ಹರಿಯತಕ್ಕ ಅರ್ಕಾವತಿ ನದಿಗೆ ರಾಮದೇವರ ಬೆಟ್ಟದ ಬಳಿ ಅಡ್ಡಗಟ್ಟೆ ಹಾಕಿ ಬೆಂಗಳೂರಿಗೆ ನೀರು ನಪ್ಲೈ ಮಾಡುತ್ತಾರೆಂದು ವದಂತಿ ಇದೆ. ಕೆರೆ ಮಾಡಲು ಅಜಮಾಯಿಷಿಗಾಗಿ ಎಗ್ಜಿಕ್ಯುಟಿವ್ ಇಂಜಿನಿಯರು ಕಳೆದ ತಿಂಗಳು ತಾ. 19 ರಲ್ಲಿ ಇಲ್ಲಿಗೆ ದಯಮಾಡಿಸಿ ಪರಾಂಬರಿಸಿಕೊಂಡು ಹೋಗಿರುತ್ತಾರೆ. ಇಂಜಿನಿಯರ್ ಡಿವಾರ್ಟುಮೆಂಟಿನವರು ಒಂದು ವಾರದಿಂದ ಅಳತೆಮಾಡುತ್ತಾ ಇದಾರೆ. ಇವರು ಅಂದಾಜು ಮಾಡತಕ್ಕ ಸ್ಥಳದಲ್ಲಿ ಕೆರೆ ಆಗುವ ಪಕ್ಷಕ್ಕೆ ಸುಮಾರು 40-45 ಗ್ರಾಮಗಳು ಮುಳುಗಿಹೋಗಲು ಏನೂ ಸಂದೇಹವಿಲ್ಲ. ಈ ಪ್ರಾಂತ್ಯದ ರೈತರು ಇಂಥಾ ಆಸ್ತಿಪಾಸ್ತಿಗಳನ್ನೆಲ್ಲಾ ಬಿಟ್ಟು ಹೋಗಬೇಕಲ್ಲಾ ಎಂಬ ವ್ಯಸನದಿಂದ ಕಳವಳಪಡುತ್ತಿದಾರೆ. ನಾವಿನಾರು ರೂಪಾಯಿ ಖರ್ಚು ಇಟ್ಟು ಅರ್ಧಾಂತಿಕವಾಗಿ ಮನೆಗಳನ್ನು ಕಟ್ಟಿದವರು ಈ ವರ್ತಮಾನ ತಿಳಿದು ಮನೆ ಕೆಲಸವನ್ನು ನಿಲ್ಲಿಸಿ ತಟಸ್ಥರಾಗಿದಾರೆ. ಇಲ್ಲಿ ಕೆರೆ ಮಾಡುವ ವಿಚಾರವಾಗಿ ಈ ತಿಂಗಳು 5 ನೇ ತಾ. ಬೆಂಗಳೂರಲ್ಲಿ ಮೀಟಿಂಗ್ ಇಟ್ಟುಕೊಂಡಿದಾರೆಂದು ವರ್ತಮಾನ ತಿಳಿಯುತ್ತೆ. ಇಲ್ಲಿ ಕೆರೆ ಆಗುವ ವಿಚಾರವನ್ನು ನಪರಿ ಕಮಿಟಿಯ ಮೆಂಬರುಗಳಾಗಲಿ, ಈ ಪತ್ರಿಕೆಯ ಚಂದಾದಾರರಾಗಲಿ, ಅಥವಾ ಎಡಿಟರವರಾಗಲಿ ತಿಳಿದ ಪಕ್ಷಕ್ಕೆ ಈ ಪತ್ರಿಕೆ ಮುಖೇನ ತಿಳಿಸಿ ಈ ಪ್ರಾಂತ್ಯದ ಪ್ರಜೆಗಳ ಕಳವಳವನ್ನು ಪರಿಹರಿಸುತ್ತಾರೆಂದು ನಂಬುತ್ತೇವೆ.



ರೂ. ಗೆ ಒಂದು ಬಾಟ್ಲಿ. ಎಲ್ಲಾ ಔಷಧ ಷಾಪುಗಳಲ್ಲೂ ದೊರೆಯುತ್ತೆ.

ಕೆಮ್ಮುಗಳು, ಶೀತ, ನೆಗಡಿಗಳಿಗೆ ನೀವು ಉಸುರಾಡುತ್ತಾ ವಾಸಿಮಾಡಿಕೊಳ್ಳುವ ಔಷಧ.

ಗಂಟಲು ಗಾಲೆನ್ನುವುದಾಗಲಿ ಎದೆಯು ಭಾರವಾಗಾಗಲಿ ಕಾಣಿಸಿಕೊಂಡ ಒಡನೆಯೇ ಪೆಪ್ಸ್ ಬಿಲ್ಲೆಯನ್ನು ಬಾಯಲ್ಲಿ ಹಾಕಿಕೊಂಡು ಕರಗಿಸಿ.

ಪೆಪ್ಸ್‌ನಿಂದ ಕರಗಿದ ಹಾಗೆ ಹೊರಡುವ ಶಕ್ತಿಯುಳ್ಳ ಔಷಧ ಸಾರವೂ ಹದೆಯೂ ಸೂಕ್ಷ್ಮವಾದ ಭಾಗಗಳಿಗೆಲ್ಲಾ ನೇರವಾಗಿ ಉಸಿರಿನೊಡನೆ ಪ್ರವೇಶಿಸಿ ಗಂಟಲಿನಲ್ಲಿ ಶುದ್ಧಿಮಾಡಿ ಆಪ್ಯಾಯನವನ್ನು ಕೊಡುವುದು. ಎದೆಯ ಭಾರವನ್ನು ತೆಮನಮಾಡುವುದು. ಬಾಧೆಯು ಶ್ವಾಸನಾಳಗಳಿಗೆ ವ್ಯಾಪಿಸದಂತೆ ನಿವಾರಣೆ ಮಾಡುವುದು. ಗಂಟಲು ಭಾರ, ಇರಿತ, ಕಟ್ಟಿಕೊಂಡಿರುವುದು, ಇವನ್ನೆಲ್ಲಾ ಪೆಪ್ಸ್ ಬಹಳ ಬೇಗನೆ ನಿವಾರಣೆ ಮಾಡುತ್ತದೆ. ಶ್ವಾಸನಾಳಗಳಲ್ಲಿ ಇರಬಹುದಾದ ವಿಷಕ್ರಿಮಿಗಳನ್ನು ಕೊಂದು ಹೊರಹಾಕುತ್ತದೆ. ಶ್ವಾಸವಾಡುವ ವೇಹಭಾಗಗಳನ್ನೆಲ್ಲಾ ಹೊಸಪರಿ ಮಾಡಿ ಬಲಪಡಿಸುವುದು.

ಎಂಥಾ ಹವಾದಲ್ಲಾದರೂ ಯಾವುದೊಂದು ಕೆಡುಕೂ ಆಗದಂತೆ ಶ್ವಾಸಕೋಶವನ್ನು ಕಾಪಾಡುವುದರಲ್ಲಿ ಪೆಪ್ಸ್ ಪ್ರಖ್ಯಾತಿಗೊಂಡಿದ್ದಾಗಿದೆ.

ಈ ದಿನವೇ ಒಂದು ಬಾಟ್ಲಿ ತಂದಿಟ್ಟುಕೊಳ್ಳಿ!!

Peps ಪೆಪ್ಸ್

ಕಳೆದ ಜೂ॥ ತಾ. 26 ಕ್ಕೆ ಆಖೈರಾದ ಒಂದು ವಾರದಲ್ಲಿ ಸಂಸ್ಥಾನಾಮಳಿ ಪ್ಲೇಗ್ ಉಪದ್ರವದಲ್ಲಿ 32 ಕಾಯಿಲೆಗಳೂ ಈ ರೋಗದಿಂದ 15 ಮರಣಗಳೂ ಆದವು. (ಹಿಂದಿನ ವಾರ 20 ಕಾಯಿಲೆಗಳೂ 16 ಮರಣಗಳೂ ಆದವು.) ಪ್ಲೇಗ್ ಉಪದ್ರವ ಸುಂಕು ಇದ್ದ ಡಿಸ್ಟ್ರಿಕ್ಟು—ಮೈಸೂರು, ಕಡೂರು ಮತ್ತು ಶಿವಮೊಗ್ಗಾ. ಬೆಂಗಳೂರು ಸಿಟಿ, ಮೈಸೂರು ಸಿಟಿ ಮತ್ತು ಕೋಲಾರ್ ಚಿನ್ನದ ಗಣಿಗಳಲ್ಲಿ ಈ ರೋಗದ ಸುಂಕು ಇರಲಿಲ್ಲ.

1924 ರಲ್ಲಿ ಇದೇ ವಾರದಲ್ಲಿ 59 ಜನರಿಗೆ ತಗಲು 49 ಮರಣಗಳಾದವು. 1923 ರಲ್ಲಿ 17 ಜನರಿಗೆ ತಗಲು 11 ಮರಣಗಳಾದವು.

ವಾಂತಿಭೇದಿ ಉಪದ್ರವ ಸಂಸ್ಥಾನಾಮಳಿ ಎಲ್ಲಿಯೂ ಕಾಣಿಸಿಕೊಳ್ಳಲಿಲ್ಲವೆಂದು ತಿಳಿಸಲ್ಪಟ್ಟಿದೆ.

ಇಪ್ಪೈಯಂಜಾ ಕಾಯಿಲೆಯು ಕೋಲಾರ್ ಚಿನ್ನದ ಗಣಿಗಳಲ್ಲಿ ಕಾಣಿಸಿಕೊಂಡು ಒಂದು ಮರಣವಾಯಿತೆಂದು ತಿಳಿಸಲ್ಪಟ್ಟಿದೆ.

ಮರಕಳಿಸುವ (ಕೂರೇಹೇನು) ಜ್ವರವು ಸಂಸ್ಥಾನಾಮಳಿ ಎಲ್ಲಿಯೂ ಕಾಣಿಸಿಕೊಳ್ಳಲಿಲ್ಲವೆಂದು ತಿಳಿಸಲ್ಪಟ್ಟಿದೆ.

ಕಳೆದ ವಾರ ಎಲ್ಲಾ ಕಾರಣಗಳಿಂದಲೂ ಬೆಂಗಳೂರು ಸಿಟಿಯಲ್ಲಿ ಒಟ್ಟು 52 ಮರಣಗಳಾದವು. ಇದರ ವಿವರ:—ಮಲೇರಿಯಾ ಜ್ವರ 4, ಸನ್ನಿಪಾತ ಜ್ವರ 2, ಇತರ ಜ್ವರಗಳು 3, ಕ್ಷಯ 4, ಅಮಶಂಕೆ ಮತ್ತು ಭೇದಿ 7, ಇತರ ಕಾರಣಗಳು 32.

ಮೈಸೂರು ಸಿಟ್ಟಿನಲ್ಲಿ ಎಲ್ಲಾ ಕಾರಣಗಳಿಂದಲೂ ಒಟ್ಟು 32 ಮರಣಗಳಾದವು. ಇದರ ವಿವರ:—ಮಲೇರಿಯಾ ಜ್ವರ 2, ಸನ್ನಿಪಾತ ಜ್ವರ 6, ಕ್ಷಯ 1, ಇತರ ಕಾರಣಗಳು 23.

ಕೋಲಾರ್ ಚಿನ್ನದ ಗಣಿಗಳಲ್ಲಿ ಕಳೆದ ವಾರ ಒಟ್ಟು 46 ಮರಣಗಳಾದವು. ಇದರ ವಿವರ—ಸನ್ನಿಪಾತ ಜ್ವರ 1, ಇತರ ಜ್ವರ 4, ಕ್ಷಯ 1, ಅಮಶಂಕೆ ಮತ್ತು ಭೇದಿ 15, ಇತರ ಕಾರಣಗಳು 25.

ಮೈಸೂರು ಗೆಜಿಟ್ ಸಂಗ್ರಹ.

ಶ್ರೀಮನ್ಮಹಾರಾಜರವರು ಮಿ॥ ಕೆ. ಚಾಂಡಿಯವರನ್ನು ಕೌನ್ಸಿಲರ್ ಮೊದಲನೆಯ ಪೆಂಬರಾಗಿಯೂ, ರಾಜಕಾರ್ಯಪ್ರಸಕ್ತ ದಿವಾನ್ ಬಹದೂರ್ ಮಿ॥ ಎಂ. ಎಕ್. ಕೃಷ್ಣರಾಯರನ್ನು ಕೌನ್ಸಿಲರ್ ಎರಡನೆಯ ಪೆಂಬರಾಗಿಯೂ ಜೂಲೈ ತಾ. 1 ರಿಂದ ಖಾಯಂ ಮಾಡಿರುತ್ತಾರೆ.

ಮಿ॥ ಪಿ. ಶ್ರೀನಿವಾಸಯ್ಯಂಗಾರ್‌ರನ್ನು ಜೂಲೈ ತಾ. 1 ರಿಂದ ಗವರ್ನಮೆಂಟ್ ಫೈನಾನ್ಷಿಯರ್ ಸೆಕ್ರಿಟರಿಯಾಗಿ ಖಾಯಂ ಮಾಡಿದೆ.

ಸೀನಿಯರ್ ಅ॥ ಕಮಿಷನರ್ ಮಿ॥ ಎಂ. ಎ. ತಿಂಗ್ರಾಚಾರ್ಯರನ್ನು ಜೂಲೈ ತಾ. 1 ರಿಂದ ಡೆಪ್ಯಿ ಕಂಟ್ರೋಲರ್ ಮತ್ತು ರೈಲ್ವೆ ಆಡಿಟರಾಗಿ ನೇಮಕಮಾಡಿದೆ.

ಮಿ॥ ಎಸ್. ವಿಷ್ಣುಪಂತ್ ಬಾದಾಮಿಯವರು ರಿಟೈರಾಗಲು ರಜಾ ಪಡೆದುಕೊಂಡಿರೋಣದರಿಂದ ಮೈಸೂರು ರೈಲ್ವೆ ಅ॥ ಆಡಿಟರ್ ಮಿ॥ ಎ. ಎಕ್. ರಾಘವಾಚಾರ್ಯರನ್ನು ಸಿವಿಲ್ ಬ್ರಾಂಚ್ ಡೆಪ್ಯಿ ಆಡಿಟರಾಗಿಯೂ, ಅ॥ ಕಂಟ್ರೋಲರ್ ಮಿ॥ ಇ. ವಿ. ಗಣಪತಿ ಅಯ್ಯರವರನ್ನು ಮೈಸೂರು ರೈಲ್ವೆ ಅ॥ ಆಡಿಟರಾಗಿಯೂ ನೇಮಕಮಾಡಿದೆ.

ಮಿ॥ ಎಂ. ಅನಂತರಾಮಯ್ಯಂಗಾರ್‌ರನ್ನು ಮೇ ತಾ. 29 ರಿಂದ ಜನರಲ್ ರೆವಿನ್ಯೂ ಸೆಕ್ರಿಟೇರಿಯಟ್ ಎರಡನೇ ಗ್ರೇಡ್ ಸೂಪರ್‌ಇಂಟೆಂಡೆಂಟರಾಗಿ ಖಾಯಂ ಮಾಡಿದೆ. ಮಿ॥ ಎ. ಎಸ್. ಕೃಷ್ಣಾಚಾರ್ಯರು ರಜದ ಮೇಲಿರು ತ್ತಾರಾಗಿ ಮಿ॥ ಎಚ್. ಎ. ಕೃಷ್ಣಸ್ವಾಮಯ್ಯಂಗಾರ್‌ರು ಎರಡನೇ ಗ್ರೇಡ್ ಸೂಪರ್‌ಇಂಟೆಂಡೆಂಟರಾಗಿ ಬದಲಿ ನೋಡತಕ್ಕದ್ದು.

ಮಿ॥ ಆರ್. ಕನ್ನೂರಿರಾಜೆಟ್ಟಿಯವರನ್ನು 200-20-300 ರೂಪಾಯಿ ಗ್ರೇಡ್ ಬುಳ್ಳ ಹೈ ಸ್ಕೂಲ್ ಹೆಡ್ ಮಾಸ್ಟರಾಗಿ ಜೂಲೈ ತಾ. 1 ರಿಂದ ಖಾಯಂ ಮಾಡಿದೆ.

ಗಣಿಗಳ ಇರಾಪೆಯಲ್ಲಿ ಮುಂದೆ ಹೇಳುವವರನ್ನು ಜೂ॥ ತಾ. 2 ರಿಂದ ಖಾಯಂ ಮಾಡಿದೆ:—ಮಿ॥ ಸಿ. ಇ. ನೂರ್ಜಹಾರಾಯಣರಾಯರನ್ನು ಇನ್‌ಸ್ಪೆಕ್ಟರಾಗಿ, ಮಿ॥ ಕೆ. ದೊರಸಾಮಯ್ಯರನ್ನು ಅ॥ ಇನ್‌ಸ್ಪೆಕ್ಟರಾಗಿ, ಮಿ॥ ಎ. ನಾರಾಯಣರಾಯರನ್ನು ಜೂನಿಯರ್ ಇನ್‌ಸ್ಪೆಕ್ಟರಾಗಿ.

ಸರ್ವೆ ಇರಾಪೆ ಅ॥ ಸೂಪರ್‌ಇಂಟೆಂಡೆಂಟ್ ಮಿ॥ ಆರ್. ಎ. ನರಸಿಂಹಯ್ಯಂಗಾರ್‌ರನ್ನು ತೀರ್ಥಹಳ್ಳಿ ಸಬ್ ಡಿವೀಜನ್‌ಗೂ, ಮಿ॥ ಎಸ್. ಸೀತಾರಾಮಯ್ಯನವರನ್ನು ತೀರ್ಥಹಳ್ಳಿ ಸಬ್ ಡಿವೀಜನ್‌ನಿಂದ ಹಾನನ ದಿಸ್ಟ್ರಿಕ್ಟ್ ಟ್ರೈಜರಿ ಧಾರ್ಡಿಗೂ ವರ್ಗಮಾಡಿದೆ. ದಿಸ್ಟ್ರಿಕ್ಟ್ ಟ್ರೈಜರಿ ಆಫೀಸರ್ ಮಿ॥ ಸಯ್ಯದ್ ಅಬ್ದುರ್ ಖಾಲಕ್‌ಯವರನ್ನು ಬೆಳ್ಳಿಪಾಡಿ ವರಾಹಸ್ವಾಮಿ ದೇವಸ್ಥಾನದ ಮತ್ತು ಸೆಟ್ಲ್‌ಮೆಂಟ್ ಇರಾಪೆಗಳ ಸೂಪರ್‌ಇಂಟೆಂಡೆಂಟ್ ಮಿ॥ ಡಿ. ಶ್ರೀನಿವಾಸಯ್ಯಂಗಾರ್ಯರವರಿಗೆ ಜೂಲೈ ತಾ. 3 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬಿಳೀ ತೊನ್ನಿಗೆ ಖಂಡಿತವಾದ ಔಷಧ.

"ಲೂಕೋಡರ್ಮ ಸ್ಪೆಸಿಫಿಕ್" ಬಿಳೀ ತೊನ್ನಿಗೆ ಖಂಡಿತವಾದ ಔಷಧ. ಶರೀರದ ಮೇಲೆ ಯಾವ ಕಾರಣದಿಂದಾಗಲಿ ಬಿಳಿ, ನೀಲಿ, ಕೆಂಪು ಮಚ್ಚೆಗಳು ಯಾವುದೇ ಕಾಣಿಸುತ್ತಿದ್ದಾಗ್ಯೂ, ಈ ಔಷಧವನ್ನು ಹಾಕಿದರೆ ನಾರ್ಮಾರು ದಿನಗಳಲ್ಲೇ ಸಂಪೂರ್ಣವಾಗಿಯೂ ಖಂಡಿತವಾಗಿಯೂ ತೊಡೆದುಹೋಗುತ್ತದೆ. ಕ್ರಯ ರೂ. 4-8-0. ಕಾಗದವನ್ನು ಇಂಗ್ಲೀಷಿನಲ್ಲೇ ಬರೆಯಬೇಕು.

[30-1] ವಿಳಾಸ:—DR. W. N. DIXIT, Poona City.

WANTED

ENERGETIC, INFLUENTIAL MEN in every District and Taluq headquarters of the Madras Presidency, Travancore, Mysore and Hyderabad, to become Agents for The General Assurance Society, Ltd., Ajmer. Cash Security essential.

Apply to:—

MR. S. KABBOOR, B.A., F.S.S.,
(Lond.), Superintendent,
44, Linghi Chetty Street, Madras.

[19-3]

HEAD OFFICE — THE GENERAL ASSURANCE SOCIETY LTD. — AJMER

ಉಕ್ಕಿನ ಗರ್ಡರುಗಳು.

ಕಲಾಯಿ ತಗಡುಗಳು, ಸಿಮೆಂಟ್ ಕಟ್ಟಿಡಗಳಿಗೆ ಬೇಕಾಗುವ ಎಲ್ಲಾ ತರದ ಖಚ್ಚಿಣದ ನಾಮಾನುಗಳು ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ. ಕೆಲಸ ಸಂಪೂರ್ಣ ತೃಪ್ತಿಕರ. ನಾಮಾನುಗಳು ಕೂಡಲೇ ರವಾನಿಸಲ್ಪಡುತ್ತೆ.

ಶ್ರೀ ಕೃಷ್ಣ ಇಂಜನಿಯರಿಂಗ್ ಕಂಪನಿ,

ಪೋಸ್ಟ್ ಬಾಕ್ಸ್ ನಂ. 257,

[211-12] ಮದರಾಸ್.

ಹೊಸ ಮುದ್ರಣ! ಅಂದವಾದ ಅಕ್ಷರ!!

ಸಂಗೀತ=ಶಾಸ್ತ್ರ=ಪ್ರವೇಶ=ದಾಯಿನಿ

ಎಂಬ ಅಪೂರ್ವ ಗ್ರಂಥವು.

ಇದರಲ್ಲಿ ಸಂಗೀತಶಾಸ್ತ್ರ ಸಂಬಂಧವಾದ ಅನೇಕ ರಹಸ್ಯಗಳು ಸುಲಭ ರೀತಿಯಲ್ಲಿ ವಿವರಿಸಲ್ಪಟ್ಟಿರುವುದಲ್ಲದೆ ಸರಳೆ, ಅಲಂಕಾರ, ಗೀತ, ಸ್ವರಜತಿ, ವರ್ಣಗಳೂ, ತ್ಯಾಗಯ್ಯರು, ಪಟ್ಟಣಂ ಸುಬ್ರಹ್ಮಣ್ಯಯ್ಯರು, ದೀಕ್ಷಿತರು, ನದಾ ಶಿವರಾಯರು, ಶಾಮಶಾಸ್ತ್ರಿಗಳು ಮೊದಲಾದ ಸುಪ್ರಸಿದ್ಧ ಸಂಗೀತ ವಿದ್ವಾಂಸರಿಂದ ರಚಿತವಾದ 106 ಕೃತಿಗಳೂ, ಕೆಲವು ಜಾವಡಿಗಳೂ, ಸ್ವರ ಚಿಹ್ನೆ ಸಹಿತವಾಗಿ ಕೊಡಲ್ಪಟ್ಟಿವೆ. ಸಂಗೀತ ವಿದ್ಯಾರ್ಥಿಗಳಿಗೂ, ಬೋಧಕರಿಗೂ ಪ್ರಯೋಜನಕಾರಿಯಾದ ಪುಸ್ತಕವು ಕನ್ನಡ ಅಕ್ಷರದಲ್ಲಿಯೇ ಮುದ್ರಿತವಾಗಿದೆ.

ಕ್ರೌನ್ ಅಷ್ಟಪತ್ರ 320 ಪುಟಗಳು. ಬೆಲೆ ರೂ. 2-0-0.

ಅಡ್ವಾನ್ಸು ಇಲ್ಲದೆ ವಿ. ಪಿ. ಮಾಡುವುದಿಲ್ಲ.

ನಮ್ಮ ಪುಸ್ತಕಗಳನ್ನು ಮಾರುವುದಕ್ಕೆ ಏಜಂಟರುಗಳು ಬೇಕಾಗಿದೆ.

ಹೆಚ್. ಎಸ್. ರಾವ್ ಬ್ರದರ್ಸ್,

[29-1] ಪುಸ್ತಕ ವ್ಯಾಪಾರಿಗಳು, ಚಿಕ್ಕಪೇಟೆ, ಬೆಂಗಳೂರು ಸಿಟಿ.

ನಿಮ್ಮೋರ್ತ್ತಮವಾದದ್ದು ಯಾವುದೆಂದು ನಿಮ್ಮೊಳಗೆ ನೀವೇ ಗೊತ್ತುಮಾಡಿಕೊಳ್ಳಿ.

ಅನುಮಾನಿಸುವುದೇಕೆ? ಜಿಂದುಸ್ಥಾನ ಉದ್ಯಂತಪ್ಪೂ ಪೋಹಿಸುವುದೇ

ಆಟೋಮೋಹಿನಿ
ಪರಿಮಳ ರಾಜ

ಇದು ನಿಮ್ಮ ಕರಗತವಾಗಿ ಸರ್ವದಾ ನಿಮ್ಮನ್ನು ಆನಂದಪಡಿಸುತ್ತೆ. ಒಂದು ಬಾಟ್ಲಿಯನ್ನು ಕೊಂಡು ಪರೀಕ್ಷಿಸಿ. ನಿಮಗೇ ವೇದ್ಯವಾಗುತ್ತೆ.

ಕ್ರಯಗಳು:—ರೂ. 2; 1-4-0; 0-12-0; 0-10-0; 0-8-0; 0-2-0. ಮಾಪ್ರಿ ಕಾರ್ಡ್—ಆಣೆಗೆ 1. 12 ಕ್ಕೆ 0-10-0. ಸದ್ ಏಜಂಟರು ಬೇಕು.

ಕ್ರಯದ ಪಟ್ಟಿ, ಪರತ್ತು, ಇತ್ಯಾದಿಗಳನ್ನು ಬರೆದು ತರಿಸಿಕೊಳ್ಳಿ.

ಮುಖ್ಯ ಏಜಂಟರು—ಷಾ ಕಂರ್ಪೆ ಜಗ್ಗಾಜಿ ಕಂಪನಿ,

[7-8]

22 ಕ್ಯಾರೆಟ್ ರೋಲ್ಡ್ ಗೋಲ್ಡ್ ಕೇಸಿನ ರಿಸ್ಟ್ ವಾಚ್‌ಗಳು

10 ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವವು.

ಈ ಗಡಿಯಾರಗಳು ಅತ್ಯುತ್ತಮವಾದ ಮೂವೆಂಟ್ಸ್‌ಗಳಿಂದ ಸ್ವಿಜರ್‌ಲ್ಯಾಂಡ್ (ಸ್ವಿಟ್‌ಜೇಡ್) ದೇಶದಲ್ಲಿ ತಯಾರಿಸಿದ್ದು. ಇವುಗಳ ಕೇಸುಗಳು ನೋಡಲಕ್ಕೆ ಭಂಗಾರದಕ್ಕೆ ಸರಿಸಮಾನವಾಗಿದೆ. ಬರಾರು ಫಂಜಿಯನ್ನು ಕೊಡುವದು. ಇವಕ್ಕೆ 10 ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು. ಈ ಚಿತ್ರದಲ್ಲಿರುವ ಯಾವ ಗಡಿಯಾರವನ್ನು ತೆಗೆದುಕೊಂಡಾಗ್ಯೂ ಗಡಿಯಾರ 1 ಕ್ಕೆ ರೂ. 7-0-0. ಕೈಯಲ್ಲಿ ಕಟ್ಟುವ ರೇಷ್ಮೆಯ ಪಟ್ಟಿ ಇನಾಮಾಗಿ ಕೊಡುವೆವು. [238-62] ವಿಳಾಸ—



ಸ್ವಾರ್ಥ್ ಹೌಸ್, ಪೋಸ್ಟ್ ಬಾಕ್ಸ್ ನಂ. 508, ಪಾರ್ಕ್‌ಟೌನ್, ಮದರಾಸ್.

Printed for the Proprietors by F. McD. Tomkinson, and Published at the Wesleyan Mission Press, Mysore. 8/7/1926.

ವೃತ್ತಾಂತ ಪತ್ರಿಕೆ

REGISTERED. M 20

ಕ್ರಯ ೬ ಕಾಸು — ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವುದು — ಕ್ರಯ ೬ ಕಾಸು

ಸಂಪುಟ ೩೯ — ಮೈಸೂರು—ನೇ ೧೯೨೬ನೇ ಇಸವಿ ಜೂಲೈ ತಾರೀಖು ೮ನೇ ಗುರುವಾರ — ಸಂಚಿಕೆ ೨೭

ಬಿಟ್ಟಿ ! ಇನಾಂ !! — ವೈದ್ಯವಿದ್ಯ — ಪುಗಸಟ್ಟೆ!!!

[228-8]

ಸ್ತ್ರೀಯರು, ಪುರುಷರು ಮತ್ತು ಬಾಲಕರು ಓದುವುದಕ್ಕೆ ಯೋಗ್ಯವಾದ, ರಸಿಕವಾದ ಮತ್ತು ತಿಳುವಳಿಕೆಯನ್ನು ಉಂಟುಮಾಡುವ ವಿಷಯಗಳು ತುಂಬಿರುವ ಈ ಪುಸ್ತಕವನ್ನು ಇದುವರೆಗೂ ನೀವು ಓದದೇ ಇದ್ದರೆ ಬರೀದಿ, ಅಂಚೇ ಹಾನಲು ನವ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ಈ ಪುಸ್ತಕವನ್ನು ಈ ದಿವಸವೇ ತರಿಸಿ ಓದಿರಿ. ವಿಳಾಸ—ರಾಜವೈದ್ಯ ನಾರಾಯಣಜೀ ಕೇತವಜೀ, 57, ಜೈನಾಬಜಾರ್ ರೋಡ್, ಮದರಾಸ್.

EMPIRE OF INDIA LIFE ASSURANCE CO., LTD.

(ESTABLISHED 1897.)

ALL WITH PROFIT POLICIES

Issued before 28th February, 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch :— 152, COMMERCIAL STREET. [28-2] *Madras Branch :—* 9 & 10, SECOND LINE BEACH.

ಟೇಬಲ್ ಟೈಂ ಪೀಸ್ ಇನಾಂ



ಈ ನಕ್ಷೆಯಲ್ಲಿ ಕಂಡ ರಾಯಲ್ ಪೌಂಟೆ ಪೇನಾವು ಇಂಗ್ಲಾಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟಿನ ಧಂಗಾರದ ನಿಬ್ಬು ಹಾಕಿದೆ. ಈ ಪೇನಾವಿನಿಂದ ಬರೆಯುವದರಿಂದ ಅಕ್ಷರಗಳು ಬಹಳ ಚೆನ್ನಾಗಿ ಕಾಣು [illegible] ಕರಿಸಿಕೊಳ್ಳುವವರಿಗೆ ಮೇಲ್ಕಂಡ ಟೈಂ ಪೀಸನ್ನು ಇನಾಮಾಗಿ ಕೊಡುವೆವು.

ಕ್ರಯ ಟೈಂ ಪೀಸ್ ಸಹಿತ ಪೇನಾ 1 ಕ್ಕೆ ರೂ. 3-12-0

THE AMERICAN WATCH CO., PARK TOWN, MADRAS. [232-7]

ಅಮೇರಿಕಾ ವಾಚ್ ಕಂಪನಿ, ಪೋಸ್ಟ್ ಬಾಕ್ಸ್ ನಂ. 509, ವಾರ್ಕ್ ಹೌಸ್, ಮದರಾಸು.

ನರಗಳ ಶಕ್ತಿವರ್ಧಕವೆಂದು ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾಗಿರುವ "ನರ್ವಿನಸ್"

(ಸುವರ್ಣ ಮಿಶ್ರ) ಬದುಕಿಗೆ ಅದ್ಭುತ ಆನಂದವನ್ನು ಕೊಡುವುದು.

ರೋಹಗಳಲ್ಲೆಲ್ಲಾ ಭಂಗಾರವೇ ಔತ್ಕೃಷ್ಟವಾದದ್ದಲ್ಲ. ಅದರೂ ಅದನ್ನು ತನ್ನ ರೀತಿಯಲ್ಲಿ ಪ್ರಯೋಗಿಸಿದರೆ ಪ್ರಪಂಚದಲ್ಲಿ ದೇಹಶಕ್ತಿಯನ್ನು ವೃದ್ಧಿಮಾಡುವುದರಲ್ಲಿ ಅದೇ ಅಮೂಲ್ಯವಾದದ್ದು ಎಂದು ಹಿಂದುಸ್ತಾನದ ಪ್ರಾಚೀನ ಭಿಷಗ್ವರು ಹೇಳಿದಾರೆ. ನರ್ವಿನಸ್ ಎನ್ನುವುದರಲ್ಲಿ ಫೂರ್ವಾತ್ಯ, ವಾಶ್ಚಾತ್ಯರ ಸರ್ವೋತ್ತಮ ಔಷಧಗಳನ್ನು ಮಿಶ್ರಣಮಾಡಿದೆ. ದುರ್ಬಲವಾದ ನರಗಳನ್ನು ಆನಂದದಿಂದ ಬಲಪಡಿಸುವುದು. ನಿಸ್ಸಾರವಾದ ರಕ್ತ, ತೂಕದಲ್ಲಿ ಕಡಮೆ, ರಕ್ತಕೆಟ್ಟಿರುವದು, ನರಗಳ ಅಶಕ್ತತೆ, ಅತಿತರೆನೋವು, ಮಂಬುದ್ಧಿತ, ಅಜೀರ್ಣ, ಇತ್ಯಾದಿ ನಷ್ಟಕಾರಿಗಳಾದ ನಮನ್ರ ರೋಗಗಳನ್ನೂ ನಿರ್ಮೂಲ ಮಾಡುತ್ತವೆ. ವೈದ್ಯರು ಇದನ್ನು ಮೆಚ್ಚಿ ಹೊಗಳಿದಾರೆ. ಕಟ್ಟುನಿಟ್ಟಾದ ನಿರ್ಬಂಧಗಳೇನೂ ಇಲ್ಲ. ಬೈರಾಟಿಗಾರರು, ಮೆದುಳಿನ ಕೆಲಸದವರು, ವಿದ್ಯಾರ್ಥಿಗಳು, ಇವರಿಗೆಲ್ಲಾ ಬಹಳ ಅಮೂಲ್ಯವಾದದ್ದು. ಸ್ತ್ರೀ ಕಡಮೆಯಾದವರು ಇನುಗು ರೇಷನಿಯಿಂದ ಉಪಯೋಗಿಸಿದರೆ ನರ್ವಿನಸ್ ಒತು ಆಶ್ಚರ್ಯಕರವಾದ ಪ್ರಯೋಜನವನ್ನುಂಟುಮಾಡುವುದು. ಸುವರ್ಣ ಮಿಶ್ರವಾದ ನರ್ವಿನಸ್ ಒಂದು ತಿಂಗಳ ಸೇವನೆ ಬಾಟ್ಲಿಗೆ ರೂ. 7 (ಪೋಸ್ಟ್ ಥಾರ್ಜು ಬೇರೆ). ಉಷ್ಣದೇಶಗಳಿಗೆ ಸರ್ವೋತ್ತಮವಾದ ದಿಪಥ. ಮಿ॥ ಡಿ. ವೆಂಕಟರಾವ್, ಬಿ.ಎ., ಸ್ಯೆದಾಪೇಟೆ ಪೋಸ್ಟ್, ಇವರು ಬರೆಯುವುದು—ನನ್ನ ಲವಲವಿಕೆಯು ವೃದ್ಧಿಯಾಗಿದೆ. ಮಿ॥ ಎಂ. ಬಿ. ನಾಯಕರ್, ಮದರಾಸ್—ರಕ್ತ ಶುದ್ಧಿ ಚೆನ್ನಾಗಿ ಮಾಡುವುದು. ಮಿ॥ ಡಬ್ಲ್ಯು. ಬಿ. ಮದರಾಸ್—ನಾನು ತೂಕದಲ್ಲಿ 2 ರ್ಾಂಡು ಹೆಚ್ಚಿದೆನು. ಮಿ॥ ಎಚ್. ಕಾರ್ಟರ್, ಜೋಂಬಾಯಿ—ಅತ್ಯಾಶ್ಚರ್ಯಕರವಾದದ್ದು. ಡಾ॥ ಎಸ್. ಮಾಸ್ಕೆ, ಅಹಮದಾಬಾದ್—ಪಿತ್ತರೋಗಿಗೆ ಒಳ್ಳೇದು. ಮಿ॥ ಡಬ್ಲ್ಯು. ಬಿಯಾಟ್ಟ್, ಮದರಾಸ್—ತೂಕದಲ್ಲಿ 2 ರ್ಾಂಡು ಹೆಚ್ಚಿದೆನು. ಮಿ॥ ರೌಫ್ ಬಾರ್, ಸಿ.ಪಿ.ಡಿ. ಸಬ್ ಇನ್‌ಸ್ಪೆಕ್ಟರ್, ಪಾಚ್ಚಾ—ಗುಣಕಾರಿ ಮತ್ತು ತುಂಬಾ ಪ್ರಯೋಜನ. ಮಿ॥ ಎಸ್. ಆರ್. ರಾವ್ ಬಿ.ಎ., ಡೆಪ್ಯಿ ಕಲೆಕ್ಟರ್, ವೆಲ್ಲೂರು—ನನಗೆ ತುಂಬಾ ಗುಣವನ್ನುಂಟುಮಾಡಿದೆ. ಪ್ರಪಂಚದ ಸುಖವನ್ನು ಅನುಭವಿಸಬೇಕಾದರೆ ಈಗಲೇ ಬರೆದು ತರಿಸಿಕೊಳ್ಳಿ. ವಿಳಾಸ—ಬೇಹಾರ್ ಕೆಮಿಕಲ್ ವರ್ಕ್ಸ್, ಭಾಗಲ್ಪುರ್,

[41-88] ಬ್ರಾಂಚ್ ಎಜೆನ್ಸಿ ; ಅಥವಾ ಸೀದಾ ವಿಜಂಟರಿಂದ—ಟಿ. ಸಿ. ನಟರಾಜ್ ಕಂಪನಿ, ಮೈಸೂರು.

BEHAR CHEMICAL WORKS, BHAGALPUR, and MIHIJAM ; (Tel. Add. : "CHEMISTS," BHAGALPUR.) and from Dadha & Co., Madras., T. C. NATARAJ & CO., MYSORE CITY, WOOLLEN MART, MANGALORE.

ಪೆಟ್ರೋಲ್ ಎಂಜಿನ್-ಇರ್ರಿಗೇಷನ್-ಇಲೆಕ್ಟ್ರಿಕ್ ಲೈಟಿಂಗ್ ಸಾಧನಗಳು



ಕ್ರಯ ಕಡಮೆಮಾಡಿದೆ.

ನಿಮ್ಮ ಬೆಳೆ ಬಂದಕ್ಕೆರಡು ಮಾಡಿಕೊಳ್ಳಿ.

ಅಗ್ಗ, ಸುಲಭ, ನಂಬಿಕೆಯಾಗಿದೆ.

ವಿಜಿಂಟರು—

ಬೆಸ್ಟ್ ಅಂಡ್ ಕೊ, ಲಿ.,

ಇಂಜನಿಯರುಗಳು,

ಪೋಸ್ಟ್ ಬಾಕ್ಸ್ ನಂ. 63, ಮದರಾಸ್.

[6-9]

MYSORE L.S. EXAMINATION OF 1927

Notes on English Texts by Mr. S. V. Pichamuttu, B.A., 8 as. Notes on Kanarese Text by Pandit K. Hanumantha Rao, 8 as. Prabandhamuktavali, 12 as. Liberal commission to Booksellers and Teachers.

Apply to:—R. PAUL RAJU & SONS,

Booksellers and Publishers,

[237-7] AVENUE ROAD, BANGALORE CITY.

THE RELIANCE ASSURANCE COMPANY, LTD.

has introduced

NEW SCHEMES OF LIFE ASSURANCES:

(1) Whole Life. Limited payments with Pension;
(2) Anticipatory Endowments;
(3) Triple-Benefit-Policies;

are specially introduced to suit the present day conditions.

WANTED

Agents on *liberal Terms* for *every District* in the Mysore Province.

Please apply to :—

THIRUPATHI BALIJA & COMPANY,

Managing Agents,

[11-5] *New Tharagapet, Bangalore City.*

THE BANK OF MYSORE, Ltd.

Bankers to the Government of His Highness the Maharaja of Mysore.

Head Office.—Avenue Road, Bangalore City.

Branches.—Channapatana, Mysore, C. and M. Station Bangalore, Shimoga, Tumkur, Chikmagalur, Davangere, Gorgaitan and Hatur.

Capital Paid Up.—Rs. 20 lakhs.

Reserve Funds.—Rs. 14,00,000.

Current Accounts are opened and interest at 2½ per cent. per annum allowed on the minimum monthly credit balances up to Rs. 10,000 during each half year.

Fixed Deposits are received for 6 and 12 months at 4 and 5 per cent. per annum, respectively, and for short periods at rates that may be ascertained on application.

Thrift Deposit.—Accounts are opened and interest allowed at the rate of 4 per cent. per annum.

Loans and Cash Credits are granted on approved securities.

Miscellaneous.—Government and other securities received for safe custody, purchases and sales effected, dividends and interest realised as directed.

(By order)

P. W. O'BRIEN,

[82-43] *Manager.*

DR. GUNE'S SPECIFICS,

POST KARAD, (DIST. SATARA).

ನನ್ನ ಕರುಳುಗಳಲ್ಲೂ ಮೂತ್ರ ಪಿಂಡಗಳಲ್ಲೂ ಕೆಲಸಗಳು ತೃಪ್ತಿಕರವಾಗಿ ನಡೆಯದೆ ಕಟ್ಟುಕೊಳ್ಳೋಣದರಿಂದಲೇ ಅನೇಕ ವ್ಯಾಧಿಗಳು ಪ್ರಾಪ್ತವಾಗುವವು. ಅಂಥಾದ್ದನ್ನು ಬಿಡಿಸಿ ತಪ್ಪಿಸುವುದಕ್ಕೆ ಡಾ॥ ಗುಣೆಯವರ

ಲಿವರ್ ಸೊಲ್ಯುಶನ್ ಔಷಧವನ್ನು ನೇಮಿಸಿ

ಇದು ಪಿತ್ತಕೋಶ, ಕರುಳು, ದೊಡ್ಡಕರುಳು, ಮೂತ್ರಪಿಂಡಗಳ ಅಕ್ರಮಗಳೂ, ಮಲಬದ್ಧತೆ, ಶೋಥೆ, ಪಿತ್ತಪಾಮು, ಸರ್ವದಾ ಬರುವ ಜ್ವರ, ಇತ್ಯಾದಿಗಳನ್ನೆಲ್ಲಾ ನಿವಾರಣೆಮಾಡುವುದು. ಕ್ರಯ ರೂ. 1-8-0. ವಿ. ಪಿ. ಮೂಲಕ ರೂ. 2-3-0. [190-15]

ಕನ್ವಲ್‌ಸಾಯಿನ್

ಎಂಬೀ ಔಷಧವು ಬಾಲಗ್ರಹ, ಭೂತಪಿಶಾಚಿ (ಹಿಸ್ಟೆರಿಯ), ಮೂರ್ಛೆ ಇತ್ಯಾದಿಗಳಿಗೆ ಅತ್ಯಂತ ಗುಣಕಾರಿಯಾದದ್ದು. ಕ್ರಯ ಮಾಧ್ಯಿ ಬಾಟ್ಲಿ (ಮಕ್ಕಳಿಗೆ) ರೂ. 1 ; ವಿ. ಪಿ. ಮೂಲಕ ರೂ. 1-8-0. ದೊಡ್ಡವರಿಗೆ ಬಾಟ್ಲಿ ರೂ. 5 ; ವಿ. ಪಿ. ಮೂಲಕ ರೂ. 6.

ಕೆಬಾಯಿನ್

ಎಂಬುದು ಎಷಮಿಶ್ರವಿಲ್ಲದ ಪುಡಿ. ಹಿಟ್ಟಿನ ಕೂಡ ಬೆರಸಿ ಹಾಕಿದರೆ ಇಲಿ, ಹೆಗ್ಗಣಗಳನ್ನು ಓಡಿಸಿ ಕೊಂದುಬಿಡುತ್ತೆ. ಮನೆಯಲ್ಲಿ ಅವುಗಳ ಕಾಟವೇ ತಪ್ಪುವುದು. ಕ್ರಯ 12 ಪೊಟ್ಣಕ್ಕೆ ರೂ. 1 ; ವಿ. ಪಿ. ಮೂಲಕ ರೂ. 1-4-0. 40 ಪೊಟ್ಣಕ್ಕೆ ರೂ. 3 ; ವಿ. ಪಿ. ಮೂಲಕ ರೂ. 3-8-0. ಒಂದು ರೂಪಾಯಿಗೆ ಕಮ್ಮಿ ವಿ. ಪಿ. ಕಳುಹಿಸುವುದಿಲ್ಲ. ಪತ್ರವ್ಯವಹಾರ ಇಂಗ್ಲೀಷಿನಲ್ಲಿ ನಡಿಸಿ.

ವಿಳಾಸ—ಡಾ॥ ಗುಣೆ, ಪೋಸ್ಟ್—ಕರಾಡ್ ಜಿಲ್ಲಾ ಸಾತಾರಾ.

ಒಂದು ಸಾರಿ ಪರೀಕ್ಷಿಸಿರಿ!

ರಗ್ಗುಗಳು, ಶಾಲುಗಳು, ಇತರ ಎಲ್ಲಾ ತರಹೆಯ ಬಟ್ಟೆಗಳನ್ನೂ ಶೇಕಡ 11½ ರೂಪಾಯಿಯ ಕಮಿಷನ್ ಮೇರೆ ಕಳುಹಿಸಿ ಕೊಡುತ್ತೇವೆ. ಎಲ್ಲಾ ಸಾಮಾನುಗಳನ್ನೂ ಪೇಟೆಯಲ್ಲಿ ಬಹಳ ಸುಲಭ ಬರೀದಿಗೆ ಕೊಂಡುಕೊಂಡು ರವಾನಿಸುತ್ತೇವೆ. ವ್ಯಾಪಾರದ ವಿಷಯದಲ್ಲಿ ಯಾವ ವಿಧವಾದ ಮೋಸವೂ ನಡೆಯುವಾರದೆಂಬುದನ್ನು ಖಾತರಿ ಕೊಡುತ್ತೇವೆ. ಪ್ರತಿ ಆರ್ಡರಿನೊಡನೆ ತಮಗೆ ಬೇಕಾದ ಸಾಮಾನುಗಳ ಪೂರ್ತಿ ವಿವರ, ಸ್ಯಾಂಪಲ್ಲುಗಳೂ, ಮತ್ತು ಶೇಕಡ 25 ರೂ. ಅಡ್ವಾನ್ಸೂ ಬೇಕು. ಒಂದು ಸಾರಿ ಆರ್ಡರು ಕೊಟ್ಟಲ್ಲಿ ಖಾತರಿಯಾಗುತ್ತೆ. [22-2]

ವಿಳಾಸೆ—ಷಾ ಧರ್ಜೀ ಜವೇರ್ ಚಂದ್,

ಜವಳಿ ವ್ಯಾಪಾರಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮುದ್ರಾಮಂಜೂಷ: ಇದನ್ನು ಓದುವುದರಲ್ಲಿ ಯಾರಿಗೆ ತಾನೇ ಬೇಜಾರಾದೀತು? ವಿವೇಕ, ಜಾಣತನ, ರಾಜತಂತ್ರ, ಇವನ್ನು ಕಲಿಯುವುದಕ್ಕೆ ಪ್ರಧಾನವೆನಿಸಿದ ಈ ಗ್ರಂಥವನ್ನು ಬೇಗನೆ ತರಿಸಿಕೊಂಡು ಓದಿರಿ. ಕ್ರಯ ರೂ. ೧-೮-೦.

ವಿಳಾಸ—ಮ್ಯಾನೇಜರ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು.

WANTED

Candidates for Telegraph and Station Masters' Classes. Full particulars and Railway Fare Certificate on 2 annas Stamp.

Apply to :—

[24-2] *Imperial Telegraph College, Delhi.*



ಎಫ್.ಎಚ್. ಷೂಲ್, ಜಿ.ಎಂ.ಬಿ.ಎಚ್.

ರೈನ್ ಬಿರ್ ಇಂಜನಿಯರುಗಳು, ಹ್ಯಾಂಬುರ್ಗ್.

ಭತ್ತ, ಜೇಳೆ ಮಿಲ್ಲುಗಳು ಸಂಪೂರ್ಣವಾಗಿರುತ್ತವೆ.

ಭತ್ತದ ಮಿಲ್ಲುಗಳು ಪರಿಪೂರ್ಣವಾದವು.

ಯಂತ್ರಭಾಗಗಳೆಲ್ಲಾ ಬಲವಾಗಿವೆ. ಜೋಡಿಸುವುದು ಬಹಳ ಸುಲಭ.

ಡ್ರೈವಿಂಗ್ ಪವರ್ ಸ್ವಲ್ಪ, ಕೆಲಸ ಹೆಚ್ಚುಮಾಡುತ್ತೆ.

ಅಕ್ಕಿ ಹೊರಡುವುದು ನಮ್ಮೋತ್ತಮ. ತನ್ನಷ್ಟಕ್ಕೆ ತಾನೇ ಕೆಲಸಮಾಡುವುದು.

ಪೆಲ್ಲರುಗಳು, ಕೋನುಗಳು, ಭತ್ತ ನೆಪರೇಟರುಗಳು.

ಹೊಟ್ಟಸಿಂದಲೇ ನಡೆಯುವ ಇಂಜಿನ್ ಬಾಯ್ಲರು.

ಪ್ರದರ್ಶಿನಲ್ಲಬ್ಧ ಕಡೆಗಳಲ್ಲೆಲ್ಲಾ ಉತ್ತಮೋತ್ತಮವಾದ ಬಹುಮಾನ ಬಂದಿದೆ.

[9-6] ಸೋಲ್ ಏಜಂಟರು—ಎ. ವೆಂಕಟಾಚಲಂ ಬ್ರದರ್ಸ್, 17, ಲಿಂಗಚೆಟ್ಟಿ ಬೀದಿ, ಮದರಾಸ್; ಮತ್ತು 9, ಹಳೇ ನವಾರ್ ಬೀದಿ, ಬೆಂಗಳೂರು.



[156-21]

ಮೈಸೂರು ಶ್ರೀಮನ್ಮಹಾರಾಜರವರು

ಸಂಸ್ಥಾನಾಮಳೆ ನಡೆದ ವರ್ಧಂತಿ ಉತ್ಸವಗಳು

ತುಮಕೂರು.

ತಾ. 21 ನೇ ಸೋಮವಾರ ಮಧ್ಯಾಹ್ನದಲ್ಲಿ ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವ ನಂದರ್ಭದಲ್ಲಿ ಬಸವಗಳನ್ನೂ ಗೋವುಗಳನ್ನೂ ಅಲಂಕಾರ ಮಾಡಿಕೊಂಡು, ದಾರ್ ಲೈಯಿಬ್ರರಿ ಆಫೀಸ್ ಕ್ವಾರ್ಟರ್ಸು ಹಿಂಭಾಗದಿಂದ ವಾದ್ಯಗಳ ಸಮೇತ ಮುಖ್ಯವಾದ ಪಟ್ಟಣ ಬೀದಿಗಳಲ್ಲಿ ಉತ್ಸವವು ಹೊರಟು ಮಂಡೀ ಬಸವೇಶ್ವರ ಗುಡಿಯ ಬೀದಿ ಸೇರಿ, ದನಗಳಿಗೆ ಹುರಳಿ, ಹುಲ್ಲು, ಹೊದರಾದವನ್ನು ತೃಪ್ತಿಕರವಾಗಿ ಕೊಟ್ಟರು. ಪೋಲೀಸ್ ಸಹಾಯಕ್ಕೆ ತಿರುಗಿದ ಕಾಲದಲ್ಲಿ ತೆಗೆದರು. ಕೊನೆಯಲ್ಲಿ ಗೋಸಂರಕ್ಷಣೆಯ ಉಪನ್ಯಾಸಗಳು ಮಾಡಿ ಶ್ರೀಮನ್ಮಹಾರಾಜರವರ ಶ್ರೇಯಸ್ಕಾರ್ಥನೆ ಮಾಡಿ, ತಮ್ಮ ಕೃತಜ್ಞತೆಯನ್ನು ನಲ್ಲಿಸಿದರು. ಇಂಥಾ ಉತ್ಸವವನ್ನು ಪ್ರಚಾರಕ್ಕೆ ತಂದ ವರ್ತಕಮಂಡಲಿ ಪ್ರಾಣಿದಯಾ ಪ್ರಚಾರಕ ಸಂಘದ ಪ್ರೆಸಿಡೆಂಟ್ ಮಾ॥ ಶ್ಯಾಮರಾಜಪ್ಪನವರು ವಂದನೀಯರಾಗಿರುತ್ತಾರೆ.

ಗುಂಡ್ಲುಪೇಟೆ ತಾಲ್ಲೂಕು ಹಂಗಳಗ್ರಾಮ.

ಈ ಊರಿನ ಸ್ಕೂಲ್ ಮಾಸ್ತರುಗಳು ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವವನ್ನು ಸಂಭ್ರಮದಿಂದ ನಡಿಸಿದರು. ಗ್ರಾಮಸ್ಥರಿಂದ ಚಂದಾ ಕೂಡಿಸಿ ತಾ. 21 ನೇ ಸೋಮವಾರ ಸ್ಕೂಲನ್ನು ಅಲಂಕರಿಸಿ ಬಾಲಕ ಬಾಲಕಿಯರನ್ನು ಸೇರಿಸಿ ಮಹಾರಾಜರವರ ಭಾವಚಿತ್ರಕ್ಕೂ ಮೈಸೂರ್ ಬಾವುಟಾವಿಗೂ ಸೆಲ್ಯೂಟ್ ಮಾಡಿಸಿ ದೇವರ ಸ್ತೋತ್ರ ಶ್ರೇಯಸ್ಕಾರ್ಥನೆ ಹೇಳಿಸಿ ಮಹಾರಾಜರವರ ಭಾವಚಿತ್ರ ಪರವನ್ನು ಅಲಂಕರಿಸಿ ಸರ್ಕಾರಿ ನೌಕರರು ದೊಡ್ಡಮನುಷ್ಯರುಗಳ ಸಹಾಯದಿಂದ ರಾಜಮರ್ಯಾದಾ ಪೂರ್ವಕ ಮಂಗಳ ವಾದ್ಯದೊಡನೆ ಉತ್ಸವಮಾಡಿ ಬಾಲಕರಿಂದ ಆಟವಾಡಿಸಿದರು. ಮಧ್ಯಾಹ್ನ ಸ್ಕೂಲಿನಲ್ಲಿ ಸರ್ಕಾರಿ ನೌಕರರು, ದೊಡ್ಡಮನುಷ್ಯರು ಮೊದಲಾದವರನ್ನು ನಳೆ ಸೇರಿಸಿ ಬಾಲಕಿಯರಿಂದ ಶ್ರೇಯಸ್ಕಾರ್ಥನೆ ಹೇಳಿಸಿ ಸ್ಕೂಲ್ ರಿಪೋರ್ಟನ್ನು ಮಾ॥ ಮಲ್ಲಪ್ಪನವರೂ, ಮಹಾರಾಜರವರ ಚರಿತ್ರೆಯನ್ನು ಮಾ॥ ಕೃಷ್ಣಮೂರ್ತಿಯವರೂ ಓದಿದರು. ಮಾ॥ ಗುಂಡಪ್ಪನವರು ವಿದ್ಯಾಭ್ಯಾಸ, ಸ್ತ್ರೀ ವಿದ್ಯಾಭ್ಯಾಸದ ಪ್ರಾಮುಖ್ಯತೆಗಳ ವಿಚಾರವಾಗಿ ಉಪನ್ಯಾಸಮಾಡಿದರು. ಅನಂತರ ಬಾಲಕರ ಡ್ರೈರಾಗ್, ದಾಸಪ್ಪನವರ ಸಂಗೀತ, ಶ್ರೇಯಸ್ಕಾರ್ಥನೆ, ಮಂಗಳಗಳು ನಡೆದು ಬಾಲಕ ಬಾಲಕಿಯರಿಗೆ ಇನಾಂ ಕೊಟ್ಟು ಸಭೆಯನ್ನು ಬರಖಾಸ್ತು ಮಾಡಿದರು.

ಅಬ್ಬನದ ಎಸ್ಟೇಟಿಗೆ ಸೇರಿದ ಚಿನ್ನಳ್ಳಿ ಮಿಷನ್ ಸ್ಕೂಲು.

ನಮ್ಮ ಮಹಾಪ್ರಭುಗಳ ವರ್ಷ ವರ್ಧಂತಿ ದಿನವನ್ನು ಬಹು ಗಂಭೀರವಾಗಿಯೂ ತಕ್ಕ ಮರ್ಯಾದೆಯಿಂದಲೂ ಆಚರಿಸಬೇಕಾದ್ದು ನಮ್ಮ ಕರ್ತವ್ಯವಾಗಿದೆ. ಕಳೆದ ತಾ. 21 ನೇ ಸೋಮವಾರ ಮಿಷನ್ ಸ್ಕೂಲನ್ನು ಅಲಂಕರಿಸಿ ಪ್ರಭುಗಳ ದಿವ್ಯವಾದ ಭಾವಚಿತ್ರ ಪಟವನ್ನು ಪುಷ್ಪಗಳಿಂದಲಂಕರಿಸಿ ಬಾಲಕ ಬಾಲಕಿಯರುಗಳಿಂದ ಹೇಳಲು ಶ್ರೀ ಭಗವಂತನು ನಮ್ಮ ಶ್ರೀಮನ್ಮಹಾರಾಜರವರಿಗೆ ಆಯುರಾರೋಗ್ಯಭಾಗ್ಯಗಳನ್ನು ದಯಪಾಲಿಸುವಂತೆ ಪ್ರಾರ್ಥನೆ ನಡಿಸಿದರು. ಕೆಲವು ಮಂದಿ ದೊಡ್ಡ ಮನುಷ್ಯರು ಬಾಲಕರೊಂದಿಗೆ ಎದ್ದುನಿಂತು ಪ್ರಭುಗಳ ಶ್ರೇಯಸ್ಕಾರ್ಥನೆಯನ್ನು ಮಾಡಿದರು. [illegible] ಕಥನ, ಅಪರ ಘನವಾದ ಆಳ್ವಿಕೆ, ಪ್ರಜೆಗಳು ಅವರಲ್ಲಿಟ್ಟಿರಬೇಕಾದ ರಾಜಭಕ್ತಿ, ಈ ವಿಚಾರವಾಗಿ ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ಹಣ್ಣು ಮಿಠಾಯಿ ತಿಂಡಿ ಮುಂತಾದ್ದಕ್ಕೆ ಮಿ॥ ಡಿವೆಕ್ ಥೊರೆಗಳೂ, ಅಬ್ಬನದ ನಾಡು ಪಟೇಲ್ ಕಾಫಿ ಪ್ಲಾಂಟರ್ ಮಾ॥ ವೀರೆಗೌಡರೂ ಬಹು ಧಾರಾಳವಾಗಿ ದ್ರವ್ಯ ಸಹಾಯವನ್ನು ಮಾಡಿ ಮಕ್ಕಳನ್ನು ಪ್ರೋತ್ಸಾಹಪಡಿಸಿದ್ದಕ್ಕಾಗಿ ಅವರುಗಳಿಗೆ ವಂದಾ ಕೃತಜ್ಞತಾ ವಂದನೆಗಳನ್ನು ಹೃತ್ಪೂರಕವಾಗಿ ನಲ್ಲಿಸಬೇಕಾಗಿದೆ.

ಶಿಕಾರಿಪುರ.

ಇಲ್ಲಿಯ ಮಿಡ್ಲ್ ಸ್ಕೂಲಿನಲ್ಲಿ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಹೆಡ್ ಮಾಸ್ತರು ಮಾ॥ ಗೋಪಾಲಕೃಷ್ಣರಾಯರು ನೆರವೇರಿಸಿದರು. ಅಮರ್ದಾರ್ ಮಾ॥ ಬಿ. ಕೆ. ಶ್ರೀನಿವಾಸಲು ನಾಯುಡುಯವರು ಅಧ್ಯಕ್ಷರಾಗಿ ನಿಂತು ಸಭೆಯಲ್ಲಿ ಶ್ರೀಮನ್ಮಹಾರಾಜರವರ ಭಾವಚಿತ್ರವನ್ನು ಅಲಂಕರಿಸಿಟ್ಟಿದ್ದರು. ಸಭೆಯಲ್ಲಿ ಸ್ಥಳೀಯ ಅಧಿಕಾರಿಗಳೂ ಪುರಪ್ರಮುಖರೂ ಬಾಲಕಬಾಲಕಿಯರೂ ನಿಬಿಡವಾಗಿ ಸೇರಿದ್ದರು. ಹೆಡ್ ಮಾಸ್ತರು ಸ್ವಾಗತಮಾಡಿದರು. ಶ್ರೀದೇವತಾಸ್ತುತಿ, ಶ್ರೀಮನ್ಮಹಾರಾಜರವರ ಸ್ತುತಿ ನಡಿಯಿತು. ಸಭಾಧ್ಯಕ್ಷರು ಶ್ರೀಮನ್ಮಹಾರಾಜರವರಲ್ಲಿರತಕ್ಕ ಶ್ರದ್ಧಾಭಕ್ತಿ, ಪೂರ್ವಕವಾದ ಶ್ರೀದೇವತಾ ಭಕ್ತಿ, ಕೇವಲ ಸ್ತುತ್ಯವಾದ ಪ್ರಜಾ ಪ್ರೀತಿಗಳನ್ನು ವಿಸ್ತಾರವಾಗಿ ತಿಳಿಯಪಡಿಸಿದರು. ಮತ್ತು ಪ್ರಭುಗಳಲ್ಲಿರಬೇಕಾದ ಗುಣಾತಿಶಯಗಳು ನಮ್ಮ ಮಹಾರಾಜರವರಲ್ಲಿ ಪರಿಪೂರ್ಣವಾಗಿರುವದೆಂದೂ, ಪ್ರತ್ಯಕ್ಷವಾಗಿ ಮಹಾರಾಜರವರು ನಡಿಸುತ್ತಿರುವ ಸದಾಚರಣೆಗಳನ್ನು ವಿಸ್ತರಿಸಿ ರಾಜರುಷಿಗಳೆಂದು ವರ್ಣಿಸಿದರು. ಮಾ॥ ದೀಕ್ಷಿತರವರು ಶ್ರೀಮನ್ಮಹಾರಾಜರವರು ರಾಜರ್ಷಿಗಳೆಂದು ಪ್ರಪಂಚದಲ್ಲಿ ಪ್ರಖ್ಯಾತಿ ಹೊಂದಿರುವದಕ್ಕೆ ಶ್ರೀರಾಮಚಂದ್ರ ದೇವರಂತೆ ಜಿತೇಂದ್ರಿಯರಾಗಿ ತೇಜಸ್ವಿಗಳಾಗಿರುವದಾಗಿಯೂ, ಧರ್ಮ ಮಾರ್ಗೈಕಪರರಾಯಣರಾಗಿರುವದು ಪೂರ್ವಯುಗಾಂತರದ ರಾಜರುಗಳಂತೆ ಧರ್ಮರಾಜ್ಯವನ್ನು ನಡಿಸುತ್ತಿರುವದರಿಂದ ಮೈಸೂರು ದೇಶವು ಶ್ರೀರಾಮ ರಾಜ್ಯವಾಗಿ ಪರಿಣಮಿಸಿರುವದರಿಂದ ರಾಜರ್ಷಿಗಳೆಂಬ ಹೆಸರು ಪ್ರಪಂಚದಲ್ಲಿ ಶಾಶ್ವತವಾಗಿರುವದಾಗಿ ಹೇಳಿದರು. [illegible] ಮಹಾರಾಜರವರ ಧಾಯಾನುವರ್ತಿಗಳಾಗಿರಬೇಕೆಂದೂ, ಪ್ರತಿ ಮನೆಯಲ್ಲಿಯೂ ಮಹಾರಾಜರವರ ಭಾವಚಿತ್ರವನ್ನು ಇಟ್ಟು ಪ್ರತಿವರ್ಷವೂ ಈ ದಿವಸ ಉತ್ಸವ ನಡಿಸಬೇಕೆಂದೂ, ಆದಂದ್ಯಾರ್ಕವಾಗಿ ಹಿಂದಿನ ಪ್ರಖ್ಯಾತ ರಾಜರುಗಳಂತೆ ಮಿತಸ್ಥಾಪಕರಂತೆ ನಮ್ಮ ಮಹಾರಾಜರವರಲ್ಲಿರತಕ್ಕ ಗುಣಾತಿಶಯಗಳು ಚಿರಸ್ಥಾಯಿಯಾದವುಗಳೆಂದು ತಿಳಿಸಿದರು. ಹೆಡ್ ಮಾಸ್ತರವರು ಮಹಾರಾಜರವರ ಸರ್ಕಾರದ ವಿಚಾರದಲ್ಲಿ ಬ್ರಟಿಷ್ ಸಾರ್ವಭೌಮರವರಿಗೆ ಇರತಕ್ಕ ಪ್ರೀತಿ ಮತ್ತು ಮಹಾರಾಜರವರು ಪ್ರಜೆಗಳಿಗೆ ಕೊಟ್ಟಿರತಕ್ಕ ದೇಶಾಭ್ಯುದಯ ಕಾರ್ಯಗಳ ಮುಂತಾದ್ದನ್ನು ವರ್ಣಿಸಿದರು. ಮಾ॥ ಎ. ಆರ್. ಡೆಲ್ಟ್ರಿಯವರು ಕಯಾರಿಸಿದ್ದ ಪಟ್ಟಿ ವೇರಿಗೆ ಸಭಾಧ್ಯಕ್ಷರವರಿಂದ ಬಹುಮಾನವು ಹಂಚಲ್ಪಟ್ಟಿತು. ಬಾಲಕಿಯರು ಮಂಗಳವನ್ನು ಹೇಳಿದರು. ಶ್ರೀಮನ್ಮಹಾರಾಜರವರ ಈ ವರ್ಷದ ವರ್ಧಂತ್ಯುತ್ಸವವು ಜ್ಞಾಪಕಾರ್ಥವಾಗಿ ಸಂತೆ ಮೈದಾನದಲ್ಲಿ ವೃಕ್ಷಗಳನ್ನು ಹಾಕುವದಾಗಿ ಸಭಾಧ್ಯಕ್ಷರು ತಿಳಿಸಿದರು. ಶ್ರೀಮನ್ಮಹಾರಾಜರವರ ಶ್ರೇಯಸ್ಕಾರ್ಥನೆಯು ನಡಿಸಲ್ಪಟ್ಟಿತು. ನಂತರ ಸಂತೆ ಮೈದಾನಕ್ಕೆ ಸರ್ವರೂ ಬಂದಾಗ ಸಭಾಧ್ಯಕ್ಷರೂ ಮಾ॥ ದೀಕ್ಷಿತರು ಒಂದೊಂದು ನೆರಳಿನ, ಹೂವಿನ ವೃಕ್ಷವಾಗತಕ್ಕ ಗಿಡಗಳನ್ನು ಹಾಕಿದರು. ಅಂತು ಉತ್ಸವವು ಅತ್ಯಂತ ಸಂತೋಷದಿಂದ ನೆರವೇರಿಸಲ್ಪಟ್ಟಿತು.

ಮಿ॥ ಪೇರತ್ಸಪ್ಪನವರನ್ನು ರಾಮಸಮುದ್ರದ ಮ್ಯುನಿಸಿಪಲ್ ಕೌನ್ಸಿಲರ್‌ಗೂ, ಮಿ॥ ಎಂ. ಎಕ್ ನಾಗೇಂದ್ರಯ್ಯನವರನ್ನು ಮಂಡ್ಯದ ಮ್ಯುನಿಸಿಪಲ್ ಕೌನ್ಸಿಲರ್‌ಗೂ ಪ್ರೆಸಿಡೆಂಟರಾಗಿ ಚುನಾಯಿಸಿರುವದನ್ನು ನಿಂಜೂರುಮಾಡಿದೆ.

ಗೃಹಕೃತ್ಯದ ನೋಟೀಸು.

ನಂಜನಗೂಡಿನಲ್ಲಿರುವ ಸಬ್ ಓವರ್‌ಸೀಯರು ಎಚ್. ಆರ್. ಶ್ರೀಕಂಠಯ್ಯನು ಈ ನೋಟೀಸು ಮೂಲಕ ತಿಳಿಯಪಡಿಸುವದೇನೆಂದರೆ–ನಮ್ಮ ಗಳ ಪಿತರಾರ್ಜಿತವಾದ ಒಟ್ಟು ಅವಿಭಕ್ತ ಕುಟುಂಬಕ್ಕೆ ಸೇರಿದ ಈ ಕೆಳಗೆ ಷೆಡ್ಯೂಲಿನಲ್ಲಿ ಕಂಡ ಸ್ವತ್ತುಗಳನ್ನು ಮತ್ತು ಇವರ ಹತ, ಸ್ಥಿರ ಆಸ್ತಿಗಳನ್ನು ನಮ್ಮಿಗಳಿಗೆ ದೋಸಮಾಡಬೇಕೆಂಬ ಪುರಾತೆಯಿಂದ ಯಜಮಾನರೆ ತಾಲ್ಲೂಕು ಹೊಸ ಅಗ್ರಹಾರದ ಕೊಮಾರಯ್ಯನವರ ಮಕ್ಕಳು ಶ್ರೀಕಂಠಯ್ಯನವರು ಕ್ರಯ, ಭೋಗ್ಯ, ಆಧಾರ, ದಾನ, ವಗೈರೆ ಮಾಡಿ ಈ ಮೂಲಕ ಸ್ವತ್ತುಗಳನ್ನು ಪರಾಧೀನ ಮಾಡಲು ಪ್ರಯತ್ನ ಮಾಡುತ್ತಿರುತ್ತಾರೆಂತ ವರ್ತಮಾನ ಕೇಳಿ ಕ್ರೀನೆಯಾಗಿ ಅಂಥಾ ಕ್ರಯ, ದಾನ, ಭೋಗ್ಯ, ಆಧಾರ ವಗೈರೆಗಳಿಂದ ಯಾರಿಗೂ ಯಾವ ಪ್ರಯೋಜನವೂ ಆಗಲಾರದೆಂದೂ, ನಾವುಗಳು ಇದಕ್ಕೆ ಯಾವ ರೀತಿಯಿಂದಲೂ ಬದ್ಧರಾಗುವದಿಲ್ಲವೆಂದೂ ನುಪ್ತ ಸದರಿ ಕ್ರಯ, ಭೋಗ್ಯ, ಆಧಾರ, ದಾನ ವಗೈರೆಗಳು ಬಾರ್ಜಿತವಾಗಲಾರದೆಂದೂ ಈ ನೋಟೀಸು ಮೂಲಕ ತಿಳಿಯಪಡಿಸಿರುತ್ತೆ.

ಷೆಡ್ಯೂಲ್

ಅಕ್ಕಿಹೆಬ್ಬಾಳು ಹೋಬಳಿ ಅಲಂಬಾಡಿ ಕಾವಲಿನಲ್ಲಿರುವ ಸರ್ವೆ 13-14 ಮತ್ತು 15 ನೇ ನಂಬರುಗಳೂ, ಯಡತೊರೆ ತಾಲ್ಲೂಕು ಹೊಸ ಅಗ್ರಹಾರದ ಹೋಬಳಿಗೆ ಸೇರಿದ ದೊಡ್ಡ ಒತ್ತರಗುಡಿಯಲ್ಲಿರುವ ಸರ್ವೆ 18 ಮತ್ತು 43 ನೇ ನಂಬರುಗಳೂ, ಡಿಟೋ ಹೋಬಳಿಗೆ ಸೇರಿದ ಛೇರ್ಮದ ಗ್ರಾಮಕ್ಕೆ ಸೇರಿದ ಸರ್ವೆ 126 ಮತ್ತು 127 ನೇ ನಂಬರುಗಳು, ಡಿಟೋ ಹೋಬಳಿ ಮಂಡಿಗನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 11 ನೇ ನಂಬರೂ, ಡಿಟೋ ಹೋಬಳಿ ಹರಂಬಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 54 ನೇ ನಂಬರು, ಡಿಟೋ ಹೋಬಳಿಗೆ ಸೇರಿದ ಡಿಟೋ ಗ್ರಾಮದಲ್ಲಿರುವ ಸರ್ವೆ 35, 111, 143 ರ ಪೈಕಿ 3 ನೇ ಪೋದು, 80, 93, 156, 39, 79, 50 ರ ಪೈಕಿ 1 ನೇ ಪೋದು, 256, 37, 78 ನೇ ಪೈಕಿ 2 ನೇ ಪೋದು, 144 ರ ಪೈಕಿ 2 ನೇ ಪೋದು, 105 ನೇ ನಂಬರು, 101 ರ ಪೈಕಿ 2 ನೇ ಪೋದು, 71 ರ ಪೈಕಿ 1 ನೇ ಪೋದು, 95 ರ ಪೈಕಿ 2 ನೇ ಪೋದು, 118 ನೇ ನಂಬರು, 72 ರ ಪೈಕಿ 2 ನೇ ಪೋದು, 114 ರ ಪೈಕಿ 1 ನೇ ಪೋದು, 95 ರ ಪೈಕಿ 3 ನೇ ಪೋದು, 263 ನೇ ನಂಬರು, 200, 113 ರ ಪೈಕಿ 2 ನೇ ಪೋದು, 185, 174, 163, 181, 198, 87, 197, 211, 193, 196 ಮತ್ತು ಮೈಸೂರಲ್ಲಿರುವ ಮ್ಯುನಿಸಿಪಲ್ 1432 ನೇ ನಂಬರು ಮನೆ, ಹೊಸ ಅಗ್ರಹಾರದಲ್ಲಿರುವ ಫ್ಲರ್ತು ಮನೆಗಳು ಮತ್ತು ನಿವೇಶನ, ಹರಂಬಳ್ಳಿಯಲ್ಲಿರುವ ಎರಡು ನಿವೇಶನ ಇವುಗಳು ಅವಿಭಕ್ತ ಕುಟುಂಬಕ್ಕೆ ಸೇರಿದ ಸ್ವತ್ತುಗಳಾಗಿರುತ್ತವೆ. *H. R. Shrikantaiya.*

ಗೃಹಕೃತ್ಯದ ನೋಟೀಸು.

ಕೃಷ್ಣರಾಜಪೇಟೆ ತಾಲ್ಲೂಕು ನಂತೇ ಬಾಡಹಳ್ಳಿ ಹೋಬಳಿ ನಾಗರಘಟ್ಟದ ಗ್ರಾಮದ ನಾರಶಿಗೌಡನ ಮಗ ಜವರ ಮೈನರ್ ಗಾರ್ಡಿಯಿ ಸೋದರಮಾವ ಇದೇ ಹೋಬಳಿ ಹಳೇ ಅಕ್ಕಿಗುಪ್ಪೆ ಗ್ರಾಮದಲ್ಲಿರುವ ತಿಮ್ಮೇಗೌಡನ ಮಗ ಕೃಷ್ಣೇಗೌಡನು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ–ಮೇಲ್ಕಂಡ ಜವರನು ನನಗೆ ಖಾನಾ ಅಕ್ಕನ ಮಗನಾಗಬೇಕು. ಇವನ ತಂದೆತಾಯಿಗಳು ಮೃತಪಟ್ಟು 7-8 ವರ್ಷಗಳ [illegible] ಮೇಲಾಯಿತು. ಆದಾಗಿಂದ ಇವನು ನನ್ನ ಪೋಷಣೆಯಲ್ಲೇ ಇರುತ್ತಾನೆ. ಈ ಬಾಲಕನಿಗೆ ಹಾಲಿ 14 ವರ್ಷಗಳ ಪ್ರಾಯವಾಗಿರುತ್ತೆ. ಮೇಲ್ಕಂಡ ನಾಗರಘಟ್ಟದ ಗ್ರಾಮದಲ್ಲಿ ಇವನ ಸ್ವಂತಾಸ್ತಿ ದಕ್ಷಿಣಾದಿಯಾಗಿದ್ದ ಪಟೇಲ್ ನರಸೇಗೌಡನೆಂಬುವನು ಈಗ್ಗೆ 3-4 ವರ್ಷಗಳಲ್ಲಿ ಮೃತಪಟ್ಟನು. ಇವನ ಹೆಂಡತಿಯು ಇವನಿಗಿಂತ ಮೊದಲೇ ನತ್ತುಹೋಗಿದ್ದಳು. ನಂತರ ಇವನ ಮಗ ನಂಜನೆಂಬ ಮೈನರ್ ಹುಡುಗನೂ, ಮೈಕುಂತನೆಂಬ ಮೈನರ್ ತಮ್ಮನೂ ಕೂಡ ಸದರಿ ನರಸೇಗೌಡನ ತಾಯಿ ಕಾಳಮ್ಮನ ಪೋಷಣೆಯಲ್ಲಿದ್ದರು. ಈಕೆಯು ಸರ್ಕಾರಿ ಪಟೇಲಯನ್ನೂ ಜಿರಾಯ್ತು ಸಹ ನಡಿಸಿಕೊಂಡು ಬರುತ್ತಿರುವಷ್ಟರಲ್ಲಿ ಮೈಕುಂತನೆಂಬ ಮೈನರ್ ನತ್ತುಹೋದನು. ಕೆಲಸಕಾಲದಲ್ಲಿ ನನ್ನ ಸೋದರಳಿಯ ಜವರನು ಆಗಾಗ್ಗೆ ಹೋಗಿ ಸಹಾಯಕನಾಗಿರುತ್ತಿದ್ದನು. ಇಪ್ಪರಲ್ಲಿ ಅಂದರೆ ಈಗ್ಗೆ 6-7 ತಿಂಗಳಲ್ಲಿ ಸದರಿ ಕಾಳಮ್ಮನು ನತ್ತುಹೋದಳು. ಈಗ ಒಂದು ತಿಂಗಳ ಸುಮಾರಿನಲ್ಲಿ ಸದರಿ ಮೈನರ್ ನಂಜನೂ ನತ್ತುಹೋಯಿತು. ಇವರುಗಳಿಗೆಲ್ಲಾ ನನ್ನ ಸೋದರಳಿಯ ಜವರನು ರಾ ಪ್ರಕಾರ ಉತ್ತರ ವಾರಸ್ದಾರನಾಗಿರುತ್ತಾನೆ. ಇವನಂತೆ ವಾರಸ್ ಹಕ್ಕುಳ್ಳ ಇನ್ನೊಬ್ಬ ದಾಯಾದಿ ಶಿಂಗನೆಂಬುವನು ಅಸಾಧ್ಯವಾದ ಕಾಮಾಲೆರೋಗ ಪೀಡಿತನಾಗಿ ಯಶ್ವೆಲ್ಲೋ ತಿರಿಗಿಕೊಂಡಿರುತ್ತಾನೆ. ಈ ಕುಟುಂಬಕ್ಕೆ ಸಂಬಂಧಪಟ್ಟ ಅಪ್ರಸ್ತುತವೆಂತಯಾದ ವಿಧವೆಯೊಬ್ಬಳು ದಿಗರ್ ತಾಲ್ಲೂಕಿನಲ್ಲಿ ಜೀರೆ ಸ್ವತ್ತಿನ ಮೇಲಿರುತ್ತಾಳೆ. ಆದ್ದರಿಂದ ಈ ಕುಟುಂಬಕ್ಕೆ ಸದರಿ ನನ್ನ ಸೋದರಳಿಯ ಜವರನೇ ಸಂಪೂರ್ಣ ಬಾಧ್ಯತೆಯನ್ನು ಹೊಂದಿರುವನಾಗಿರುತ್ತಾನೆ. ಇಮನಿಗೆ ಮೋಸಪಡಿಸಬೇಕೆಂಬ ದುರುದ್ದೇಶದಿಂದ ಕೆಲವರು ಮೇಲ್ಕಂಡ ಅಪ್ರಸ್ತುತವೆಂತ ವಿಧವೆಯೆಂದರೋ ಅಥವಾ ದೋಗಪೀಡಿತನಾಗಿ ದೇಶಸಂಚಾರಿಯಾಗಿರುವ ಬಾಲಕನೆಂದರೋ ಇವನ ಹಕ್ಕು ಬಾಧ್ಯತೆಗೊಳಪಟ್ಟಿರುವ ಸ್ವತ್ತುಗಳನ್ನು ಅಕ್ರಮವಾಗಿ ಪಡದುಕೊಳ್ಳಲು ಪ್ರಯತ್ನಿಸಿ ಆ ಬಗ್ಗೆ ತರದೂದು ನಡಿಸುತ್ತಿರುವದಾಗಿ ವರ್ತಮಾನ ಕೇಳಿತ್ತಿದ್ದೇನೆ. ಈ ಕುಟುಂಬದಲ್ಲಿ ಹೊರಗೆ ಕೊಡತಕ್ಕ ನಾರಾ ವಗೈರೆ ಏನೂ ಇರುವದಿಲ್ಲ. ಈ ರೀತಿ ಪರಾಧೀನ ಮಾಡಲೂ ಪಡೆಯಲೂ ಕೂಡ ಯಾರಿಗೂ ಬಾಧ್ಯತೆ ಇರುವದಿಲ್ಲ. ಅಂಥಾ ಪರಾಧೀನಗಳು ಏನಾದರೂ ನಡೆದ ಪಕ್ಷದಲ್ಲಿ ಆ ಹಕ್ಕು ಕೊರ್ಟಿತವಾಗಲಾರದು. ಅಲ್ಲದೆ ಈ ಪೆನೆಯಿಂದ ಸದರಿ ವಾರಸ್‌ದಾರ್ ಮೈನರ್ ಜವರನಿಗೆ ನಂಭವಿಸಬಹುದಾದ ಸಕಲ ನಷ್ಟಗಳಿಗೂ ಗುರಿಯಾಗಿರುತ್ತಾರೆಂಬ ಅಂಶ ಈ ಮೂಲಕ ಎಚ್ಚರಿಸಿರುತ್ತೇನೆ. ಸ್ವತ್ತಿನ ತಪಶೀಲು:–(1) ಇದೇ ನಾಗರಘಟ್ಟದ ಗ್ರಾಮದಲ್ಲಿ ಸದರಿ ಪಟೇಲ್ ನರಸೇಗೌಡನ ಹೆಸರಿಗೆ ಖಾತೆ ಇರುವ ಸರ್ವೆ ನಂಬರ್ 41, ವಿಸ್ತೀರ್ಣ 6-28, ಆಕಾರ 7-8-0 ಉಳ್ಳ ಕುಷ್ಕಿ ಜಮೀನಿನ ವಾಯವ್ಯ ಭಾಗದಲ್ಲಿ 10 ಗುಂಟೆ ಜಮೀನು ಜಾತಾ. (2) ೪/೫ ಪೈಕಿ ವಿಸ್ತೀರ್ಣ 0-5, ಆಕಾರ 0-8-0 ಉಳ್ಳ ತರಿ ಜಮೀನು. (3) ಊರೊಳಗೆ ಪೂರ್ವಕ್ಕೆ ಪಟೇಲ್ ನಂಜೇಗೌಡನ ಮನೆ, ಪಶ್ಚಿಮಕ್ಕೆ ನಣ್ಣ ನಂಜನ ಮನೆ, ದಕ್ಷಿಣೋತ್ತರಕ್ಕೆ ಬೀದಿ ಈ ಮಧ್ಯೆ 5 ಅಂಕಣವುಳ್ಳ ಹೆಂಚಿನ ಗುತ್ತಾರ ಗಚ್ಚಿನ ಮನೆ. (4) ಪೂರ್ವಕ್ಕೆ ದೊಡ್ಡ ಲಕ್ಕನ ಹುಚ್ಚಿ ಮನೆ, ಪಶ್ಚಿಮಕ್ಕೆ ಜವರನ ಮನೆ, ದಕ್ಷಿಣಕ್ಕೆ ತೋಟ ಆಗಳು, ಉತ್ತರಕ್ಕೆ ಬೀದಿ ಈ ಮಧ್ಯೆ 12 ಅಂಕಣವುಳ್ಳ ಹೆಂಚಿನ ತೊಟ್ಟಿಮನೆ. (5) ನಾಗರಘಟ್ಟದ ಗ್ರಾಮವ ಸರ್ಕಾರಿ ಪಟೇಲ ನೌಕರಿ.

ಜವರ ಮೈನರ್ ಗಾರ್ಡಿಯ್ ಸೋದರಮಾವ ಕೃಷ್ಣೇಗೌಡನ ರುಜು.

ಗೃಹಕೃತ್ಯದ ನೋಟೀಸು.

ಹೊಳಲ್ಕೆರೆ ತಾಲ್ಲೂಕು ರಾಮಗಿರಿ ಹೋಬಳಿ ಬಿಧರಕೆರೆ ಬಾಗಿಲುಮನೆ ಗೌಡ ಗಿರಿಯಪ್ಪನ ಜ್ಯೇಷ್ಠಪುತ್ರ 1 ನೇ ಹೆಂಡತಿಯ ಮಗ ಬಸಪ್ಪನು ಈ ಮೂಲಕ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ–ನಮ್ಮ ತಂದೆಯವರಿಗೆ ಎರಡು ಜನ ಹೆಂಡರು. ನಾನು ಹಿರಿಯ ಹೆಂಡತಿಯ ಮಗ. ಚಿಕ್ಕ ಹೆಂಡತಿ ಗೌರಮ್ಮನಿಗೆ ಸುಮಾರು 18 ವರುಷ ವಯಸ್ಸಿನ ಜಿ. ರಾಮಪ್ಪನೆಂಬ ಒಬ್ಬ ಗಂಡು ಮಗನು ಇದ್ದಾನೆ. ನಮ್ಮ ಮಲತಾಯಿಯು ನಮ್ಮ ಗಂಡ ಹೆಂಡತಿಯನ್ನು ಸೇರದ್ದರಿಂದ ನಮ್ಮ ತಂದೆಯು ಬೇರೊಂದು ಹುಲ್ಲುಮನೆಯನ್ನು ಕೊಟ್ಟು ಅವಿಗೆ ಬೂಟಕ್ಕೆ ಮಾತ್ರ ಅನುಕೂಲ ಪಡಿಸಿದ್ದನು. ನಮ್ಮ ದುದಾರಿ ಜಮೀನು ನಾಲ್ಕು ಜನ ನಂಬಿಳಿವಾಳಿಗಳು, ನಾವು ಸಹ ಸಾಲದ್ದರಿಂದ ಇದೇ ಗ್ರಾಮದ ಸಾಣಿಹಳ್ಳಿ ರುದ್ರಪ್ಪನೆಂಬಾತನಿಗೆ ಯಾವ ಅನುಕೂಲವಿಲ್ಲದ್ದರಿಂದ ಈತನು ಕೇವಲ ಗರೀಬನಾದ್ದರಿಂದ ಈತ ನನ್ನನ್ನು ಮನೆ ಅಳಿಯತನಕ್ಕೆ ಇರಿಸಿಕೊಂಡು ನಮ್ಮ ಮಲತಂಗಿ ಗಂಗಮ್ಮನನ್ನು ಈತನಿಗೆ ಕೊಟ್ಟು ಮನೆಯಲ್ಲಿಯೇ ಇರಿಸಿಕೊಂಡೆವು. ನ

ಮೈಸೂರು ಪ್ರಜಾಪ್ರತಿನಿಧಿ ಸಭೆ

ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ಸಾಹೇಬರವರು ಅಪ್ಪಣೆ ಕೊಡಿಸಿದ ಉಪಸಂಹಾರ ಭಾಷಣ.

[ಸಕೇಪ.]

ರಸ್ತೆಗಳು, ಸೇತುವೆಗಳು, ಸಾರ್ವಜನಿಕ ಕಟ್ಟಡಗಳು, ಇವುಗಳ ವಿಷಯದಲ್ಲಿಯೂ ಸಹ ಇದೇ ವಿಧವಾದ ಧೋರಣೆಯನ್ನು ಕೊಡುತ್ತೇನೆ. ಇವುಗಳೂ ಕೂಡ ಬಹು ಜಾಗ್ರತೆಯಾಗಿ ನಡಿಸಬೇಕಾದ ಮುಖ್ಯ ಕಾಮಗಾರಿಗಳಾಗಿವೆ. ಆವಶ್ಯಕತೆಗಿಂತ ಎಷ್ಟು ಜಾಗ್ರತೆಯಾಗಿ ಹಣವನ್ನು ಒಪಗಿಸಲು ಸಾಧ್ಯವಾದರೆ ಅಷ್ಟು ಜಾಗ್ರತೆಯಾಗಿ ಕೆಲಸವನ್ನು ಕೈಗೊಳ್ಳಲಾಗುವುದೆಂದು ನೀವು ದೃಢವಾಗಿ ನಂಬಬಹುದಾಗಿದೆ.

ವಿದ್ಯಾಭ್ಯಾಸವನ್ನು ಇನ್ನೂ ಹೆಚ್ಚಿಸಬೇಕೆಂದೂ, ವಿದ್ಯಾಭ್ಯಾಸ ಕ್ರಮವನ್ನು ಮೇಲ್ಪಡಿಸಬೇಕೆಂದೂ ಅರಿಕೆ ಮಾಡಲ್ಪಟ್ಟಿದೆ. ಇದನ್ನು ನೋಡಿದರೆ ವಿಶೇಷ ಸಂತೋಷವುಂಟಾಗುತ್ತದೆ. ಹೀಗೆ ಮಾಡುವುದು ಅತ್ಯಾವಶ್ಯಕವೆಂಬುದು ಸರ್ಕಾರದವರಿಗೂ ತಿಳಿದಿದೆ. ಅದಕ್ಕೆ ಬೇಕಾದ ಹಣವನ್ನು ಒದಗಿಸಲು ಸರ್ಕಾರದವರು ತಮ್ಮ ಕೈಯಲ್ಲಾದ ಪ್ರಯತ್ನವನ್ನೆಲ್ಲಾ ಮಾಡುವರು. ಮದ್ದಗಿರಿಯಲ್ಲಿ ಒಂದು ಹೈ ಸ್ಕೂಲನ್ನು ಸ್ಥಾಪಿಸಬೇಕೆಂಬುದಾಗಿ ಸರ್ಕಾರದವರು ತೀರ್ಮಾನಿಸಿರುತ್ತಾರೆ. ಈ ಅಂಶವನ್ನು ಮದ್ದಗಿರಿಯಿಂದ ಬಂದಿರುವ ಮೆಂಬರುಗಳಿಗೆ ತಿಳಿಸಲು ನನಗೆ ಬಹಳ ಸಂತೋಷ. ಈ ವಿಚಾರದಲ್ಲಿ ತಕ್ಕ ಕ್ರಮವನ್ನು ನಡಿಸಲು ವಿದ್ಯಾಭ್ಯಾಸದ ಇರಾಜಿಯ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ಹುಕುಂ ಕೊಟ್ಟಿದೆ.

ವೈದ್ಯ ಸಹಾಯವು ಇನ್ನೂ ಹೆಚ್ಚಾಗಿ ದೊರೆಯುವಂತೆ ಮಾಡುವ ವಿಚಾರವಲ್ಲಿಯೂ ಕೂಡ ಇದೇ ವಿಧದಲ್ಲಿ ಭರವಸೆ ಹೇಳುತ್ತೇನೆ. ಸರ್ಜಿಸಿಸ್ಟೆಂಟ್ ಸರ್ಜನುಗಳ ಸಂಬಳದ ಬಿತ್ತಿ, ಸಂಭವಗಳನ್ನು ಉತ್ತಮ ಪಡಿಸುವ ಬಗ್ಗೆ ಸ್ವಲ್ಪ ಹಣವನ್ನು ಒದಗಿಸಲು ಸಾಧ್ಯವಾಗಿದೆ. ನಮ್ಮ ಹಣಕಾಸಿನ ಸ್ಥಿತಿಯು ಉತ್ತಮವಾದ ಹಾಗೆಲ್ಲಾ ಹೊಸದಾಗಿ ಆಸ್ಪತ್ರೆಗಳನ್ನು ಸ್ಥಾಪಿಸುವುದಕ್ಕೂ, ಆಸ್ಪತ್ರೆಗಳಿಗೆ ಬೇಕಾದ ಸಲಕರಣೆಗಳನ್ನು ಇನ್ನೂ ಒದಗಿಸುವುದಕ್ಕೂ ಖಂಡಿತವಾಗಿಯೂ ಮತ್ತಷ್ಟು ಹಣವನ್ನು ಕೊಡುತ್ತಾ ಬರುತ್ತೇವೆ.

ಸಾಮಾನ್ಯವಾದ ಸರ್ಕಾರಿ ನೌಕರಿಗಳ ದಾಖಲೆಯಲ್ಲಿ ಸರ್ಕಾರಿ ಆಫೀಸುಗಳಲ್ಲಿನ ಜವಾನರ ಸಿಬ್ಬಂದಿಯ ಸಂಬಳಗಳನ್ನು ಹೆಚ್ಚಿಸಬೇಕೆಂದೂ, ಗ್ರಾಮಾಂತರಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೋಡಿಸುವುದಕ್ಕಾಗಿ ಗ್ರಾಂಟುಗಳನ್ನು ಕೊಡಬೇಕೆಂದೂ, ನೇಗಿಲುಗಳನ್ನು ಸರಬರಾಯಿ ಮಾಡುವ ಬಗ್ಗೆ ವ್ಯವಸಾಯದ ಇರಾಜಿಗೆ ಹೆಚ್ಚು ಹಣವನ್ನು ಒದಗಿಸಬೇಕೆಂದೂ, ವಾಸ್ತವಿಕವಾಗಿಯೂ ಜನೋಪಯುಕ್ತವಾದ ಸ್ಥಳೀಯ ಕಾರ್ಯಗಳಿಗೆ ವಿನಿಯೋಗಿಸುವ ಬಗ್ಗೆ ಹೆಚ್ಚು ಹಣವು ನಾನಾ ಸ್ಥಳೀಯ ಸಂಸ್ಥೆಗಳಿಗೂ ದೊರೆಯುವ ಹಾಗೆ ಮಾಡಬೇಕೆಂದೂ ಸಹ ಮೆಂಬರುಗಳು ಕೇಳಿಕೊಂಡಿದ್ದಾರೆ. ಈ ವಿಷಯದಲ್ಲಿ ಸರ್ಕಾರದವರಿಗೆ ಎಷ್ಟು ಸಹಾನುಭೂತಿಯಿದೆಯೆಂಬುದನ್ನೂ, ಸಾಧ್ಯವಾದಾಗಲೆಲ್ಲಾ ಇವುಗಳಿಗೆ ಹಣವನ್ನೊದಗಿಸಲು ಸರ್ಕಾರದವರು ಎಷ್ಟರಮಟ್ಟಿಗೆ ಸಿದ್ಧವಾಗಿವ್ದಾರೆಂಬುದನ್ನೂ ನಾನು ಹೇಳಬೇಕಾದುದೇ ಇಲ್ಲ. ಬೆಂಗಳೂರಿನಲ್ಲಿ ಅತ್ಯಂತ ಜರೂರಾಗಿ ಆಗಬೇಕಾದ ಕಾರ್ಯಗಳಿರುವುದರಿಂದ ಸಿಟಿ ಮುನಿಸಿಪಾಲಿಟಿಗೆ ಕೊಡತಕ್ಕ ಗ್ರಾಂಟು ಪೂರ್ಣವಾಗಿ 35,000 ರೂಪಾಯಿಗಳಿಗೆ ಹೆಚ್ಚಿಸಲು ಸಾಧ್ಯವಾಗಿದೆ. ಇನ್ನು ಒದಗಿಸಲು ಸಾಧ್ಯವಾಗಲಿಲ್ಲ. ಬೆಂಗಳೂರು ಸಿಟಿಯಲ್ಲಿ ಆರೋಗ್ಯನಾಧಕವಾದ ಪರ್ವಾಡುಗಳಿಗೂ, ಇತರ ಮೇರ್ವಾಟುಗಳಿಗೂ ಹೆಚ್ಚು ಹಣವು ಖಂಡಿತವಾಗಿಯೂ ಬೇಕು. ಆದರೆ ಇವುಗಳಿಗೆ ಮುಂದೆ ಗಮನ ಕೊಡಬಹುದೇ ಹೊರತು ಸದ್ಯದಲ್ಲಿ ಇದಕ್ಕೆಲ್ಲಾ ಹಣವು ಒದಗುವುದಿಲ್ಲ. ಹೊಸ ಕೆರೆಗಳನ್ನು ವಿಧಿಸಿದರಂತು ಜನರಿಗೆ ಆದು ರುಚಿಸುವುದಿಲ್ಲವೆಂಬುದು ಕಂಡೇ ಇದೆ.

ಸಿಬ್ಬಂದಿಯ ವೆಚ್ಚವನ್ನು ತಗ್ಗಿಸಬೇಕೆಂದು ಮೆಂಬರುಗಳು ಪದೇ ಪದೇ ಕೇಳಿಕೊಂಡಿದ್ದಾರೆ. ಸಿಬ್ಬಂದಿಗಳ ಮೇಲಣ ವೆಚ್ಚವನ್ನು ಸಾಧ್ಯ ಕಂಡಷ್ಟು ಮಟ್ಟಿಗೂ ಮಿತಪಡಿಸಲಾಗುವುದೆಂದು ತಮ್ಮೆಲ್ಲರಿಗೂ ದೃಢವಾಗಿ ಹೇಳುತ್ತೇನೆ. ವೆಚ್ಚವನ್ನು ತಗ್ಗಿಸುವ ಪರಿಮಿತಿಯು ಎಷ್ಟರವರೆಗೆ ಹೋಗಬಹುದೆಂಬ ವಿಷಯದಲ್ಲಿ ಎಲ್ಲರಿಗೂ ಒಂದೇ ಅಭಿಪ್ರಾಯವಿಲ್ಲದೆ ಇರಬಹುದು. ಆದಾಗ್ಯೂ ವೆಚ್ಚವನ್ನು ಕಡಮೆಮಾಡುವ ಕಾರ್ಯಕ್ರಮಕ್ಕೂ ಕೂಡ ಒಂದು ಮಿತಿಯುಂಟೆಂಬುದನ್ನೇನೋ ತಾವುಗಳೆಲ್ಲರೂ-ಒಪ್ಪಿದೇ ಒಪ್ಪುವಿರಿ. ಮತ್ತು ಆ ರೀತಿ ಒಂದು ಪರಿಮಿತಿಯನ್ನು ನಿರ್ಧರಿಸುವ ಭಾಗದಲ್ಲಿ ಸರ್ಕಾರಿ ನೌಕರರ ಕಾರ್ಯದಕ್ಷತೆ ಮತ್ತು ಸದ್ವರ್ತನೆಗಳಿಗೆ ಧೋಕವುಂಟಾಗಲು ಅವಕಾಶಕೊಡದಂತೆ ವೆಚ್ಚವನ್ನು ತಗ್ಗಿಸಬೇಕೆಂಬುದೊಂದೇ ನಮ್ಮ ಆಶಯವೆಂಬುದಾಗಿ ಖಚಿತವಾಗಿ ನಂಬಿಕೆ ಹೇಳಬಹುದಾಗಿದೆ. ಸಂಬಳಗಳನ್ನೂ, ಬಡ್ತಿಯ ಸಂಭವಗಳನ್ನೂ ಅತಿ ವಿಶೇಷವಾಗಿ ತಗ್ಗಿಸಿಬಿಟ್ಟಲ್ಲಿ ಸರ್ಕಾರಿ ನೌಕರರ ಉತ್ಸಾಹವೂ ಅದಕ್ಕೆ ತಕ್ಕಹಾಗೆ ಕಡಮೆಯಾಗಿಯೇ ಹೋಗುವುದು. ನೆನಪಿನಲ್ಲಿಟ್ಟುಕೊಳ್ಳುವುದರ ಜತೆಗೆ ನೆರೆಹೊರೆಯ ರಾಜ್ಯಗಳಲ್ಲಿನ ವಿದ್ಯಮಾನಗಳನ್ನೂ ಪರಿಶೀಲಿಸಿ ವೆಚ್ಚವನ್ನು ತಗ್ಗಿಸಬೇಕಾಗಿರುತ್ತದೆ.

ಬತ್ತೆಚ್ಚನ್ನು, ಅದರಲ್ಲಿಯೂ ಮುಖ್ಯವಾಗಿ ಸಾಲಗಳ ವಿಷಯಕವಾದ ನಲಹೆಗಳನ್ನು ಸರ್ವರೂ ಅಂಗೀಕರಿಸಿರುವುದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ. ಕ್ಷಾಮಗಾಲದ ಉಪಯೋಗಾರ್ಥವಾಗಿ ತೆಗೆದಿಟ್ಟ 'ರಿಜರ್ವ್' ಮೊಬಲಗುಗಳಿಂದ ಬರುವ ಬಡ್ಡಿಯಲ್ಲಿ ಹಣವನ್ನು ತೆಗೆದುಕೊಳ್ಳುವುದು ನರಿಹಾಲ್ಯವೆಂಬುದಾಗಿ ಅತಂಕಪಡುವವರ ಮನಸ್ಸಿಗೆ ನಮ್ಮ ಸ್ನೇಹಿತರೂ, ಸಹೋದ್ಯೋಗಿಗಳೂ ಆದ ಎಂ॥ ಕೃಷ್ಣರಾಯರವರು ಕೊಟ್ಟ ಸಮಜಾಯಿಷಿಯಿಂದ ಸಮಾಧಾನಪುಂಟಾಗಿರುವುದೆಂದು ತೋರುತ್ತದೆ. ಎಂ॥ ಕೃಷ್ಣರಾಯರವರು ಆಯವ್ಯಯಗಳ ವಿಚಾರವಾಗಿ ಯಾವ ಭಾಗದಲ್ಲಿಯೂ ವಿಚಾರಗೆಟ್ಟು, ಅಥವಾ ಅವಾಯಕ್ಕೆ ಪೆದರದೆ ವರ್ತಿನತಕ್ಕವರಲ್ಲವೆಂಬುದಾಗಿ ತಮ್ಮೆಲ್ಲರಿಗೂ ತಿಳಿಸಬಹುದಾಗಿದೆ. ಮತ್ತು ಸರ್ಕಾರದ ಆಯವ್ಯಯದ ವಿಷಯದಲ್ಲಿ ಪರಿಣತರಾದವರಲ್ಲಿ ಬಹುಮಂದಿಗಳ ಅನುಮೋದನೆಯಿಂದ ಅಂಗೀಕರಿಸಲ್ಪಟ್ಟಿರುವ ನಿಯಮಗಳಿಗೆ ವಿರುದ್ಧವಾಗಿ ಯಾವುದಾದರೂ ವರ್ಷಾದು ಸೂಚಿಸಲ್ಪಟ್ಟದ್ದ ಪಕ್ಷಕ್ಕೆ ಅವರೆಂದಿಗೂ ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡುತ್ತಿರಲಿಲ್ಲ.

ಆವಳಿತದ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳು ವಿಶೇಷವಾಗಿ ಚರ್ಚಿಸಲ್ಪಟ್ಟುವು. ತೂಕದ ಮತ್ತು ಅಳತೆಗಳು ನಾಧನಗಳಿಗೆ ಸಂಬಂಧಪಟ್ಟುದು ಅವುಗಳ ಪ್ಯೆಕಿ ಬಂದಾಗಿದ್ದಿತು. ಖಾನಗಿ ವರ್ತಕ ಮಂಡಲಿಯವರು ತಯಾರ್ಮಾಡುವ ಈ ಪದಾರ್ಥಗಳ ವಿಷಯದಲ್ಲಿಯೂ, ಅವುಗಳ ವ್ಯಾಪಾರದ ವಿಷಯದಲ್ಲಿಯೂ, ಅವರುಗಳೊಡನೆ ಸ್ಪರ್ಧೆಗೆ ನಿಲ್ಲುವ ಉದ್ದೇಶವಾವುದೂ ಸರ್ಕಾರದವರಿಗೆ ಇಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿಸಲು ಅಪೇಕ್ಷಿಸುತ್ತೇನೆ. ಬೆಂಚ್ ಮ್ಯಾಜಿಸ್ಟ್ರೇಟರುಗಳಿಗೆ ಸಂಬಂಧಪಟ್ಟುದು ಇಲ್ಲಿ ಚರ್ಚಿಸಲ್ಪಟ್ಟವುಗಳ ಪ್ಯೆಕಿ ಮತ್ತೊಂದು ವಿಷಯವಾಗಿದ್ದಿತು. ಈ ವಿಷಯದಲ್ಲಿ ಸರ್ಕಾರದವರು ತಾವು ಅನುಸರಿಸುವುದಾಗಿ ಪ್ರಸಿದ್ಧಪಡಿಸಿರುವ ಕಾರ್ಯಕ್ರಮದಿಂದ ಏಮ್ಮೆಟ್ಟಿ ಹೋಗುವ ಅಪೇಕ್ಷೆ ಯಾವುದನ್ನೂ ಇಟ್ಟುಕೊಂಡಿಲ್ಲವೆಂದು ತಾವುಗಳು ದೃಢವಾಗಿ ನಂಬಬಹುದು. ಈಗಣ ಬೆಂಚ್ ಕೋರ್ಟುಗಳ ರಚನೆಯ ವಿಷಯವನ್ನು ಕುರಿತು ಹಲವು ಮಂದಿ ಮೆಂಬರುಗಳು ತಿಳಿಸಿದ ವಿಮರ್ಶೆಗಳನ್ನು ಸರ್ಕಾರದವರು ಗಮನಿಸಿದ್ದಾರೆ. ಮತ್ತು ಈ ಕೋರ್ಟುಗಳಲ್ಲಿನ ಕೆಲಸವು ಉತ್ತಮ ರೀತಿಯಲ್ಲಿ ನಡೆಯುವಂತೆ ಮಾಡುವ ವಿಚಾರದಲ್ಲಿ ತಕ್ಕ ನಿರ್ಧಾರುಗಳನ್ನು ಕೈಗೊಳ್ಳಲು ಸಾಧ್ಯವಾದೀತೆಂದು ತೋರುತ್ತದೆ. ಫಾರೆಸ್ಟ್ ಇರಾಜಿಯ ಆಡಳಿತದ ಸಂಬಂಧದಲ್ಲಿ ಮೆಂಬರುಗಳು ಒತ್ತಿ ಹೇಳಿಕೊಂಡಿರುವ ಕುಂದುಕೊರತೆಗಳನ್ನು ನಮೂದು ಮಾಡಿಕೊಂಡಿದ್ದೇವೆ. ಮತ್ತು ಅವಶ್ಯಕ ಕಂಡ ಪೇರೆ ನಿಬಂಧನೆಗಳನ್ನು ತಿದ್ದುವಾಟು ಮಾಡುವುದರ ಮೂಲಕ ಇವುಗಳನ್ನು ನಿವಾರಣೆ ಮಾಡಲು ಸಾಧ್ಯವಾದೀತೆಂದು ನಂಬಿದ್ದೇವೆ. ಹಿಸ್ಸೇದಾರರುಗಳಿಗೆ ಸಂಬಂಧಪಟ್ಟ ವಿಚಾರದಲ್ಲಿ ಕೇವಲ ಅನಕ್ತಿಯಿಂದ ಚರ್ಚೆಯು ನಡೆಯಿತು. ಈ ಕ್ಲಿಷ್ಟ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಹುಕುಂ ಬಗ್ಗೆ ನಲಹೆಗಳನ್ನು ನೂಚಿಸುವುದಕ್ಕಾಗಿ ಒಂದು ಕಮಿಟಿಯನ್ನು ನೇಮಕಮಾಡಲು ಸರ್ಕಾರದವರು ಸಮ್ಮತಿಸಿವ್ದಾರೆ. ಈ ವಿಚಾರವು ತಮ್ಮೆಲ್ಲರಿಗೂ ತಿಳಿದೇ ಇದೆ.

ಗೋವಧೆಯನ್ನು ನಿರೋಧಪಡಿಸುವ ಬಗ್ಗೆ ಕಾನೂನನ್ನೇರ್ಪಡಿಸಿ ಆಚರಣೆಗೆ ತರಬೇಕೆಂಬ ನಿರ್ಣಯಕ್ಕೆ ಈ ಅಧಿವೇಶನದಲ್ಲಿಯೂ ಮತ್ತು ಹಿಂದಣ ಅಧಿವೇಶನಗಳಲ್ಲಿಯೂ ಈ ಸಭೆಯ ಮೆಂಬರುಗಳು ಸಂಪೂರ್ಣವಾಗಿ ಗಮನಕೊಟ್ಟು ಚರ್ಚೆಮಾಡಿರುತ್ತಾರೆ. ಈ ವಿಷಯದಲ್ಲಿ ಪರಸ್ಪರ ವಿರುದ್ಧವಾದ ನಾನಾ ಅಭಿಪ್ರಾಯಗಳು ವ್ಯಕ್ತಪಡಿಸಲ್ಪಟ್ಟಿವೆ. ಗೋವಧೆಯನ್ನು ನಿರೋಧಗೊಳಿಸಬೇಕೆಂಬ ನಲಹೆಯ ವಿಷಯವಲ್ಲಿ ಸರ್ಕಾರದವರಿಗೆ ಸಂಪೂರ್ಣವಾಗಿ ಸಹಾನುಭೂತಿಯಿದೆಯೆಂದು ಸರ್ಕಾರದವರ ಪರವಾಗಿ ತಿಳಿಸಲಚ್ಚಿಸುತ್ತೇನೆ. ಆದರೆ ಈ ವಿಷಯದಲ್ಲಿ ಅನೇಕ ತೊಂದರೆಗಳಿವೆ. ಅಲ್ಲದೆ ಈ ವಿಷಯವನ್ನು ಸಾವಧಾನಪೂರ್ವಕವಾಗಿಯೂ, ಪಕ್ಷಪಾತವಿಲ್ಲದೆಯೂ ಪರ್ಯಾಲೋಚಿಸಬೇಕಾಗಿದೆ. ಈ ವಿಷಯವನ್ನು ಪರ್ಯಾಲೋಚಿಸಿ ನಲಹೆಗಳನ್ನು ಒಪ್ಪಿಸುವ ಕೆಲಸವನ್ನು ಒಂದು ಕಮಿಟಿಯವರಿಗೆ ವಹಿಸಲಾಗುವುದು. ಸರ್ವರಿಗೂ ನಮ್ಮತವಾದ ರೀತಿಯಲ್ಲಿ ಈ ವಿಷಯವನ್ನು ತೀರ್ಮಾನ ಮಾಡಲು ಸರ್ಕಾರದವರಿಗೆ ಅವರಿಂದ ಸಹಾಯವಾಗುವುದೆಂದು ನಾನು ಹಾರೈಸುತ್ತೇನೆ.

ಈ ಅಧಿವೇಶನದ ಕಾರ್ಯಗಳು ಮುಗಿದಿವೆ. ಈ ಅಧಿವೇಶನದಲ್ಲಿ ತಾವೆಲ್ಲರೂ ಉತ್ಸಾಹದಿಂದ ಕೆಲಸಮಾಡಿರುವುದಕ್ಕಾಗಿ ತಮ್ಮೆಲ್ಲರಿಗೂ ವಂದನೆಗಳನ್ನು ಸಮರ್ಪಿಸುತ್ತೇನೆ. ಅಲ್ಲದೆ ತಾವೆಲ್ಲರೂ ಸಕಾಲದಲ್ಲಿ ಸುರಕ್ಷಿತವಾಗಿ ತಮ್ಮತಮ್ಮ ಸ್ಥಳಗಳನ್ನು ಸೇರುವಂತಾಗಲೆಂದು ಹಾರೈಸುತ್ತೇನೆ.

ಪಾಳ್ಯದ ವೆಂಕಟಾಚಲ ಪಂಡಿತರ ಔಷಧಗಳು.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಿಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನು ರಕ್ತವೃದ್ಧಿಯನ್ನು ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0-12-0

ರೋಕಾಮಯಹರ ಕಸ್ತೂರಿ ಮಾತ್ರೆಗಳು.

("ರಿಜಿಸ್ಟರ್ಡ್ ಟ್ರೇಡ್ ಮಾರ್ಕ್.")

ದೊಡ್ಡವರ ಶೀತ ನೆಗಡಿ, ಶೀತ ವಾತ ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇನ್ಫ್ಲುಯೆಂಜ, ಪ್ಲೇಗು ಜ್ವರಗಳನ್ನೂ ಮಕ್ಕಳ ಮಂದ, ಎಳವು, ಜ್ವರಗಳು, ವಾಯುಕೆಮ್ಮಲು, ಮಲಬದ್ಧ, ಹೊಟ್ಟೆನೋವು, ಇನ್ನೂ ಅನೇಕ ರೋಗಗಳನ್ನೂ ನಂಬಿಕೆಯಾಗಿ ಗುಣಪಡಿಸುತ್ತವೆ.

ಗೋಷಾ ಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಪ್ರಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳ ವರೆಗಿರುವ ಸೀಸೆ ಬೆಲೆ 0-4-0. 6 ಕ್ಕೆ ರೂ. 1-4-0. 12 ಸೀಸೆ ರೂ. 2 7-0. 25 ಸೀಸೆಗೆ ರೂ. 4-10-0. ಪೋಸ್ಟೇಜು ಬೇರೆ. ನಮ್ಮ ವಿಳಾಸ—

[34-46] ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಧಂಗಾರದಂತ ನಮಯ I ರಿಜಿಸ್ಟರಾದ "ಸಿ" ಟ್ರೈಂ ಪೀಸ್ ಮುಘತ್ತಾಗಿ ಸಿಕ್ಕುವದು. ಧಂಗಾರದಂತ ನಮಯ II

"ತಾರಾ" ಲೀವರ್



ಎಂಬ ಈ ಪಾಕೆಟ್ ಗಡಿಯಾರವನ್ನು 18 ಕ್ಯಾರೆಟ್ ರೋಲ್ಡ್ ಗೋಲ್ಡ್ ಧಂಗಾರದಿಂದ ತಯಾರಿಸಿದೆ. ಇದರ ಸಾಮಾನುಗಳು ಬಹು ಬಲವ್ಯವಾದವು. ಐದಾರು ಘಂಟೆಯನ್ನು ತೋರಿಸುವದು. ಈ ಗಡಿಯಾರವು 5 ವರುಷಗಳ ವರಿಗೆ ಕೆಡದೆಂದು ಅದರ ಕೇಸಿನ ಮೇರೆ ಮುದ್ರಿಸಿರುವದು. ನೋಡಲು ಬಹು ಸುಂದರವಾಗಿಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವದು. ಈ ಪಾಕೆಟ್ ಗಡಿಯಾರವನ್ನು ಕೊಳ್ಳುವವರಿಗೆ ಮೇಲ್ಕಂಡ "ಸಿ" ಟ್ರೈಂ ಪೀಸ್ ಇನಾಮಾಗಿ ಕೊಡುವೆವು.

ಇನಾಂ ಟ್ರೈಂ ಪೀಸ್ ಸಹಿತ ಗಡಿಯಾರ 1 ಕ್ಕೆ ರೂ. 5-0-0.

[3-4] ವಿಳಾಸ: ಪಾರ್ಕ್ ಪಾಪ್ಯುಲರ್ ವಾಚ್ ಕಂಪನಿ, ಪೋಸ್ಟ್ ಬಾಕ್ಸ್ ನಂ. 265, ಮದರಾಸ್.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

(Nitrate of Soda 15-16 per cent. N)

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ

ನೈಟ್ರೋಜನ್ ಸಸ್ಯಾಹಾರವು

15-16% ಅಂದರೆ ಮಾನು ವ ಒಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ಪಾಲಷ್ಟು ಜಾಸ್ತಿಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವ್ಯಾ ದೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇವನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಧತ್ತ, ಕಬ್ಬು, ತೆಂಗು, ಅಡಿಕೆ, ಮಾವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಚಾ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮಾನು ಗೊಬ್ಬರ ಮೈರೆ ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿಕೊಡುತ್ತದೆ.

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಹಸ್ಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥರಾಗಿ ಪಡೆಯಬಹುದು.

CHILEAN NITRATE COMMITTEE,
Post Box 469, CALCUTTA.

[231-8]

ಮೈಸೂರು ಪ್ರಜಾಪ್ರತಿನಿಧಿ ಸಭೆ

ಬಡ್ಜೆಟ್ ಅಧಿವೇಶನ.

ಕೆಲವು ಮುಖ್ಯವಾದ ಪ್ರಶ್ನೋತ್ತರಗಳು.

ಸೆಸ್ ಫಂಡಿನ ಸ್ಕೂಲುಗಳು.

ಪ್ರಶ್ನೆ.—ವಿದ್ಯಾಭ್ಯಾಸದ ಸೆಸ್ಸಿನಿಂದ ಬಂದ ಹೊಬಲಗನ್ನು ಪಯೋಗಿಸಿ ಹೊಸದಾಗಿ ಎಷ್ಟು ಸ್ಕೂಲುಗಳನ್ನು ಸ್ಥಾಪಿಸಬೇಕೆಂದು ಮಂಜೂರುಮಾಡ ರಾಯಿತು? ಈ ಪೈಕಿ ಎಷ್ಟು ಸ್ಕೂಲುಗಳಲ್ಲಿ ಕೆಲಸವು ಪ್ರಾರಂಭವಾಗಿದೆ? ಈ ನಲುವಾಗಿ ವರ್ಷಂ ಪ್ರತಿಯಲ್ಲಿಯೂ ಬೀಳತಕ್ಕ ಹೆಚ್ಚವೆಷ್ಟು? ಮಂಜೂರು ಮಾಡಲ್ಪಟ್ಟಿರತಕ್ಕ ಸ್ಥಳಗಳಲ್ಲೆಲ್ಲಾ ಸ್ಕೂಲುಗಳು ಸ್ಥಾಪಿಸಲ್ಪಟ್ಟಿವೆಯೇ? ಇಲ್ಲವಾದರೆ ಎಷ್ಟು ಸಂದರ್ಭಗಳಲ್ಲಿ ಮೊದಲು ಮಂಜೂರಾದ ಸ್ಥಳವನ್ನು ಬಿಟ್ಟು ಬೇರೆ ಸ್ಥಳದಲ್ಲಿ ಸ್ಕೂಲನ್ನು ಕಟ್ಟಲಾಗಿದೆ?

ಸರ್ಕಾರದ ಉತ್ತರ.—ವಿದ್ಯಾಭ್ಯಾಸದ ಸೆಸ್ಸು ಫಂಡಿನಿಂದ ಮಂಜೂರು ಮಾಡಲ್ಪಟ್ಟ ಹೊಸ ಸ್ಕೂಲುಗಳ ಸಂಖ್ಯೆ 184. ಇವುಗಳ ಪೈಕಿ 177 ರಲ್ಲಿ ಕೆಲಸವು ಪ್ರಾರಂಭವಾಗಿದೆ. ಈ ಸ್ಕೂಲುಗಳಿಗೋಸ್ಕರ ಸಾಲಿಯಾನಾ 50,547 ರೂಪಾಯಿ ಹೆಚ್ಚಮಾಡಲ್ಪಡುತ್ತದೆ. ಸ್ವಲ್ಪ ಹೆಚ್ಚುಕಡಮೆ ಎಲ್ಲಾ ಸಂದರ್ಭಗಳಲ್ಲಿಯೂ ಸ್ಕೂಲುಗಳು ಯಾವ ಯಾವ ಸ್ಥಳಗಳಿಗಾಗಿ ಮಂಜೂರು ಮಾಡಲ್ಪಟ್ಟಿದ್ದುವೋ ಆಯಾ ಸ್ಥಳಗಳಲ್ಲಿಯೇ ಅವು ಸ್ಥಾಪಿಸಲ್ಪಟ್ಟಿವೆ. ವರ್ಗಾವರ್ಗಿಗಳು ಯಾವುದಾದರೂ ಇದ್ದರೆ ಅವುಗಳಿಗೆ ಸಂಬಂಧಪಟ್ಟ ಸಮಾಚಾರವು ಈ ಕೂಡಲೆ ದೊರೆಯುವಹಾಗಿಲ್ಲವೆಂಬುದಾಗಿ ವರದಿಯಾಗಿದೆ.

ಶಿವಮೊಗ್ಗೆಯ ಕೆರೆಗಳು.

ಪ್ರಶ್ನೆ.—ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಒಡೆದುಹೋದ ಕೆರೆಗಳ ಸಂಖ್ಯೆ ಎಷ್ಟು? ಇವುಗಳ ಪೈಕಿ ಎಷ್ಟಕ್ಕೆ ದುರಸ್ತಿ ಕಾಮಗಾರಿಯು ಆಗಿದೆ ಮತ್ತು ಎಷ್ಟಕ್ಕೆ ಆಗಿಲ್ಲ? ಒಡೆದುಹೋದ ಈ ಕೆರೆಗಳ ದುರಸ್ತಿ ಕಾಮಗಾರಿಯನ್ನು ತ್ವರ್ಯವಾಗಿ ನಡಿಸುವ ಬಗ್ಗೆ ಏರ್ಪಾಡುಗಳನ್ನು ಮಾಡಿದೆಯೇ?

ಪಬ್ಲಿಕ್ ವರ್ಕ್ಸ್ ಇರಾಖೆಯ ಸರ್ಕಾರದ ಸೆಕ್ರೆಟರಿಯವರ ಉತ್ತರ.—ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಒಡೆದುಹೋದ ಕೆರೆಗಳ ಸಂಖ್ಯೆ 330 (ದುರಸ್ತಾಗದೆ ಉಳಿದಿರುವ ಮತ್ತು ಮೊದಲು ದುರಸ್ತಿಯಾಗಬೇಕಾಗಿರುವ 4,857 ಕೆರೆಗಳು ವಿನಾ.) ಇವುಗಳ ಪೈಕಿ ಯಾವುದಕ್ಕೂ ದುರಸ್ತಿ ಕಾಮಗಾರಿಯಾಗಿರುವುದಿಲ್ಲ. ಕೆರೆಗಳಿಗೆ ಜಾಗ್ರತೆಯಾಗಿ ದುರಸ್ತಿ ಕಾಮಗಾರಿಯನ್ನು ನಡಿಸುವ ಬಗ್ಗೆ ಮುಂದಿನ ಏರ್ಪಾಡುಗಳನ್ನು ಮಾಡಲಾಗುವುದು.

ಗಂಧದ ಕಳುವು.

ಪ್ರಶ್ನೆ.—(a) ಗಂಧದ ಮರದ ಕಳವು ನಡೆಯದಂತೆ ಮಾಡುವ ಬಗ್ಗೆ ಇರಾಖೆಯವರು ಇಟ್ಟಿರುವ ಪೋಲೀಸ್ ಸಿಬ್ಬಂದಿಯ ವೆಚ್ಚವು ಎಷ್ಟು? (b) ಸದರಿ ಕಾರ್ಯದ ಬಗ್ಗೆ ಇಡಲ್ಪಟ್ಟಿರುವ ಫಾರೆಸ್ಟ್ ಸಿಬ್ಬಂದಿಗಾಗಿ ಎಷ್ಟು ಹೊಬಲಗು ವೆಚ್ಚವಾಗುತ್ತಿದೆ? (c) ಈ ಕೆಳಗೆ ಕಂಡ ಬಾಬುಗಳಿಗಾಗಿ ಆಗುವ ವೆಚ್ಚವು ಎಷ್ಟು:—(1) ಪ್ರಯಾಣದ ಭತ್ಯ (ಟ್ರಾವಲಿಂಗ್ ಅಲೋಯೆನ್ಸ್). (2) ಪೆಡ್ಡುಗಳು (ಗುಡಿನಲುಗಳು) ಮತ್ತು ಹಂಗಾಮಿಯಾದ ಕಟ್ಟಡಗಳು. (d) ಈ ವಿಶೇಷ ತರಹೆಯ ಇರಾಖೆಯಲ್ಲಿ ಪಾನ್ರವವಾದ ಅಭಿವೃದ್ಧಿಯೇನಾದರೂ ಕಂಡುಬಂದಿದೆಯೆ? ಸದರಿ ಸಿಬ್ಬಂದಿಯನ್ನಿಟ್ಟುದರ ಫಲ ತಾಂತವಾಗಿ ವರಮಾನವೇನಾದರೂ ಆಗಿದೆಯೇ? (e) ಸಿಬ್ಬಂದಿಯನ್ನು ಇಟ್ಟ ತಾರೀಖಿನ ರಾಗಾಯಿತು 1926 ನೆಯ ಇಸವಿಯ ಮಾರ್ಚ್ ತಿಂಗಳು ಆಖೈರ್ ವರೆಗೆ ಆದಕ್ಕೆ ಸಂಬಂಧಪಟ್ಟ ರೆಕ್ಕಗಳನ್ನು ಸರ್ಕಾರದವರು ದಯೆ [illegible]

ಸರ್ಕಾರದ್ಫ್ರೋಕರ್ ಮತ್ತು ರಜಿಸ್ಟ್ರೇಟರ್ ಇರಾಖೆಗಳ ಸೆಕ್ರೆಟರಿಯವರು ಹೇಳಿದ ಉತ್ತರ.—(a) ತಿಂಗಳೊಂದಕ್ಕೆ ರೂ. 2,011-8-0. (b) ತಿಂಗಳೊಂದಕ್ಕೆ 554 ರೂಪಾಯಿಗಳು. (c) (1) ಪ್ರಯಾಣದ ಭತ್ಯಕ್ಕಾಗಿ ಪೋಲೀಸ್ ಸಿಬ್ಬಂದಿಗೆ ರೂ. 4,563-14-0 (1926 ನೇ ಇಸವಿ ಮಾರ್ಚ್ ತಿಂಗಳ ವರೆಗೆ.) ಫಾರೆಸ್ಟ್ ಸಿಬ್ಬಂದಿಗೆ ರೂ. 3,909-4-0 (1926 ನೇ ಇಸವಿ ಮಾರ್ಚ್ ತಿಂಗಳ ವರೆಗೆ.) (c) (2) ಪೆಡ್ಡುಗಳು ಮತ್ತು ಹಂಗಾಮಿ ಕಟ್ಟಡಗಳಿಗಾಗಿ ರೂ. 5,231-8-0 (4 ಬಿಟ್ ಪೋಸ್ಟುಗಳನ್ನು ಕಟ್ಟುವುದಕ್ಕಾಗಿ ಮುಂಗಡವಾಗಿ ಕೊಡಲ್ಪಟ್ಟ 3,200 ರೂಪಾಯಿಗಳೂ ಮತ್ತು 7 ಬಿಟ್ ಪೋಸ್ಟುಗಳಿಗೆ ಬಾಡಿಗೆಗಾಗಿ ಕೊಡಲ್ಪಟ್ಟ 75 ರೂಪಾಯಿ 8 ಆಣೆಗಳೂ ಸಹ ಈ ಹೊಬಲಗಿನಲ್ಲಿ ಸೇರಿವೆ). (d) ಹೌದು. ಇದು ಸಾಕ್ಷಾತ್ತಾಗಿ ವರಮಾನವನ್ನು ಗಳಿಸುವುದಕ್ಕಾಗಿ ಏರ್ಪಟ್ಟ ಶಿಬ್ಬಂದಿಯಲ್ಲ. ಗಂಧದ ಮರದ ಕಳುವನ್ನೂ ಸಂಸ್ಥಾನದ ನರಹದ್ದು ನಿಂಚಾಚೆಗೆ ಗಂಧದ ಮರವನ್ನು ಕಳ್ಳತನದಿಂದ ಸಾಗಿಸುವುದನ್ನೂ ನಿಲ್ಲಿಸುವುದಕ್ಕೋಸ್ಕರ ಮಾಡಬೇಕಾದ ಕೆಲಸ ಕಾರ್ಯಗಳನ್ನು ನಡಿಸುವ ಬಗ್ಗೆ ಏರ್ಪಟ್ಟ ಶಿಬ್ಬಂದಿಯಾಗಿದೆ. ಈ ಶಿಬ್ಬಂದಿಯು ನಡಿಸಿದ ಏರ್ಪಾಟುಗಳ ಫಲತಾಂಶವಾಗಿ ಕಾರ್ಕಳ ತಾಲ್ಲೂಕಿನಲ್ಲಿ ಕಳ್ಳತನದಿಂದ ಸಾಗಿಸಿದ ಗಂಧದ ಮರಗಳೇ ಮುಖ್ಯವಾಗಿ ಎಣ್ಣೆಗಾಗಿ ಭಟ್ಟಿ ಇಳಿಸಲ್ಪಡುತ್ತಿದ್ದುದು ಕಡಮೆಯಾಯಿತು. ಈ ರೀತಿ ಭಟ್ಟಿ ಇಳಿಸುವ ಯಂತ್ರಗಳ ಸಂಖ್ಯೆಯು 38 ರಿಂದ 6 ಕ್ಕೆ ಇಳಿಯಿತು. ಇದರಿಂದ 37,000 ರೂಪಾಯಿ ಬೆಲೆ ಬಾಳತಕ್ಕ 25 ಟನ್‌ಗಳಷ್ಟು ಗಂಧದ ಮರವಾದರೂ ಅಲ್ಲಿಗೆ ಸಾಗಿಹೋಗುವುದು ಕಡಮೆಯಾದಂತೆ ಕಂಡುಬರುತ್ತದೆ. ಪೂರ್ವದಿಕ್ಕಿನ ಎಲ್ಲೆಯಲ್ಲಿ ಖಾಸಗಿ ಗಂಧದ ಮರದ ವ್ಯಾಪಾರವೂ ಕೂಡ 36 ಟನ್‌ಗಳಿಂದ 2 ಟನ್‌ಗಳಿಗೆ ಇಳಿದಿರುತ್ತದೆ. ಈ ರೀತಿಯಾಗಿ ಕಳುವಾಗದಂತೆ ಬಂದೋಬಸ್ತುಮಾಡಲ್ಪಟ್ಟ ಸ್ವತ್ತಿನ ಬಲೆಯು 60 ಸಾವಿರದಿಂದ 70 ಸಾವಿರ ರೂಪಾಯಿ ಆಗಬಹುದೆಂದು ಅಂದಾಜಾಗಿದೆ. (e) ಯಾವ ರೆಕ್ಕಗಳು ಬೇಕಾಗಿವೆಯೆಂಬುದು ನಿಷ್ಪವಾಗಿಲ್ಲ.

ನೂಳಿಕೆರೆ ಗನ್ನಾ ಫಸಲು.

ಪ್ರಶ್ನೆ.—(a) ಒಡನ ಗಿರಿತ್ತಾಲ್ಲೂಕಿನಲ್ಲಿರುವ ನೂಳೇಕೆರೆಯ ಕೆಳಗಿರುವ ಜಮೀನುಗಳನ್ನು ಮಿ॥ ಎಲ್ಬರ್‌ಫೋರ್ಸ್ ಎಂಬುವರಿಗೆ ಕೊಡಲಾಗಿದೆಯೇ? ಈ ಜಮೀನುಗಳ ಒಟ್ಟು ವಿಸ್ತೀರ್ಣವೆಷ್ಟು? ಮತ್ತು ಸದರಿ ಜಮೀನುಗಳನ್ನು ಯಾವ ಉದ್ದೇಶಕ್ಕಾಗಿ ಅವರಿಗೆ ಕೊಡಲಾಗಿತ? (b) ಮೇಲ್ಕಂಡ ಜಮೀನುಗಳನ್ನು ಕೊಡುವ ನಂಭವದಲ್ಲಿ ಸರ್ಕಾರದವರಿಗೂ ಮತ್ತು ಮಿ॥ ಎಲ್ಬರ್‌ಫೋರ್ಸ್‌ರವರಿಗೂ ನಡೆದಿರುವ ಒಪ್ಪಂದಗಳು ಯಾವುವು? ಪ್ರಜೆಗಳ ತಿಳುವಳಿಕೆಯ ಬಗ್ಗೆ ಸದರಿ ಸಂಬಂಧದಲ್ಲಿನ ದಸ್ತಾವೇಜುಗಳನ್ನು ಓದಗಿಸಲಾಗುವುದೇ? (c) ಸರ್ಕಾರದವರು ಮಿ॥ ಎಲ್ಬರ್‌ಫೋರ್ಸ್‌ರವರಿಗೆ ತೋರಿಸಿರುವ ರಿಯಾಯಿತಿಯನ್ನು ಮೈಸೂರು ಸಂಸ್ಥಾನದ ದೇಶೀಯ ಪ್ರಜೆಗಳಿಗೂ ಕೂಡ ತೋರಿಸುವರೇ? ಮಿ॥ ಎಲ್ಬರ್‌ಫೋರ್ಸ್‌ರವರಿಗೆ ಕೊಡಲ್ಪಟ್ಟ ಜಮೀನುಗಳಿಗೆ ಇತರ ಯಾವುದಾದರೂ ದರಖಾಸ್ತುಗಳು ಬಂದಿದ್ದುವೇ? ಹಾಗೆ ಬಂದಿದ್ದಲ್ಲಿ ಸರ್ಕಾರದವರು ಅವುಗಳನ್ನು ಯಾವ ರೀತಿಯಲ್ಲಿ ಪೈಸರ್ಮಾಡಿ ರುತ್ತಾರೆ? (d) ಕರಾರಿನ ಯಾವ ಯಾವ ಪತ್ರುಗಳನ್ನು ಮಿ॥ ಎಲ್ಬರ್‌ಫೋರ್ಸ್‌ರವರು ಇದುವರೆಗೆ ನಡೆಯಿಸಿರುತ್ತಾರೆ? ಈ ವಿಷಯದಲ್ಲಿ ಒಂದು ತಪಶೀರಾದ ವರದಿಯನ್ನು ತರಿಸಿಕೊಂಡು ಜನಗಳ ತಿಳುವಳಿಕೆಗಾಗಿ ಒದಗಿಸಲಾಗುವುದೇ?

ಸರ್ಕಾರದ ಚೀಫ್ ಸೆಕ್ರೆಟರಿಯವರು ಹೇಳಿದ ಉತ್ತರ.—(a) ಹೌದು. ಮಿ॥ ಬ್ಯಾಟರ್ಸ್‌ಬಿ ಅಂಡ್ ಕಂಪನಿಯವರಿಗೆ (ಮಿ॥ ಎಲ್ಬರ್‌ಫೋರ್ಸ್‌ರವರ ಮೂಲಕ) ಕಬ್ಬಿನ ಸಾಗುವಳಿಯ ಬಗ್ಗೆ 500 ಕೆರೆಗಳನ್ನು ಕೊಟ್ಟಿದೆ. (b) ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಡಿಸಿ ಸದರಿ ಜಮೀನುಗಳನ್ನು ಕೊಡಲಾಗಿದೆ—(1) ಎಕರೆಯೊಂದಕ್ಕೆ 50 ರೂಪಾಯಿಗಳಂತೆ ಜಮೀನುಗಳಿಗೆ ಬೆಲೆಯನ್ನು ಕೊಡಬೇಕು. (2) ಜಮೀನುಗಳನ್ನು ಸ್ವಾಧೀನಪಡಿಸುವುದಕ್ಕೆ ಮೊದಲು ಮೇಲ್ಕಂಡ ಬೆಲೆಯಲ್ಲಿ ಶೇಕಡಾ 20 ಭಾಗವನ್ನು ಕಟ್ಟಬೇಕು. ಉಳಿದ ಮೊಬಲಗನ್ನು ಏಮು ಸಾಲಿಯಾನಾ ಸಮ ಕಂತುಗಳಲ್ಲಿ ಕಟ್ಟಬೇಕು. ಅವಧಿಗೆ ಸರಿಯಾಗಿ ಕಂತುಗಳನ್ನು ಕಟ್ಟದಹೋದಲ್ಲಿ ಜಮೀನುಗಳನ್ನು ವಾಪಸು ತೆಗೆದುಕೊಳ್ಳಲು ಸರ್ಕಾರದವರಿಗೆ ಅಧಿಕಾರವಿರತಕ್ಕದ್ದು. (3) ಕ್ರಯದ ಮೊಬಲಗು ಪೂರ್ತಿಯಾಗಿ ಪಾವತಿಯಾದ ಹೊರತು ಜಮೀನುಗಳಿಗೆ (ಟ್ರೈಟರ್ ಡೀಡ್) ಪಟ್ಟೆಗಳನ್ನು ಕೊಡರಾಗುವುದಿಲ್ಲ. ಪರ್ಯವಸಾನದಲ್ಲಿ ಒಂದು ಸಕ್ಕರೆಯ ಕಂಪನಿಗೆ ವರ್ಗಾಯಿಸಲ್ಪಡುವ ಬಗ್ಗೆ ಸ್ವಲ್ಪ ಜಮೀನನ್ನು ಕೊಡಬೇಕೆಂಬ ಅವಿಯಲ್ಲಿ ನಡೆದ ಕಾಗದ ಪತ್ರಗಳ ವಿಷಯದಲ್ಲಿ ಸರ್ಕಾರದವರಿಗೆ ಇರುವ ಬದ್ಧತೆಯನ್ನೆಲ್ಲಾ ಪರಿಹರಿಸಿ ಮತ್ತು ಲ್ಯಂಫ್ಟಾ ಕಂಪನಿಯೊಂದನ್ನು ಸ್ಥಾಪಿಸುವ ವಿಷಯವಾಗಿ ಸರ್ಕಾರದವರಿಗೂ ಮಿ॥ ಬ್ಯಾಟರ್ಸ್‌ಬಿ ಅಂಡ್ ಕಂಪನಿಯವರಿಗೂ ಹಿಂದೆ ನಡೆದಿದ್ದ ಒಪ್ಪಂದವು ಪೂರ್ತಿಯಾಗಿ ರದ್ದಾದಂತೆ ಭಾವಿಸುವುದಕ್ಕೆ ನಮ್ಮತಿಪಟ್ಟ ಸದರಿ ವರ್ತಕ ಮಂಡಲಿಯವರು (ಮಿ॥ ಬ್ಯಾಟರ್ಸ್‌ಬಿ ಅಂಡ್ ಕಂಪನಿಯವರು) ಒಂದು ಇಂಡೆಮ್ನಿಟಿ ಬಾಂಡನ್ನು ಬರೆದುಕೊಡಬೇಕು. ಈ ದಸ್ತಾವೇಜುಗಳನ್ನು ಪ್ರಕಟನುಪಡಿಸುವುದು ಅವಶ್ಯವೆಂದು ಸರ್ಕಾರದವರು ಭಾವಿಸುವುದಿಲ್ಲ. (4) ಸದರಿ ಪ್ರದೇಶದಲ್ಲಿ ಅವೇ ತರಹೆಯ ಜಮೀನುಗಳಿಗೆ ಕಂಪಾಮುದ ದರಗಳು ಹೇಗಿರುವುವೋ ಅದರಂತೆಯೇ ಈ ಜಮೀನುಗಳಿಗೂ ಕಂದಾಯಗಳನ್ನು ಕೊಡಬೇಕಾಗುವುದು. (5) ಮೈಸೂರು ಲ್ಯಾಂಡ್ ರೆವಿನ್ಯೂ ಕೋಡು ಮತ್ತು ಅದಕ್ಕೆ ಅನುಸಾರವಾಗಿ ಏರ್ಪಟ್ಟ ನಿಬಂಧನೆಗಳ ಮೇರೆಗೆ ವ್ಯವಸಾಯೋದ್ದೇಶಕ್ಕಾಗಿಗಾಗಿ ಜಮೀನುಗಳನ್ನು ಕೊಡುವುದಕ್ಕೆ ನಂಬಂಧಪಟ್ಟ ಕಾನೂನನ್ನು ಈ ಗ್ರಾಂಟು ಎಲ್ಲಾ ಭಾಗಗಳಲ್ಲಿಯೂ ಅನುಸರಿಸಿ ಇರಬೇಕು. (6) ಈ ಪ್ರಶ್ನೆಯು ವಿಶದವಾಗಿಲ್ಲ. ಅದೇ ವಿಧವಾದ ದರಖಾಸ್ತುಗಳನ್ನು ಆಯಾ ವಿದ್ಯಮಾನಗಳಿಗೆ ತಕ್ಕಂತೆ ಪರ್ಯಾಲೋಚಿಸಿ ವ್ಯವಸ್ಥೆಮಾಡಲಾಗುವುದು. (d) ಮೇಲೆ ನಮೂದಿಸಿರುವ (2) ಮತ್ತು (4) ನೆಯ ಷರತ್ತುಗಳನ್ನು ಮೇಲ್ಕಂಡ ವರ್ತಕ ಮಂಡಲಿಯವರು ನೆರವೇರಿಸಿರುತ್ತಾರೆ. ಅವರ ಪರವಾಗಿ ಮಿ॥ ಎಲ್ಬರ್‌ಫೋರ್ಸ್‌ರವರಿಗೆ 1925 ನೆಯ ಇಸವಿ ಅಕ್ಟೋಬರು 24 ಮತ್ತು 1926 ನೆಯ ಇಸವಿ ಜನವರಿ 15, ಈ ತಾರೀಖುಗಳಲ್ಲಿ ಜಮೀನುಗಳನ್ನು ಸ್ವಾಧೀನಪಡಿಸಲಾಯಿತು. ಈ ವಿಷಯವಾಗಿ ಬಂದ ತಪಶೀರ್ದಾರು ವರದಿಯನ್ನು ಪ್ರಕಟನುಪಡಿಸುವುದು ಅವಶ್ಯವೆಂದು ಸರ್ಕಾರದವರು ಭಾವಿಸುವುದಿಲ್ಲ.

ಆ॥ ಇಂಜನಿಯರ್ ಮಿ॥ ಎಂ. ಕೆ. ನರಸಿಂಹ ಅಯ್ಯರವರು ಡಿಸೆಂಬರ್ ತಾ. 31 ರ ತನಕ ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸಮಾಡತಕ್ಕದ್ದು.

ಮುಂದೆ ಹೇಳುವ ಅಮರ್ದಾರುಗಳ ವರ್ಗಾವರ್ಗಿಗಳನ್ನು ಹುಕುಂ ಮಾಡಿದೆ:—ಮಿ॥ ಗಳಾದ ಬಿ. ಕೆ. ಸುಬ್ಬರಾಯರು ಅರಿಸಿಕೆರೆಯಿಂದ ತೀರ್ಥಳ್ಳಿಗೆ, ಬಿ. ಲಂಗಯ್ಯನವರು ತೀರ್ಥಳ್ಳಿಯಿಂದ ಮಾಗಡಿಗೆ, ಟಿ. ವೆಂಕಟರಂಗಚಾರವರು ಗೋರಿಬಿದನೂರಿಗೆ, ಕೆ. ಸುಬ್ಬರಾಯರು ಗೋರಿಬಿದನೂರಿನಿಂದ ಗುಬ್ಬಿಗೆ, ಆರ್. ತಮ್ಮಾಜಿರಾಯರು ಕೋಲಾರಕ್ಕೆ, ಜಿ. ಪದ್ಮನಾಭರಾಯರು ಕೋಲಾರದಿಂದ ಶ್ರೀನಿವಾಸಪುರಕ್ಕೆ, ಕೆ. ಅನಂತಪದ್ಮನಾಭಯ್ಯ ನವರು ಮಾಗಡಿಯಿಂದ ಶ್ರೀರಂಗಪಟ್ಟಣಕ್ಕೆ, ಟಿ. ಕೃಷ್ಣರಾಯರು ಶ್ರೀರಂಗಪಟ್ಟಣದಿಂದ ಬೇಲೂರಿಗೆ, ಟಿ. ವಿ. ರಾಮಶಾಸ್ತ್ರಿಗಳು ಸಾಗರದಿಂದ ಆರಸಿಕೆರೆಗೆ, ಕೆ. ವೇದಾಂತಯ್ಯಂಗಾರ್ರು ಬೇಲೂರಿನಿಂದ ಚಳ್ಳಕೆರೆಗೆ, ಬಿ. ಪಿ. ನರಾಹ್‌ಯವರು ಚಳ್ಳಕೆರೆಯಿಂದ ಸಾಗರಕ್ಕೆ.

ಆದಿಕರ್ಣಾಟಕರ ಕಾನ್‌ಫರೆನ್ಸ್

ಚಾಮರಾಜನಗರ.

ಕಳೆದ ಮಾಹೆ 26 ನೇ ತಾ. ಶನಿವಾರ ಮಧ್ಯಾಹ್ನ 1 ಗಂಟೆಯಲ್ಲಿ ಆದಿಕರ್ಣಾಟಕರ ಪ್ರೈಮರಿ ಸ್ಕೂಲ್ ಎದುರಿನಲ್ಲಿ ಹಾಕಿದ್ದ ಚಪ್ಪರದಲ್ಲಿ ಈ ಸುತ್ತಮುತ್ತಿನ ಗ್ರಾಮಗಳ ಆದಿಕರ್ಣಾಟಕರ ಗಂಡನರು, ಹೆಂಗಸರು, ಮಕ್ಕಳು ಸೇರಿದ್ದರು. ಈ ಸಭೆಯಲ್ಲಿ ಚಾಮರಾಜನಗರದ ರೇಂಜ್ ಸ್ಕೂಲ್‌ಗಳ ಇನ್‌ಸ್ಪೆಕ್ಟರ್ ಮ|| ಜಿ. ಕೆ. ತಿಮ್ಮಣ್ಣಾಚಾರ್ಯರು ಮತ್ತು ಪಿ॥ ಗೋಪಾಲಸ್ವಾಮಿ ಐಯ್ಯರವರು ಮತ್ತು ಗೌರ್ನಮೆಂಟ್ ಮಿಡ್ಲ್ ಸ್ಕೂಲ್ ಮಾಸ್ತರುಗಳು ಇನ್ನು ಕೆಲವರು ದೊಡ್ಡಮನುಷ್ಯರೂ ದಯಮಾಡಿದ್ದರು.

ಮ॥ ಗೋಪಾಲಸ್ವಾಮಿ ಅಯ್ಯರು ಹೇಳಿದ್ದು ಏನೆಂದರೆ ಶ್ರೀಮದ್ ಮಹಾರಾಜಾ ಸರ್ಕಾರದವರು ಈಗ್ಗೆ 13 ವರುಷದ ಕೆಳಗೆ ಪಂಚಮಾ ದೋರ್ದಿಂಗ್ ಸ್ಕೂಲುಗಳನ್ನು ಮೈಸೂರು, ಬೆಂಗಳೂರು ಮತ್ತು ತುಮಕೂರಿನಲ್ಲಿ ಸ್ಥಾಪಿಸಿದ ಕಾಲದಲ್ಲಿ ಹುಡುಗರು ಸಿಕ್ಕುವುದೇ ಕಷ್ಟವಾಗಿತ್ತು. ಈಗ ಕೆಲವರು ಬಿ. ಎ., ಇಂಟರ್‌ಮೀಡಿಯೇಟ್, ಹೈ ಸ್ಕೂಲ್ ಮತ್ತು ಮಿಡ್ಲ್ ಸ್ಕೂಲುಗಳಲ್ಲಿ ಓದುವವರು ವರುಷೇ ವರುಷ ಹೆಚ್ಚಾಗುತ್ತಾ ಇರುತ್ತಾರೆ. ಬೇರೆ ತಾಲ್ಲೂಕು ಪ್ರೈಮರಿ ಸ್ಕೂಲುಗಳಲ್ಲಿಯೂ, 4 ನೇ ತರಗತಿಯಲ್ಲಿ ತೇರ್ಗಡೆ ಹೊಂದಿದವರಿಗೆ ಮೇಲ್ಕಂಡ ದೋರ್ದಿಂಗ್ ಸ್ಕೂಲುಗಳಲ್ಲಿ ಸ್ಥಳ ಸಿಕ್ಕುವುದು ಕಷ್ಟವಾಗಿರುವುದರಿಂದ ಈ ತಾಲ್ಲೂಕು ಸುತ್ತಮುತ್ತಲಿರುವ ಹುಡುಗರಿಗಾಗಿ ಇಲ್ಲೇ ಕೇರಿಯಲ್ಲಿ ನವ್ಯ ಒಂದು ದೋರ್ದಿಂಗಿಗಾಗಿ ಒಂದು ಮನೆ ಬಾಡಿಗೆಗೆ ತೆಗೆದುಕೊಂಡು ಸರ್ಕಾರಿ ಮಿಡ್ಲ್ ಸ್ಕೂಲುಗಳಿಗೆ ಹೋಗಿ ವಿದ್ಯಾಭ್ಯಾಸಮಾಡುವಂತೆ ಅನುಕೂಲಪಡಿಸಿ ಕೊಡುತ್ತೇವೆಂದು ವಾಗ್ದಾನಮಾಡಿದರು. ಮತ್ತು, ಪಂಚಮರ ಏಳಿಗೆ ವಿಚಾರವಾಗಿ ಹೆಂಡ ಸಾರಾಯಿ ಕುಡಿಯುವುದಕ್ಕೆ ತಂದೆತಾಯಿಗಳು ಮಕ್ಕಳನ್ನು ಅಂಗಡಿಗಳಿಗೆ ಕಳುಹಿಸದಂತೆಯೂ, ತಮ್ಮ ಮನೆಯಲ್ಲಿ ದನಗಳನ್ನೂ ಇತರ ವ್ಯಾಣಿಗಳನ್ನೂ ಕಾಪಾಡಿ ಪೋಷಿಸುವಂತೆ ತಮ್ಮ ಮಕ್ಕಳನ್ನು ಪ್ರೀತಿಕ್ಕೆ ಇರಿಸದೆ ಪೋಷಿಸುವಂತೆಯೂ, ರೋಗಾದಿಗಳು ಬಂದ ಕಾಲದಲ್ಲಿ ಒಳ್ಳೇ ಚಿಕಿತ್ಸೆಗಳನ್ನು ಮಾಡಿಸಬೇಕೆಂತಲೂ, ಮಾರಿ, ಪೀಡಾದಿ ದೇವತೆಗಳಿಗೆ ಆಡು ಕುರಿ ಕೋಣಗಳನ್ನು ಬಲಿ ಕೊಡುವುದು ತಪ್ಪೆಂತಲೂ, ತಾವು ತಮ್ಮ ಜಮೀನುಗಳಲ್ಲಿ ಮರಗಳು ಗಿಡಗಳು ನೆಟ್ಟು ಒಳ್ಳೇ ಗಾಳಿ, ಬೆಳಕು ಚೆನ್ನಾಗಿ ತಗಲುವ ಹಾಗೆ ಬೆಳಸಿದರೆ ಅಭಿವೃದ್ಧಿಯಾಗುತ್ತೆಂದು ತಿಳಿದಿದ್ದರೂ ತಮ್ಮ ಮಕ್ಕಳನ್ನು ತಾವು ಕಟ್ಟಿದ ಚಿಕ್ಕ ಮನೆಯಲ್ಲಿಯೇ ಕೊಳಕಾದ ಮತ್ತು ಇಕ್ಕಟ್ಟಾದ ಸ್ಥಳಗಳಲ್ಲಿ ಪಾನವಾಡುವುದು ಸರಿಯಲ್ಲವಾದ್ದರಿಂದ ತಾಲ್ಲೂಕು ಅಮಲ್ದಾರ್ರವರಿಗೆ ಅರ್ಜಿಗಳನ್ನು ಹಾಕಿ, ಗ್ರಾಮ ವಿಚಾರಣೆಗಾಗಿ ಜಮೀನು ಕೇಳಿಕೊಂಡರೆ ಸರ್ಕಾರದವರು ಕೊಡುವುದಾಗಿಯೂ, ಜಮೀನು ಇಲ್ಲದವರಿಗೆ ತಮ್ಮ ಗ್ರಾಮದ ಹತ್ತರ ಇರುವ ಜಮೀನುಗಳನ್ನು ಸರ್ಕಾರದವರೆನ್ನು ಕೇಳಿಪುದಾದರೆ ಐವತ್ತು ರೂಪಾಯಿ ಬಾಳುವ ಜಮೀನನ್ನು ಮುಫತ್ತಾಗಿ ಸರ್ಕಾರದವರು ಕೊಡುತ್ತಾರೆಂತಲೂ, ಅದಕ್ಕೆ ವೇಲ್ಪಟ್ಟು ಖರೀದಿ ಆಗುವ ಜಮೀನನ್ನು ಅರ್ಧ ಕ್ರಯಕ್ಕೆ ಕೊಟ್ಟು ಏಮು ವರುಷಗಳಲ್ಲಿ ಕಂತು ಪ್ರಕಾರ ಕಟ್ಟುವುದೆಂತಲೂ ಸರ್ಕಾರದವರು ಈ ಜನಗಳಿಗೆ ತೋರಿಸಿರುವ ರಿಯಾಯಿತಿಗಳನ್ನೆಲ್ಲಾ ಹೇಳಿದರು. ಮುಖ್ಯವಾಗಿ ತಮ್ಮ ಮಕ್ಕಳನ್ನು ಈ ಬೋರ್ದಿಂಗಿಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡುವುದಾದರೆ ಮುಂದಕ್ಕೆ ನಮ್ಮ ದೇಶದಲ್ಲಿರುವ ಹತ್ತು ಲಕ್ಷ ಆದಿಕರ್ಣಾಟಕ ಜನಗಳು ಉತ್ತಮರಂತೆ ಆಗಿ [illegible] ಅನೇಕವಾಗಿ ಬುದ್ಧಿವಾದವನ್ನು ಹೇಳಿದರು.

——ಕಡೆಯಲ್ಲಿ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಸ್ಸಾರ್ಥನೆಯನ್ನು ಮಾಡಿ ಸಭೆಯನ್ನು ಬರಖಾಸ್ತುಮಾಡಿದರು. ಪ್ರೇಕ್ಷಕ.

ರುವ ರಿಯಾಯಿತಿಯನ್ನ

ಒಳದೇಶ ವೃತ್ತಾಂತ

ರಾಜಧಾನಿಯಲ್ಲಿ ಕಳೆದ ಭಾನುವಾರದ ರಾಗಾಯಿತು ಪೋದ ಕಟ್ಟ ಸೋನೆ ಮಳೆ ಸುರಿಯುತ್ತಾ ಇದೆ. ಭೂಮಿಯು ತಂಪೇರಿ ಹವಾ ಆರೋಗ್ಯದಿನ ಕವಾಗಿರುವುದು. ದಿನಕ್ಕೆ 2-3 ಸಾರಿ ಬಲವಾವ ಮಳೆಯೂ ಸುರಿಯುತ್ತಿದೆ.

. ಚಾಮರಾಜನಗರದ ತಾಲ್ಲೂಕು ಚನ್ನಪ್ಪನಪುರದ ರಾಮಾಜೋಯ ಎಂಬುವನನ್ನು ಪೋಲೀಸಿನವರು ಕಡಕೊಳದ ಗಣೀ ಪ್ರದೇಶದಲ್ಲಿ ಅನುಮಾನದ ಮೇರೆ ಹಿಡಿದು ಶೋಧನೆಮಾಡಿದಾಗ ರೈನೆಕ್ಸನು ಇಲ್ಲುವೆ ಅವನು ಸುರಿಂಗದ ಮದ್ದು ಮುಂತಾದ್ದನ್ನು ಇಟ್ಟುಕೊಂಡಿದ್ದನೆಂದು ತಿಳಿದು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವನ ಮೇರೆ ಮೊಕದ್ದಮೆ ಮಾಡಿದ್ದರಲ್ಲಿ ಮ್ಯಾಜಿಸ್ಟ್ರೇಟರು ಎಚಾರಣೆಮಾಡಿ ಆಪರಾದಿಗೆ 100 ರೂಪಾಯಿ ಜುರ್ಮಾನೆ, ತಪ್ಪಿದರೆ ಆರು ತಿಂಗಳ ಸಹಾ ವಿಧಿಸಿರುತ್ತಾರೆ.

ಗ್ರಂಥಕರ್ತರಿಗೆ ಪ್ರೋತ್ಸಾಹ ಕೊಡುವುದಕ್ಕಾಗಿ ನಿಗದಿ ಮಾಡಿರುವ ದೇವರಾಜ ಬಹದೂರ್ ಧರ್ಮಕಂಡಿಸಿಂದ ಈ ವರುಷ ಮೈನೂರು ಆಸ್ಥಾನ ವಿದ್ವಾಂ ಮಾ॥ ಎಕ್. ಶ್ರೀಕಂಠಶಾಸ್ತ್ರಿಗಳಿಗೆ ಅವರು ರಚಿಸಿರುವ ''ಶ್ರೀ ಕೃಷ್ಣ ರಾಜೇಂದ್ರ ವಂಶ ಚರಿತ್ರೆ'' ಎಂಬ ಗ್ರಂಥಕ್ಕಾಗಿ 200 ರೂಪಾಯಿ ಬಹುಮಾನವೂ, ಬೆಂಗಳೂರು ಬನವನಗುಡಿ ಭಕ್ತಬಂಧು ಆಫೀಸ್ ಮಾ॥ ಎಚ್. ಸಿ. ಬಿದಂಬರಯ್ಯನವರಿಗೆ ಅವರು ರಚಿಸಿರುವ ''ಮಹಲಿಂಗ ರಂಗಕವಿ ಅನುಭವಾಮೃತ'' ಎಂಬ ಗ್ರಂಥದ ಪರಿಶೋಧನೆಗಾಗಿ 200 ರೂಪಾಯಿ ಬಹುಮಾನವೂ ಕೊಡಲ್ಪಟ್ಟಿರುವವು.

ಯಳಂದೂರು ಬಳಿ ನತೆದ ಹೊನ್ನೂರು ದೊಂಬಿ ಮೊಕದ್ದಮೆಯನ್ನು ಯಳಂದೂರಿನಲ್ಲಿ ಈಗ ನೇಮಕವಾಗಿರುವ ಸ್ಪೆಷಲ್ ಮ್ಯಾಜಿಸ್ಟ್ರೇಟರಿಂದ ವಿಚಾರಣೆ ಆಗಕೂಡದೆಂದೂ, ಬೇರೆ ಕಡೆಗೆ ಇನ್ನೊಬ್ಬ ಮ್ಯಾಜಿಸ್ಟ್ರೇಟರಲ್ಲಿಗೆ ವರ್ಗಮಾಡಿಸಿಕೊಡಬೇಕೆಂದೂ ಆಪರಾದಿಗಳು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಹಾಕಿಕೊಂಡಿದ್ದದ್ದು ವಜಾ ಆದ ನಿಮಿತ್ತ ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದರು. ಚೀಫ್ ಕೋರ್ಟಿನವರು ಕೂಡ ಗವರ್ನ ಮೆಂಟ್ ಹುಕುಮನ್ನು ಬದಲಾಯಿಸುವುದಕ್ಕೆ ಕಾರಣ ಸಾಲದೆಂದು ಹೇಳಿ ಕಳೆದ ಶನಿವಾರ ಅಪೀಲನ್ನು ವಜಾಮಾಡಿದರು.

ರಾಜಧಾನಿಯಲ್ಲಿರುವ ಮಾ॥ ಜರ್ನಿದಾರ್ ಕೊಮ್ಮಾಡೂರ್ ರಾಮ ಸ್ವಾಮಯ್ಯಂಗಾರ್ರವರ ಕೊಮಾರನೂ ಇಲ್ಲಿ ವ್ಯಾಕ್ಸಿನ್ ಮಾಡುತ್ತಿರುವ ಮಾ॥ ಕೆ. ಆರ್. ಶ್ರೀನಿವಾಸ್ಯೆಯ್ಯಂಗಾರ್, ಎಂ. ಎಸ್‌ಸಿ., ಬ್ಯಾರಿಸ್ಟರ್-ಅಟ್-ಲಾ ರವರ ಅಣ್ಣಂದಿರೂ ಆದ ಡಾಕ್ಟರ್ ಆರ್. ಯರ್. ಮೋಹನ್, ಎಂ. ಎ., ಪಿಹೆಚ್. ಡಿ., ಬ್ಯಾರಿಸ್ಟರ್-ಅಟ್-ಲಾರವರು ಲಂಡನ್ ಪಟ್ಟಣದಲ್ಲಿ ಪ್ರಿವಿ ಕೌನ್ಸಿಲ್‌ನಲ್ಲಿ ವ್ಯಾಕ್ಸಿನ್ ಮಾಡಲು ತಾ. 10 ನೇ ಶನಿವಾರ ಮೈನೂರಿನಿಂದ ಪ್ರಯಾಣ ಮಾಡುವವರಾಗಿರುತ್ತಾರೆ. ನಮ್ಮ ಮೈಸೂರು ಶೀಮೆಯಿಂದ ಎರಾಯತಿಯಲ್ಲಿ ವ್ಯಾಕ್ಸಿನ್ ಮಾಡಲು ಹೋದವರಲ್ಲಿ ಇವರೇ ಮೊದಲನೆಯ ರಾಗಿರುತ್ತಾರೆ.

ಪುಟ್ಟಾ ಮೇಸ್ತ್ರಿ ಎಂಬ ಕೋಟೆಬೆಟ್ಟದ ಯಮ್ಮಗುಂಡಿ ಕಾಫಿ ತೋಟದ ಮೇಸ್ತ್ರಿಯು ಕಳೆದ ತಾ. 29 ನೇ ಮಂಗಳವಾರ ಸಾಯಂಕಾಲ ರಾಜಧಾನಿಯು ನುದ್ಯಾಯನಕ್ಕೆರೆ ಬಳಿ ಹದಿನಾರು ಪಡ್ಡೆ ಹುಡುಗರನ್ನು ಜೋಡಿತ್ತಿನ ಗಾಡಿಯಲ್ಲಿ ಕೂಡಿಸಿ ಹುಣಸೂರು ಕಡೆ ಕರೆದುಕೊಂಡು ಹೋಗುತ್ತಿದ್ದಾಗ ರನ್ನೂ ಹಿಡಿದು ತನಿಖೆ ಮಾಡಿ ಮೇಸ್ತ್ರಿಯ ಮೇರೆ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದರು. ಈ ಮೊಕದ್ದಮೆಯು ತಾ. 13 ಕ್ಕೆ ಪೀರಿಂಗು ಇದೆ. ರಾಜಧಾನಿಯಲ್ಲಿ ಈ ವಿಚಾರವು ತುಂಬಾ ಕಳವಳವನ್ನು ಉಂಟುಮಾಡಿರುತ್ತದೆ.

ಮುಳಬಾಗಲು ತಾಲ್ಲೂಕು ಕಗ್ಗನಹಳ್ಳಿ ಗ್ರಾಮದ ಪಾಪಮ್ಮನೆಂಬ ಹತ್ತು ವರುಷದ ಹುಡುಗಿಯನ್ನು ಅದೇ ಗ್ರಾಮದ ಅವಳ ದೊಡ್ಡಪ್ಪನ ಮಗ ಮುನಿವೆಂಕಟಪ್ಪನೆಂಬಾತನು ಅಕ್ರಮಸಂಗ ಮಾಡಿದನೆಂದು ಪೋಲೀಸಿನವರು ತಂದಿದ್ದ ಮೊಕದ್ದಮೆಯು ಕೋಲಾರ ಸೆಷನ್ ಕೋರ್ಟಿನಲ್ಲಿ ಜೂರ್ ತಾ. 22 ಮತ್ತು 23 ರಲ್ಲಿ ದರ್ಯಾಫ್ತಿ ನಡೆದು ಅಪರಾಧ ರುಜುವಾತಾಗಲಿಲ್ಲವೆಂದು ಸೆಷನ್ ಜಡ್ಜರವರು ಅಪರಾಧಿಯನ್ನು 25 ನೇ ತಾ. ಬರಾನೆ ಮಾಡಿದರು. ಸರ್ಕಾರದ ತರಪು ಪಬ್ಲಿಕ್ ಪ್ರಾಸಿಕ್ಯೂಟರೂ, ಅಪರಾಧಿ ತರಪು ಬೆಂಗಳೂರು ಅಟ್ರ್ನೀಸ್ ಮಾ॥ ಬೇಲೂರು ಶ್ರೀನಿವಾಸಯ್ಯಂಗಾರ್ರೂ ಮೊಕದ್ದಮೆಯನ್ನು ನಡಿಸಿದರು.

ರಾಜಧಾನಿಯ ಲಕ್ಷ್ಮೀಪುರದಲ್ಲಿ ಸಾಹುಕಾರ್ ವರ್ಧಮಾನಯ್ಯನವರು ತಮ್ಮ ಕುಮಾರ್ತೆಯ ವಿವಾಹವನ್ನು ವಿಶೇಷ ಸಂಭ್ರಮವಾಗಿ ಕಳೆದ ಬುಧವಾರ ನೆರವೇರಿಸಿದರು. ಅವರ ಬಂಧುಬಳಗಗಳು ನೂರಾರು ಮಂದಿ ಈ ಉತ್ಸವಗಳಿಗಾಗಿ ಕರನಲ್ಪಟ್ಟಿದಾರೆ. ರಾಜಪಿಂಡಿಯವರು, ಯೂರೊಪ್ಯಿಯರು, ದಿವಾರ್‌ರೇ ಮೊದರಾದ ನರ್ಕಾರಿ ಅಧಿಕಾರಿಗಳು, ರಾಜಧಾನಿಯ ಸಮಸ್ತ ಗಣ್ಯಪ್ರಜೆಗಳೂ ವಿವಾಹಕಾಲದಲ್ಲಿ ಹಾಜರಿದ್ದು ನೂತನ ವಧೂವರ ರನ್ನು ಆಶೀರ್ವದಿಸಿ, ಸಂಗೀತ ಕಚೇರಿಯಲ್ಲಿ ಬೆರೆದು ಸಂತೋಷಪಟ್ಟು ಫಲ ಪುಷ್ಪಾದಿಗಳ ಮರ್ಯಾದೆಯನ್ನು ಸ್ವೀಕರಿಸಿ ತೆರಳಿದರು. ನೂತನ ವಧೂವರ ರಿಗೆ ಹಲವು ವಿಶೇಷ ತರದ ಉಡುಗೆರೆಗಳು ಒದಿನಲ್ಪಟ್ಟವು.

ಇದೇ ಜೂಲೈ ತಾ. 3 ನೇ ಶನಿವಾರಕ್ಕೆ ಮುಗಿದ ವಾರದಲ್ಲಿ ಮೈಸೂರು ದೇಶದ ವಾಮ್ಯಸ್ಥಿತಿಯನ್ನು ಕುರಿತು ಸರ್ಕಾರದ ರಿಪೋರ್ಟರವರು ತಿಳಿಸುವುದು :—ಕಳೆದ ವಾರದ ಮೊದಲನೇ ಭಾಗದಲ್ಲಿ ಬೆಂಗಳೂರು, ಕೋಲಾರ, ತುಮಕೂರು, ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಕೆಲವು ಮಳೆಗಳಾದವು. ಹುರುವಾಮಿಶ್ರ ವಾರದ ಕೊನೆಯಲ್ಲಿ ಮಾತ್ರ ಕಾಲಾನುಗುಣವಾಗಿ ಮಳೆ ಬಿತ್ತು. ಹೆಚ್ಚಾಗಿ ಮಳೆಯಾದ ನ್ಥಳಗಳು—ಹೊಸಕೋಟೆ 1·84, ಅನೇಕಲ್, 1·71, ನರ್ಜಾಪುರ 2·20, ಬಾಗೇಪಲ್ಲಿ 2·51, ಬೆಳ್ಳಾವಿ 1·64, ಅಜ್ಜಂಪುರ 2·38, ಚಿತ್ರದುರ್ಗ 2·11, ಜಗಲೂರು 2·55, ಮತ್ತು ಆಗುಂಬಿ 8·74 ಅಂಗುಲಗಳು.—ಪಾಯಿವೇಗವೂ ಮತ್ತು ಅವರ ಕಾಪೂ ನರಾನರಿಗಿಂತ ಬಹಳ ಹೆಚ್ಚುಕಮ್ಮಿಯಾಗಿರಲಿಲ್ಲ.

ಡಿಸ್ಟ್ರಿಕ್ಟು ಎಕ್ಸೈನ್ ಅಸಿಸ್ಟೆಂಟ್ ಮಾ॥ ಎಚ್. ರಂಗರಾವ್ ನಾಯುಡು ಯವರಿಗೆ ಕೊಚ್ಚಿರುವ ರಜವನ್ನು ಮೇ ತಾ. 20 ರಿಂದ ಇನ್ನೂ ಆರು ತಿಂಗಳು ಜಾಸ್ತಿಮಾಡಿದೆ. ಈಗಿನ ಬದಲು ವರ್ಮಾಡೇ ಜಾರಿಯಲ್ಲಿರತಕ್ಕದ್ದು.

ಆ॥ ಕಂಟ್ರೋಲರ್ ಮಾ॥ ಎಂ. ವೀರರಾಜೆ ಅರಸಿನವರಿಗೆ ಅವರು ಉಪ ಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಕಂಟ್ರೋಲರವರ ಆಫೀಸಿನಲ್ಲಿ ತರಪೇತಾಗುತ್ತಿರುವ ಆ॥ ಕಮಿಷನರ್ ಮಾ॥ ಎಂ. ಶಾಮಣ್ಣನವರು ಅವರ ಕಲಸದ ಭಾರ್ಜನ್ನು ವಹಿಸಿರ ತಕ್ಕದ್ದು.

ಮುಂದೆ ಹೇಳುವ ರೇಡಿ ಮೆಡಿಕಲ್ ಆಫೀಸರುಗಳ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ :—ಮಿನೆಸ್ ಟಿ. ಪೆರ್ರಿಟ್ಟರವರನ್ನು ಶಿವಮೊಗ್ಗಾ ಡಿಸ್ಟ್ರಿಕ್ಟ್ ಅನ್ನತ್ರೆಯಿಂದ ಬೆಂಗಳೂರು ಎಕ್ಸ್‌ರೇರಿಯಾ ಅನ್ನತ್ರೆಗೆ, ಮಿನ್ ಬ್ಲೇರ್‌ಯವರನ್ನು ಎಕ್ಸ್‌ರೇರಿಯಾ ಅನ್ನತ್ರೆಯಿಂದ ಬೆಂಗಳೂರು ಹೆರಿಗೆ ಆನ್ನತ್ರೆಗೆ, ಮಿನ್ ಜೂಲಿಯಾ ಲೊಬೊಯಿವರನ್ನು ಎಕ್ಸ್‌ರೇರಿಯಾ ಅನ್ನತ್ರೆಯಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ್ ಅನ್ನತ್ರೆಗೆ.

ಇಂಡಿಯಾ ದೇಶದ ವೃತ್ತಾಂತ

ರೆವ॥ ಡಿ. ಎ. ರೀಸ್ ಸಾಹೇಬರು ಪತ್ನಿ ಸಮೇತ ಸುರಕ್ಷಿತರಾಗಿ ಇಂಗ್ಲಾಂಡನ್ನು ತಲಪಿದರೆಂದು ನಮಾಚಾರ ಬಂದಿದೆ.

ಮದರಾಸ್ ಗವರ್ನರವರು ಈ ತಿಂಗಳು ತಾ. 18 ರಲ್ಲಿ ಮದರಾಪಿ ನಿಂದ ಹೊರಟು ರಾಮನಾಡು, ಮಧುರೆ ಜಿಲ್ಲೆಗಳಲ್ಲಿ ಹತ್ತು ದಿನ ಸಂಚಾರ ಮಾಡುವವರಾಗಿದಾರೆ.

ಅಲ್ಲಹಾಬಾದ್ ನಗರದಲ್ಲಿ ಪ್ರಜಾನೆಮ್ಮದಿಗೆ ಭಂಗಬರುವ ನೂಚನೆಗ ಳನ್ನು ಕಂಡು ನರ್ಕಾರದವರು ಪೋಲೀಸ್ ಶಿಬ್ಬಂದಿಯನ್ನು ಒಂದು ವರುಷದ ತನಕ ಹೆಚ್ಚಿನಬೇಕೆಂದು ಸ್ಯಾಂಕ್ಷನ್‌ಮಾಡಿದಾರೆ.

ಮದರಾಸ್ ಪಟ್ಟಣದ ಇಜಿನಿಯರ್ ಆಫೀಸಿನಲ್ಲಿ ಗುಮಾಸ್ತೆಯಾಗಿ ರುವ ಕಲ್ಯಾಣಸುಂದರಂ ಅಯ್ಯರೆಂಬಾತನು ತನ್ನ ಹೆಂಡತಿ ಧರ್ಮಾಂಬಾಳ್ ಎಂಬಾಕೆಯು ಉಟ್ಟಿದ್ದ ಸೀರೆಗೆ ಶೀಮೆಎಣ್ಣೆ ಸುರಿದು ಹಚ್ಚಿದ್ದರಿಂದ ಆಕೆ ಬಿರಿದು ಮೃತಪಟ್ಟಳೆಂದು ಅತನ ಮೇರೆ ಮೊಕದ್ದಮೆ ಆಗಿ ದರ್ಯಾಫ್ತಿ ಆಗುತ್ತಿದೆ.

ರಂಧರೀಪಸನೆಂಬ ಪರದೇಶಿಯು ಕಲ್ಕತ್ತಾ ಪಟ್ಟಣದಲ್ಲಿ ಸ್ಕೂಲಿನಿಂದ ಮನೆಗೆ ಹೋಗುತ್ತಿದ್ದ ಮೂವರು ಬಂಗಾಳಿ ಹುಡುಗಿಯರನ್ನು ಪಾರ್ಶ್ವ ನಾಥ ದೇವಸ್ಥಾನವನ್ನು ತೋರಿಸುತ್ತೇನೆಂದು ಆಶೆ ಹುಟ್ಟಿಸಿ ಮೋಟಾರ್ ಬನ್ಸಿನಲ್ಲಿ ಕೂರಿಸಿ ನಾಗಿಸಿಕೊಂಡು ಹೋಗುತ್ತಿದ್ದುದನ್ನು ಜೊತೆ ಪ್ರಯಾಣಿ ಕರು ಹಿಡಿದು ಪೋಲೀಸಿಗೆ ಒಪ್ಪಿಸಿರುತ್ತಾರೆ.

ಕಲ್ಕತ್ತೆಯಲ್ಲಿ 34 ವರುಷಗಳಿಂದಲೂ ''ಹಬಿಲುರ್ ಮಾರ್ಟ್'' ಎಂಬ ಪತ್ರಿಕೆಯನ್ನು ನಡಿಸುತ್ತಾ ಬಂದಿರುವ ಆಗಾ ಸ್ಯೆಯದ್ ಜಲಾಬುದ್ದೀ ಎಂಬಾತನನ್ನು ಗವರ್ನಮೆಂಟಿನವರು ಹಿಂದುಸ್ತಾನವಿಂದ ಗಡೀಪಾರು ಮಾಡುವರೆಂದು ಪ್ರಕಟವಾಗಿದೆ. ಈತನು ಪರ್ಷಿಯಾ ರಾಜ್ಯದ ರಾಜಧಾನಿ ಯಿಂದ 38 ವರುಷಗಳ ಹಿಂದೆ ಹಿಂದುಸ್ತಾನಕ್ಕೆ ಬಂದವನಾಗಿಯೂ, ಕಾರು ಡನಾಗಿಯೂ ಇರುವನು.

ಮದರಾಸ್ ಪಟ್ಟಣದಿಂದ ಆಜೂಬಾಜು ಸ್ಥಳಗಳಿಗೆ ಹೋಗಿಬರುವ ರೈಲ್‌ಗಾಡಿಗಳಲ್ಲಿ ಅನೇಕರು ಟಿಕೀಟುಕೊಳ್ಳದೇನೇ ಸಂಚಾರಮಾಡುತ್ತಾ ರೆಂದು ರೈಲ್ವೆ ಅಧಿಕಾರಿಗಳಿಗೆ ವಾತ್ಮಿ ಬಂದಿದ್ದರ ಮೇರೆ ಆಡಿಟರನ್ನು ಕಳಿಸಿ ಕಳೆದ ವಾರ ಒಂದು ದಿನ ಪರಿಕ್ಷೆಮಾಡಿಸಿದ್ದರಲ್ಲಿ 200 ಮಂದಿ (ಹೆಂಗ ನರು ಸಹಿತ) ಟಿಕೆಟ್ ಇಲ್ಲದೆ ಪ್ರಯಾಣಮಾಡುತ್ತಿದ್ದುದನ್ನು ಕಂಡುಹಿಡಿದು ಅವರಿಂದ ದುಗುಣ್ ಭಾರ್ಜುಗಳನ್ನು ವಸೂಲ್ಮಾಡಿಸಿದರು.

ಕಲ್ಕತ್ತಾ ಪಟ್ಟಣದ ಉತ್ತರ ಭಾಗದಲ್ಲಿ ಇಪ್ಪತ್ತು ಮಂದಿ ಮಹಮ್ಮದಿ ಯರ ಮೇರೆ ಅವರು ಹಿಂದೂ ದೇವಸ್ಥಾನವನ್ನು ಅಪರಿಶುದ್ಧಮಾಡಿ ದಂಗೆ ನಡಿಸಿದರೆಂದು ಮೊಕದ್ದಮೆ ಆಯಿತು. ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮಿ॥ ಬೀವಾರ್‌ಯವರು ಈ ಮೊಕದ್ದಮೆಯನ್ನು ದರ್ಯಾಫ್ತಿಮಾಡಿ ಒಬ್ಬನನ್ನು ಖುರಾಸ್ ಮಾಡಿ ಉಳಿದ 19 ಮಂದಿಗೂ ತಲಾ ಮೂರು ತಿಂಗಳಂತೆ ಕಠಿಣ ನಜಾ ವಿಧಿಸಿರುತ್ತಾರೆ.

ಪೂರ್ವ ಬಂಗಾಳಾಪಿಗೆ ಸೇರಿದ ಪಟ್ಟಾನಗರದಲ್ಲಿ ಹಿಂದೂ ಮಹಮ್ಮ ದಿಯರಿಗೆ ವಿರೋಧ ಹುಟ್ಟಿ, ಮ್ಯುನಿಸಿಪಲ್ ನೌಕರರು ರಾತ್ರಿ ಹೊತ್ತು ದೀಪಗಳನ್ನು ಹಚ್ಚದೆ ಹೋಗಿದ್ದರಿಂದ, ಅಲ್ಲಲ್ಲಿ ಕಿಡಿಗೇಡಿಗಳು ಪೊಲೀಸ್ ಲೈಟುಗಳು ಮುಚ್ಚಲ್ಪಟ್ಟಿವೆ. ಪೋಲೀಸಿನವರು ಬೀದಿಗಳಲ್ಲಿ ತಿರುಗುತ್ತಾ ಪ್ರಜಾ ನೆಮ್ಮದಿಗೆ ಭಂಗ ಬಾರದಂತೆ ನೋಡಿಕೊಳ್ಳುತ್ತಿದಾರೆ.

ಬೆಂಗಳೂರು ಮಿಥಿಕ್ ಸೊಸೈಟಿ ಅಧ್ಯಕ್ಷರಾಗಿ ಪೂರ್ವ, ಪಶ್ಚಾತ್ಯ ದೇಶಗಳಲ್ಲೆಲ್ಲಾ ಪುರಾತನ ನಾಗರಿಕತೆಯ ಪರಿಶೋಧನೆಯಲ್ಲಿ ಯಶಸ್ಸನ್ನು ಸಂಪಾದಿಸಿಕೊಂಡಿದ್ದ ರೆವ॥ ಫಾದರ್ ಹಾವಾರ್ಡ್‌ರವರು 63 ನೇ ವಯ ಸ್ಸಿನಲ್ಲಿ ಬೆಂಗಳೂರಿನಲ್ಲಿ ಕಳೆದ ಶುಕ್ರವಾರ ರಾತ್ರಿ ಕಾಲವಾದರೆಂದು ತಿಳಿ ನಲು ವಿಷಾದಿಸುತ್ತೇವೆ. ಇವರಿಗೆ ನಮ್ಮ ಮಹಾರಾಜರವರು ರಾಜಭೂಷಣ ಎಂಬ ಬಿರುದನ್ನು ಐದು ವರುಷಗಳ ಹಿಂದೆ ದಯಪಾಲಿಸಿದ್ದರು.

ನ್ಯಾಯವಿಧಾಯಕ ನಭೆಯ ಬಜೆಟ್ ಮೀಟಿಂಗು ರಾಜಧಾನಿಯಲ್ಲಿ ಕಳೆದ ಗುರುವಾರ ಸಾಯಂಕಾಲಕ್ಕೆ ಪೂರ್ತಿಸಿ ಅಧಿಕಾರಿಗಳೆಲ್ಲಾ ಶುಕ್ರವಾರ ವಾಪನು ಪ್ರಯಾಣಮಾಡಿದರು. ದಿವಾ॥ ಮಿ॥ ಮಿರ್ಜಾರವರು ಶನಿವಾರ ಬೆಳಿಗ್ಗೆ ಮೋಟರಿನಲ್ಲಿ ಶಿವನಮುದ್ರದ ಕಾರ್ಖಾನೆಗೆ ದಯಮಾಡಿ ಮಿ॥ ಎಸ್. ಜಿ. ಪೋರ್ಬ್‌ಸ್‌ರವರೊಡನೆ ಅಲ್ಲಿ ನಡೆಯುವ ವಿದ್ಯುಚ್ಛಕ್ತಿ ಉತ್ಪತ್ತಿಯ ಏಳನೇ ಪದದ ಕಾಮಗಾರಿಯನ್ನು ತನಿಜೆಮಾಡಿಕೊಂಡು ಆ ಸಾಯಂಕಾಲವೇ ಅಲ್ಲಿಂದ ಬೆಂಗಳೂರನ್ನು ತಲಪಿದರು.

ಹಿಂದುಸ್ತಾನದ ಸಾಮಂತರಾಜರುಗಳ ನಭೆಯು ಸಾರ್ವಭೌಮರವ ರಿಂದ ನಿರ್ಮಾಣವಾಗಿ ರಾಜರುಗಳು ಆಗಿಂದಾಗ್ಗೆ ಸೇರಿ ಕೂಟಗಳನ್ನು ನಡಿ ಸುತ್ತಾ ಬಂದಿದಾರಷ್ಟೆ. ಈ ರಾಜರುಗಳ ಕ್ರೌನ್ಸಿಲ್‌ನವರು ಒಂದು ಕಮಿಟಿ ಯನ್ನು ಮಾಡಿಕೊಂಡಿದಾರೆ. ಈ ಕಮಿಟಿಯವರು ದೇಶೀಯ ಸಂಸ್ಥಾನ ಗಳಿಗೂ ಸಾರ್ವಭೌಮ ನರ್ಕಾರಕ್ಕೂ ಕೆಲವು ವಿಚಾರಗಳಲ್ಲಿ ಇರತಕ್ಕ ಸಂಬಂಧಗಳನ್ನು ಕುರಿತು ಪರ್ಟಿಸಿ ಶರಾವುಗಳನ್ನು ಮಾಡಬೇಕೆಂದಿರುವರು. ಈ ಕಮಿಟಿಯಲ್ಲಿ ಮೈಸೂರು ನಂಸ್ಥಾನದ ವಿಚಾರಗಳನ್ನು ತಿಳಿಸಿ ಮೆಂಬರು ಗಳ ಕೂಡ ಆರೋಚಿನುವುದಕ್ಕಾಗಿ ನಮ್ಮ ಶ್ರೀಮನ್ಮಹಾರಾಜರವರು ರಿಪ್ರಸೆಂಟೆ ಕಮಿಷನರ್ ಮಿ॥ ಸಿ. ಎಸ್. ಬಾಲಸುಂದರಂ ಅಯ್ಯರವರನ್ನು ಕ್ರೌನ್ಸಿಲರ್ ಅಧಿಕಾರವನ್ನು ಕೊಟ್ಟು ದೆಹಲಿಗೆ ಕಳುಹಿಸುವರೆಂದು ಕೇಳುಕ್ಕೇವೆ. ಆ ಕಮಿ ಟಿಯು ಮೇಲಿನ ಕ್ಷಾಲಿನ್ನೂ ನಿಷ್ಕರ್ಷೆಯಾಗಿಲ್ಲ.

ಚಾಮರಾಜನಗರದ ವರ್ತಕರ ಸೊಸೈಟಿ.—ಈ ಊರಿನ ದೊಡ್ಡ ಅಂಗಡಿ ವೀರಿಯ ವರ್ತಕರುಗಳೆಲ್ಲರೂ ಸೇರಿ ಮಾ॥ ದಾಲಕ್ಷಪ್ಪಾ ಜೆಟ್ಟಪ್ಪನವರ ಜವಳಿ ಅಂಗಡಿಯಲ್ಲಿ ಈಚೆಗೆ ಮಾ॥ ಡಿ. ಬಿ. ನರಸಿಂಹಮೂರ್ತಿರಾಯರು (ಪಾರೆಸ್ಟು ರೇಂಜ್ ಆಫೀಸರವರು) ಸೂಕ್ರದಂತೆ ಹೊಸದಾಗಿ 10 ರೂಪಾಯಿಗಳ 500 ಷೇರುಗಳಿಗೆ ರಿಜಿಸ್ಟರ್‌ಆಗಿರುವ ಮೇಲ್ಕಂಡ ಸಂಘವ ಪ್ರಥಮ ಸಭೆಯನ್ನು ಜೂರ್ ಮಾಹೆ ತಾ. 23 ನೇ ಬುಧವಾರ ಸಾಯಂಕಾಲ ಮಾ॥ ಡಿ. ಬಿ. ನರ ಸಿಂಹಮೂರ್ತಿರಾಯರವರ ಅಧ್ಯಕ್ಷತೆಯಲ್ಲಿ ನಡಿಸಿದರು. ಸೊಸೈಟಿಗಳ ನರ್ಕಲ್ ಇನ್ಸ್‌ಪೆಕ್ಟರೂ, ಇರಾವಾ ಸೂಪರಿಂಟೆಂಡರೂ, ನ್ಥಳದ ವರ್ತಕ ಮಹಾಜನಗಳೂ ಸಭೆಯನ್ನು ಅಲಂಕರಿಸಿದ್ದರು. ಇನ್ಸ್‌ಪೆಕ್ಟರವರು ಸೊಸೈ ಟಿಯು ರಿಜಿಸ್ಟರಾದ ವಿಷಯವನ್ನು ನಭಿಕರಿಗೆ ತಿಳಿಸಿದನಂತರ ಸೊಸೈಟಿಯ ಆಡಳಿತವನ್ನು ನಡಿನಲು ಹಾಜರಿದ್ದ ಮೆಂಬರುಗಳ ನಮ್ಮತಿಯ ಮೇರೆಗೆ ಮಾ॥ ದಾಲಕ್ಷಪ್ಪಾ ಜೆಟ್ಟಪ್ಪನವರನ್ನು ಸೊಸೈಟಿಯ ಪ್ರೆಸಿಡೆಂಟರನ್ನಾಗಿಯೂ, ರಿಟೈರ್ಡ್ ಹೆಡ್ ಮಾನ್ಟರ್ ಮಾ॥ ಎ. ಸೂರ್ಯನಾರಾಯಣರಾಯರನ್ನು ನೆಕ್ರೆಟರಿಯಾಗಿಯೂ ಚುನಾಯಿಸಿದರು. ಮೆಂಬರುಗಳಿಗೆ ಬೇಕಾದ ನಮಯ ದಲ್ಲಿ ನೂಕ್ಷ ಕಾಣುವಷ್ಟು ಬೊಬಲಗನ್ನು ಕಮ್ಮಿ ದರದ ಬಡ್ಡಿಯಲ್ಲಿ ಸ್ಟೇರೆ ಕ್ಷರುಗಳ ಅನುಮತಿಯ ಮೇರೆ ಒದಗಿಸುವುದೇ ಈ ಸಂಘದ ಮುಖ್ಯ ಉದ್ದೇ ಶವೆಂಬರ್ಥವನ್ನು ಸೂಚಿಸುವ ಅಧ್ಯಕ್ಷರ ಹಿತವಾದವು ನಡೆದ ನಂತರ ನಭಿಕ ರಿಗೆ ಗಂಧ ಪುಷ್ಪ, ತಾಂಬೂಲ ಹಂಚಿದ ಬಳಿಕ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಮಾಡಿ ನಂಘಕ್ಕೆ ಶ್ರೇಯೋಭಿವೃದ್ಧಿಯನ್ನು ಕೋರಿ ನಭೆಯು ಬರಖಾನ್ತು ಮಾಡಲಾಯಿತು.—ಒಬ್ಬ ಪಾತ್ಮಿದಾರರಿಂದ.

ಇಂಕಂಪ್ಲೀಟ್ ಮಿಡ್ಲ್ ಸ್ಕೂಲುಗಳಲ್ಲಿ ವಿದ್ಯಾಭಿವೃದ್ಧಿಯ ನ್ಯೂನತೆಗಳು

ಅಯ್ಯಾ,—1918 ನೇ ಇನವಿಯ ರಾಗಾಯ್ತು ರೂರಲ್ ಎ. ವಿ. ಸ್ಕೂಲು ಗಳಲ್ಲಿ ಇಂಗ್ಲೀಷ್ ಕ್ಲಾಸನ್ನು ಇಡರಾಯಿತು. ಹಾಗೆ ಇತ್ತಾಗ ಕನ್ನಡದಲ್ಲಿ (ಒಂದು ಭಾಷೆಯನ್ನೇ ತೆಗೆದುಕೊಂಡು) ಬಾಲಕರು ರೋವರ್ ನೆಕೆಂಡರಿ ಪರೀಕ್ಷೆಗೆ ನೇರಬಹುದಾಗಿತ್ತು. ಮತ್ತು ಈ ಸ್ಕೂಲುಗಳ ಮೈಕೆ ಕೆಲವು ಸ್ಕೂಲುಗಳಲ್ಲಿ ಸ್ಪೆಷಲ್ ಕ್ಲಾಸುಗಳೂ ಸಹಾ ಇದ್ದುದರಿಂದ ಇಂಗ್ಲೀಷ್ ಒಂದರಲ್ಲಿಯೇ (ಭಾಷೆ ಮಾತ್ರಕ್ಕೆ) ನೇರಿ ರೋವರ್ ನೆಕೆಂಡರಿ ಪರೀಕ್ಷೆ ಯಲ್ಲಿ ತೇರ್ಗಡೆಯಾಗಬಹುದಾಗಿತ್ತು. ಈಚೆಗೆ ಈ ಎರಡು ಸೌಲಭ್ಯಗಳೂ ತಪ್ಪಿಹೋಗಿ ಕನ್ನ

ವೃತ್ತಾಂತ ಪತ್ರಿಕೆ

—:o:—

ಸರ್ ೧೯೨೬ನೇ ಇಸವಿ ಜೂಲೈ ತಾ. ೮ನೇ ಗುರುವಾರ.

ಮೋಟಾರ್ ನಿಬಂಧನೆಗಳು

ಮೈಸೂರು ಸಂಸ್ಥಾನದಲ್ಲಿ ಮೋಟಾರುಗಳ ಅನಾಹುತಗಳ ದೆಸೆಯಿಂದ ಪದೇ ಪದೇ ದುಃಖಕರವಾದ ಪ್ರಾಣಾಪಾಯಗಳು ಸಂಭವಿಸುತ್ತಲಿವೆ. ಈ ಅನಾಹುತಗಳ ಸಂಖ್ಯೆ ವರುಷೇ ವರುಷ ಹೆಚ್ಚಾಗುತ್ತಿರುವುದನ್ನು ತಪ್ಪಿಸುವುದಕ್ಕೆ ಅವಶ್ಯವಾದ ಏರ್ಪಾಡುಗಳನ್ನು ಮಾಡಬೇಕೆಂದು ನಾವು ಗವರ್ನಮೆಂಟಿನವರನ್ನೂ ಮೋಟಾರುಗಳನ್ನಿಟ್ಟಿರುವವರನ್ನೂ ಕೇಳಿಕೊಳ್ಳಲಪೇಕ್ಷಿಸುತ್ತೇವೆ.

ಶ್ರೀರಂಗಪಟ್ಟಣದ ಮ॥ ದೇವಮ್ಮನವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಕೇಳಿದ ಪ್ರಶ್ನೆಗೆ ಸರ್ಕಾರದವರು ಕೊಟ್ಟಿರುವ ಉತ್ತರವನ್ನು ನೋಡಿದರೆ ಕಳೆದ ಮೂರು ವರುಷಗಳಲ್ಲಿ ಸಂಸ್ಥಾನಾಮಳೆ 19, 15, 57, ಈ ರೀತಿ ಮೋಟಾರ್ ಅನಾಹುತಗಳು ಸಂಭವಿಸಿರುವೆಂದೂ, ಆ ಮೂರು ವರುಷಗಳಲ್ಲೂ 2, 3, 19 ಜನರಿಗೆ ಪೂರಾ ಪಾಯಗಳುಂಟಾದವೆಂದೂ, ಈ ಅನಾಹುತಗಳ ದೆಸೆಯಿಂದ ಮೂರು ವರುಷಗಳೊಳಗೂ 7, 7, 14 ಜನಗಳು ಪ್ರಾಣ ಕಳೆದುಕೊಂಡರೆಂದೂ ಗೊತ್ತಾಗುತ್ತದೆ. ಈ ಲೆಕ್ಕಗಳಿಂದ ಈ ಮೋಟಾರ್ ಅನಾಹುತಗಳನ್ನು ತಪ್ಪಿಸುವ ವಿಷಯದಲ್ಲಿ ಯಾವುದಾದರೊಂದು ಗೊತ್ತಾದ ಕ್ರಮವನ್ನು ಸ್ವಲ್ಪವೂ ತಡಮಾಡದೆ ಮಾಡಿಡಬೇಕೆನ್ನುವುದು ಎಲ್ಲರಿಗೂ ಪರಿಷ್ಕಾರವಾಗಿ ಕಂಡುಬರುವುದು.

ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ಇರುವಂಥಾ ನಮಗೆ ಈ ಮೋಟಾರುಗಳ ಅನಾಹುತಗಳು ದಿನೇ ದಿನೇ ಹೆಚ್ಚುತ್ತಿರುವುದೇನೂ ಆಶ್ಚರ್ಯವನ್ನು ಉಂಟುಮಾಡುವುದಾಗಿಲ್ಲ. ಇನ್ನೂ ಹೆಚ್ಚು ಅನಾಹುತಗಳು ಪ್ರಾಪ್ತವಾಗದೆ ಇರುವುದೇ ನೋಜಿಗವಾಗಿದೆ. ಪಟ್ಟಣದ ನಡುಮಧ್ಯ ಪ್ರದೇಶಗಳಿಂದ ಪೂರಾ ಧರ್ತಿಯಾಪ ಮೋಟಾರ್ ಬಸ್ಸುಗಳು ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ಹೋಗುತ್ತಲೂ ಬರುತ್ತಲೂ ಇರುವವು. ಅನೇಕ ವೇಳೆ ಜನಧರಿತವೂ ಇಕ್ಕಟ್ಟೂ ಆದ ಬೀದಿಗಳನ್ನು ಹಾಸಿ ಹೋಗಿಬರುತ್ತವೆ. ಇವುಗಳನ್ನು ಮಿತಿಮೀರಿದ ವೇಗದಿಂದ ಓಡಿಸುವರು. ಪಟ್ಟಣದ ಬೀದಿಗಳೊಳಗೆ ಮೋಟಾರ್ ಕಾರುಗಳನ್ನು ನಡಿಸುವವರಲ್ಲಿ ಅನೇಕ ಮಂದಿ ಯುವಕರಾಗಿಯೂ ಅಷ್ಟೋ ಇಷ್ಟೋ ತರವೇತಾದವರಾಗಿಯೂ ಇದ್ದು ಹೊಲ್ಸೀನಿನ ಯಾವ-ಬಿಂದೋಬಸ್ತೂ ಇಲ್ಲದೆ ನಿರ್ಲಕ್ಷ್ಯವಾಗಿ ಓಡಿಸುತ್ತಾರೆ. ಇದರಿಂದ ಅನಾಹುತಗಳಾಗದಿದ್ದರೂ ಪ್ರಜೆಗಳಿಗೆ ಬಹಳ ಅನಾನುಕೂಲ ಉಂಟಾಗುತ್ತಿದೆ. ಡ್ರೈವರುಗಳಲ್ಲಿ ಅನೇಕರಿಗೆ ರಸ್ತೆಯೆಲ್ಲಾ ತಮಗೋಸ್ಕರವೇ ಬಿಟ್ಟಿದ್ದೆಂಬ ಭಾವನೆ ಇರುವುದು. ಆದ್ದರಿಂದ ಅವರು ಮೋಟಾರ್ ಓಡಿಸಿಕೊಂಡು ಹೋಗುವಾಗ ರಸ್ತೆಯಲ್ಲಿ ಸಂಚಾರಮಾಡುವವರೆಲ್ಲಾ ಅತ್ತಿತ್ತ ಹೋಗಿ ನಿಲ್ಲಬೇಕೆಂದು ಆಪೇಕ್ಷಿಸುವರು. ಆದರೆ ತಪ್ಪೆಲ್ಲಾ ಅವರ ಮೇಲೆ ಹೊರಿಸುವುದು ಸಹಜವಲ್ಲ. ಕೆಲವು ಮೋಟಾರ್ [illegible] ನಿದಾನವಾಗಿಯೂ ಎಚ್ಚರಿಕೆಯಿಂದಲೂ ನಡಿಸಿಕೊಂಡು [illegible] ಕತೆಯಿಂದ ರಸ್ತೆಗಳಲ್ಲಿ ನಿಂಚಾರಮಾಡುವಂಥಾ ಒಂದು ಮೋಟಾರ್ ಕಾರ್ ಇರುತ್ತದೆ. ಮೋಟಾರುಗಳನ್ನಿಟ್ಟಿರುವವರೆಲ್ಲಾ ನಮ್ಮ ಶ್ರೀಮನ್ಮಹಾರಾಜರವರಂತೆ ನಡಿಸಿಕೊಂಡು ಹೋಗುವುದಾದರೆ ಆಕ್ಸಿಡೆಂಟ್‌ಗಳು ಎಷ್ಟೋ ಕಡಮೆಯಾಗಬಹುದು. ಆದರೆ ಮೋಟಾರ್ ಕಾರುಗಳನ್ನಿಟ್ಟಿರುವ ಕೆಲವು ಮಂದಿ ನಿಲುಗಡೆ ಇಲ್ಲದಂತೆಯೂ ಕಿವಿ ಚಿಟ್ಟೆನ್ನುವಂತೆಯೂ ಹಾರ್ನ್‌ಮಾಡಿಕೊಂಡು ಹೋಗುತ್ತಾರೆ. ಮೋಟಾರುಗಳಿಗೆ ಮುಂಚಾಗದಲ್ಲಿ ಪಟ್ಟುವ ಹಡ್‌ಲೈಟ್ಸ್ (ದೀಪಗಳು) ಭಯಭ್ರಾಂತಿಯನ್ನುಂಟುಮಾಡುವವು. ಅವನ್ನು ಓಡಿಸುವ ರಥನವಾದರೋ ಎಲ್ಲಿ ಯಾರು ಅದಕ್ಕೆ ಸಿಕ್ಕಿ ಅನಾಹುತವಾಗುತ್ತದೆಯೋ ಎಂಬಷ್ಟು ಭೀತಿ ಮೂರಿದ್ದಾಗಿರುತ್ತದೆ. ಈಗ್ಗೆ ಮೂರು ವಾರಗಳ ಹಿಂದೆ ಇಬ್ಬರು ಡೆಪ್ಯೆ ಕಮೀಷ್ನರುಗಳು ಕುಳಿತಿದ್ದ ಒಂದು ಮೋಟಾರ್ ಕಾರು ರಾಜಧಾನಿಯಲ್ಲಿ ಜನಧರಿತವೂ ಇಕ್ಕಟ್ಟೂ ಆದ ಜೇದಿಯಲ್ಲಿ ಹೋಗುತ್ತಿದ್ದಾಗ ಒಬ್ಬ ಮುದುಕಿಯು ಹೇಗೋ ಸಿಕ್ಕಿ ಗಾಯಪಟ್ಟು ಸತ್ತು ಹೋದಳೆಂದು ಆಗಲೇ ತಿಳಿಸಿದ್ದೇವೆ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಮೇಂಬರ ಪ್ರಶ್ನೆಗೆ ಹೇಳಿರುವ ಸರ್ಕಾರದ ಉತ್ತರವು ಬರೀ ಉತ್ತರವಾಗಿರುವುದು. ರೂಲನು ವಿಚಾರವನ್ನು ಉತ್ತರದಲ್ಲಿ ಸೂಚಿಸಿದಾರೆ. ಆದರೆ ರೂಲನು ಅನುಸರಿಸಿ ಬೇರೆ ಕೆಲಸ ನಡೆಯುವುದಿಲ್ಲ. ಈ ಸಂದರ್ಭದಲ್ಲಿ ನಾವು ಸರ್ಕಾರದವರಿಗೆ ಕೆಲವು ಸಲಹೆಗಳನ್ನು ಕೊಡಬೇಕೆಂದು ಕುತೂಹಲಪಡುತ್ತೇವೆ.

(1) ರಸ್ತೆಗಳಲ್ಲಿ ಕಾಲ್ನಡಿಗೆಯಲ್ಲೇ ಸಂಚಾರಮಾಡತಕ್ಕವರಿಗೆ ಕಟ್ಟುನಿಟ್ಟಾಗಿ ಎಡಬಲ ಪಾರ್ಶ್ವಗಳ ಅಂಚುಗಳನ್ನೇ ಹಿಡಿದು ತಿರುಗಾಡುವಂತೆ ಕೆಲವು ಕಾಲ ಎಚ್ಚರಿಕೆ ಹೇಳುತ್ತಲೇ ಬರಬೇಕಾಗಿದೆ. **ಕೆಲವು ತಿಂಗಳ ಹಿಂದೆ ರಾಜಧಾನಿಯಲ್ಲಿ ಈ ರೀತಿ ಏರ್ಪಾಡು ಇದ್ದಿತು. [illegible] ಸಂಚಾರಮಾಡುವವರು ಲಕ್ಷ್ಯವಿಲ್ಲದೆ ಮಧ್ಯರಸ್ತೆಗಳಲ್ಲೇ ಹೋಗಿಬರುವರು.** ನಡೆದು ಹೋಗುವವರೂ ಬೈಸಿಕಲ್ ಸವಾರಿಮಾಡುವವರೂ ಸ್ವೇಚ್ಛೆಯಾಗಿ ತಿರುಗಾಡುತ್ತಾರೆ. ಅವರನ್ನು ತಡೆದು ಎಚ್ಚರಿಕೆ ಹೇಳುವವರು ಯಾರೂ ಕಾಣುವುದಿಲ್ಲ.

(2) ಮೋಟಾರ್ ಕಾನೂನನ್ನು ಅತ್ಯಂತ ಕಟ್ಟುನಿಟ್ಟಾಗಿ ನಡಿಸಬೇಕಾದದ್ದು ಪರಮಾವಶ್ಯಕ. ಈಗ ಡ್ರೈವರುಗಳ ರಾಯಿಬಿಯನ್ನು ಪರೀಕ್ಷಿಸುವ ಕ್ರಮವು ಅನೇಕವೇಳೆ ಪರಿಹಾಸಕರವಾಗಿದೆ. ಇಜಿನಿಯರಿಂಗ್ ಸ್ಕೂಲಿನಿಂದ ತಂದ ಸರ್ಟಿಫಿಕೇಟುಗಳನ್ನು ಆಲಕ್ಷ್ಯದಿಂದ ಕಾಣುತ್ತಾರೆ. ಮೋಟಾರ್ ಬಸ್ಸುಗಳ ಅಜಮಾಯಿಷಿಯಾದರೋ ಅನೇಕ ಸಂದರ್ಭಗಳಲ್ಲಿ ಹೆಸರಿಗೆ ಮಾತ್ರ ನಡೆಯುವುದು. ಬಸ್ಸುಗಳಲ್ಲಿ ಜನರನ್ನೂ ಸಾಮಾನುಗಳನ್ನೂ ಧರ್ತಿಮಾಡುವುದು ಅಷ್ಟಿಷ್ಟೆಂದು ಹೇಳರಾಗದು.

(3) ಪ್ರತಿ ಒಬ್ಬ ಡ್ರೈವರೂ ಪ್ರತಿ ವರುಷವೂ ಲೈಸೆನ್ಸನ್ನು ಹೊಸವಾಗಿ ಪಡೆಯುವಂತಾಗಬೇಕು. ಅವನು ಗಾಡಿ ನಡಿಸುವುದರಲ್ಲಿ ಸಂಭವಿಸುವ ಅಕ್ರಮಗಳನ್ನೆಲ್ಲಾ ಆ ಲೈಸೆನ್ಸಿನಲ್ಲಿ "ಇಂಡಾರಸು" ಮಾಡಿ ಬರೆದಿಡಬೇಕು. ಅಂಥಾ ಇಂಡಾರಸುಗಳ ಪೈಕಿ ಕೆಲವಕ್ಕೆ ಕೆಲವು ಕಾಲ ಲೈಸೆನ್ಸು ತಪ್ಪಿಸುವಂಥಾ ಶಿಕ್ಷೆಗೆ ಗುರಿಪಡಿಸಬೇಕು. ಮೋಟಾರ್ ಬಸ್ಸಾಗಲಿ, ಕಾರ್ ಆಗಲಿ ನಡಿಸುತ್ತಿದ್ದಾಗ ಮರಣಕರವಾದ ಅನಾಹುತವೇನಾದರೂ ಸಂಭವಿಸಿದರೆ ಆ ಮೊಕದ್ದಮೆಯು ಇತ್ಯರ್ಥವಾಗುವ ತನಕ ಡ್ರೈವರ ಲೈಸೆನ್ಸನ್ನು ರದ್ದುಮಾಡಿರಬೇಕು.

(4) ಇದೆಲ್ಲದಕ್ಕಿಂತಲೂ ಮೋಟಾರ್ ಅನಾಹುತದಲ್ಲಿ ಯಾರ ಪ್ರಾಣವಾದರೂ ಹೋಗಿಬಿಟ್ಟರೆ ಅಂಥಾ ಮೊಕದ್ದಮೆಯನ್ನು ತತ್ ಕ್ಷಣವೇ ವಿಚಾರಣೆಮಾಡಿ ಜಾಗ್ರತೆ ಇತ್ಯರ್ಥಪಡಿಸಬೇಕು. ಇಂಥಾ ಮೊಕದ್ದಮೆಗಳು ಬಹಳ ನಿಧಾನವಾಗಿ ನಡೆಯುವುದನ್ನು ನೋಡಿ ಪ್ರಜೆಗಳು ಹಾಸ್ಯಮಾಡುತ್ತಿರುವರು. ಈ ವಿಚಾರವನ್ನು ನಾವು ಕೂಡ ಪದೇ ಪದೇ ಒತ್ತಿ ಹೇಳುತ್ತಾ ಬಂದಿರುವೆವು. ಈಗಲೂ ಇನ್ನೊಂದು ಸಾರಿ ಹೇಳುವೆವು. ರಾಜಧಾನಿಯಲ್ಲಿ ಒಬ್ಬ ಹೆಣ್ಣುಮಗುವು ಮೋಟಾರ್ ಕಾರಿಗೆ ಸಿಕ್ಕಿ ಸತ್ತು ಆರು ತಿಂಗಳ ಮೇಲಾಯಿತು. ಈ ಮೊಕದ್ದಮೆಯು ದರ್ಯಾಫ್ತಿಯೇ ಇನ್ನೂ ಪ್ರಾರಂಭವಾಗಿಲ್ಲ; ಅದು ಮುಗಿಯುವುದೆಂದಿಗೋ ಕಾಣೆವು. ಆ ಮೋಟಾರ್ ಕಾರನ್ನು ಡ್ರೈವ್ ಮಾಡಿದವನು ಈಗಲೂ ರಾಜಧಾನಿಯಲ್ಲಿ ಮೋಟಾರ್ ನಡಿಸುತ್ತಲೇ ಇದಾನೆ. ಕಬ್ಬು ಹೆಳ್ಳಿ ನಾಪುಕಾರ್ ಚನ್ನಬಸಪ್ಪನವರು ಮೃತಪಟ್ಟ ಮೋಟಾರ್ ಬಸ್ಸಿನ ಅನಾಹುತದ ಮೊಕದ್ದಮೆಯು ಆತನು ತೀರಿಹೋಗಿ ಆರು ತಿಂಗಳಾಗಿದ್ದರೂ ಇನ್ನೂ ತೀರ್ಮಾನವಾಗುವುದರಲ್ಲೇ ಇದೆ. ಈ ರೀತಿ ಪಿತಿಮಿರಿರುವುದು ಹೇಳನಕ್ಕೆ ಕಾರಣವಾಗಿದೆ ಎಂದೂ, ಸಂಬಂಧಪಟ್ಟ ಅಧಿಕಾರಿಗಳ ಯೋಗ್ಯತೆಗೂ ಕಾರ್ಯದಕ್ಷತೆಗೂ ಕುಂದ ಕವನ್ನು ತರತಕ್ಕದ್ದಾಗಿದೆ ಎಂದೂ ನಮಗೆ ಶಕ್ತಿ ಇರುವ ಮಟ್ಟಿಗೂ ಒತ್ತಿ ಹೇಳಲಪೇಕ್ಷಿಸುತ್ತೇವೆ.

ಒಬ್ಬ ಸನ್ಯಾಸಿಯು ಕ್ರೈಸ್ತ ಪ್ರಸಂಗಿಯಾದುದು

ಈ ಕಥೆಯಲ್ಲಿ ಒಬ್ಬ ಹಿಂದೂ ಸನ್ಯಾಸಿಯು ತಾನು ಹೇಗೆ ಕ್ರಿಸ್ತನ ಶಿಷ್ಯನಾಗಿ ಆತನನ್ನು ಕುರಿತ ಶುಭವರ್ತಮಾನವನ್ನು ಸಾರುತ್ತಾ ಬಂದೆನೆಂಬುದನ್ನು ತಿಳಿಸುತ್ತಾನೆ. ಅವನು ಹೇಳುವುದೇನೆಂದರೆ :–

ನಾನು ಇನ್ನೂ ಬಾಲಕನಾಗಿರುವಾಗಲೇ ತನ್ನ ತಂದೆತಾಯಿಗಳಿಬ್ಬರೂ ದೇವರ ಪಾದವನ್ನು ಸೇರಿಕೊಂಡರು. ನಾನು ಲೋಕವನ್ನು ಕುರಿತು ಯೋಚನೆಮಾಡುವಾಗ ಆಗಲೇ ಅದು ನನಗೆ ಅನಿಷ್ಟವಾಗಿ ಕಂಡುಬಂದಿತು. ದೇವರು ಉಂಟುಮಾಡಿದ ಈ ಶೃಂಗಾರವಾವ ಲೋಕವನ್ನು ನನ್ನ ನುತ್ತು ಮುತ್ತಲೂ ಇರುವ ಜನಗಳು ತಮ್ಮ ದುಷ್ಪಕಾರ್ಯಗಳಿಂದ ಕಡಿಸುತ್ತಾ ಬರುವಂತೆ ನನಗೆ ತೋರಿತು. ಆದಕಾರಣ ನಾನು ಹನ್ನೆರಡು ವರುಷದ ಬಾಲಕನಾಗಿದ್ದಾಗಲೇ ನಮ್ಮ ಊರನ್ನು ಬಿಟ್ಟುಬಿಟ್ಟೆನು.

ನಮ್ಮ ಊರು ಕಲ್ಕತ್ತ ಪಟ್ಟಣಕ್ಕೆ ನೂರು ಮೈಲಿಗಳಿಗಿಂತಲೂ ಹೆಚ್ಚು ದೂರದಲ್ಲಿರುವುದು. ನಾನು ಧೂಳಿನಲ್ಲಿಯೂ ಬಿಸಿಲಿನಲ್ಲಿಯೂ ನಡೆದು ನಡೆದು ಕತೆಗೆ ಆ ಪಟ್ಟಣದಲ್ಲಿರುವ ಒಂದು ಪ್ರಸಿದ್ಧವಾದ ದೇವಸ್ಥಾನಕ್ಕೆ ಹೋದೆನು. ಹಿಂದೂ ಮತಶೋಧನೆಯನ್ನೂ ಅದರ ಆಚಾರಗಳನ್ನೂ ಚೆನ್ನಾಗಿ ಕಲತು ಕೊಳ್ಳಬೇಕೆಂಬ ಕಾಂಕ್ಷೆಯು ನನ್ನ ವಯಸ್ಸಿನಲ್ಲಿದ್ದುದರಿಂದ ನಾನು ಕೆಲವು ವರುಷಗಳ ವರೆಗೂ ಎಂದರೆ ನನ್ನ ಬಾಲ್ಯವು ಕಳೆದು ಪೂರ್ಣ ವಯಸ್ಕನಾಗುವ ವರೆಗೂ ಆ ಪಟ್ಟಣದಲ್ಲಿಯೂ ಅದರ ಸುತ್ತಮುತ್ತಲೂ ಇರುವ ದೇವ ಸ್ಥಾನಗಳಲ್ಲೇ ವಾಸಮಾಡುತ್ತಿದ್ದೆನು. ನಾನು ಬಂಗಾಳಿ ವಿದ್ಯೆಯಲ್ಲಿ ಪಾರಂಗತನಾದ ತರುವಾಯ ಸನ್ಯಾಸಿಯಾದೆನು.

ನಾನು ಚಿಂದಿಯನ್ನುಟ್ಟುಕೊಂಡೆನು. ಕೆಲವು ಸಂದರ್ಭಗಳಲ್ಲಿ ಅದೂ ಇರುತ್ತಿರಲಿಲ್ಲ. ನನ್ನ ಕೂದಲು ಬೆಳೆದು ಜಡೆ ಕಟ್ಟಕೊಳ್ಳುವಂತೆ ಬಿಟ್ಟುಬಿಟ್ಟೆನು. ಸ್ನಾನವಿಲ್ಲದೆ ನನ್ನ ದೇಹವು ಕೃಶವಾಯಿತು. ಹಿಂದೂ ಋಷಿಗಳು ಅನುಸರಿಸುತ್ತಾ ಬರುವ ಆ ಕಷ್ಟಕರವಾದ ಮಾರ್ಗದಲ್ಲಿ ನಾನು ಹನ್ನೆರಡು ವರುಷಗಳ ಕಾಲ ನಡೆಯುತ್ತಾ ಬಂದೆನು. ದಾರಿಯು ಮಗ್ಗುಲು ಅಥವಾ ಕ್ರಾಡೇ-ಹೊರತು ಬೇರೆ ನುಸುಳುವಂತಿರಲು [illegible] ಕೆಲವು ಸಮಯಗಳಲ್ಲಿ ನಾನು ಅದನ್ನೂ ನಿರಾಕರಿಸುತ್ತಿದ್ದೆನು. ಏಕೆಂದರೆ ನನ್ನ ಆತ್ಮವನ್ನು ಬಂಧಿಸಿರುವ ಪಾಶಗಳಿಂದ ಮುಕ್ತನಾಗಬೇಕೆಂಬ ಕುತೂಹಲವು ನನ್ನಲ್ಲಿ ಬಹಳವಾಗಿದ್ದಿತು. ನಾನು ನಿದ್ರೆಮಾಡುತ್ತಿರಲಿಲ್ಲ. ಸಾಯಂಕಾಲವಾದ ಕೂಡಲೇ ಯಾವುದಾದರೊಂದು ಎತ್ತರವಾದ ಮರದ ಮೇಲೆ ಹತ್ತಿ ಅಲ್ಲಿಂದ ಕೆಳಕ್ಕೆ ಬಿದ್ದು ಸತ್ತೇನೆಂಬ ಭಯದಿಂದಲಾದರೂ ನಿದ್ರೆ ಮಾಡದಂತೆ ಅಲ್ಲೇ ಕುಳಿತುಕೊಂಡು ರಾತ್ರಿಯನ್ನೆಲ್ಲಾ ಕಳೆಯುತ್ತಿದ್ದೆನು. ನಾನು ಈ ರೀತಿಗಳಲ್ಲಿ ನಡೆದುಕೊಳ್ಳುತ್ತಾ ಬಂದುದರಿಂದ ನನ್ನ ಆತ್ಮಕ್ಕೆ ಅನಾಧಾರಣವಾದ ಶಕ್ತಿಗಳು ಪ್ರಾಪ್ತವಾಗಿ ಬಂದುವು. ಜನಗಳು ಕುಂಬಾ ಭಯಭಕ್ತಿಯುಕ್ತರಾಗಿ ನನ್ನ ಬಳಿಗೆ ಬರುತ್ತಿದ್ದರು. ನಾನು ಮೂರು ಸಾರಿ ಬಂದು ಪ್ರಯತ್ನಪಡಿದನು. ನನ್ನ ಮಾತಿನ ಶಕ್ತಿಯಿಂದಲೇ ಒಬ್ಬ ರೋಗಿಗೆ ಗುಣವಾಯಿತು. ಇದು ಪ್ರಾಪ್ತವ.

ಈ ದೀರ್ಘಕಾಲದ ಅನೇಕಾನೇಕ ಆಶ್ಚರ್ಯಕರವಾದ ಕಥೆಗಳನ್ನು ನಾನು ಹೇಳಬಲ್ಲೆನು. ಆದರೆ ನಾನು ತಿಳಿಸಬೇಕೆಂದಿರುವ ವಿಷಯವು ಅವುಗಳನ್ನು ಕುರಿತಾದುದ್ದಲ್ಲ. ನಾನು ಹನ್ನೆರಡು ವರುಷಗಳ ಕಾಲ ಸನ್ಯಾಸಿಯಾಗಿದ್ದ ಮೇಲೆ ನನ್ನಲ್ಲುಂಟಾದ ಮಾರ್ಪಡುಪಿಕೆಯನ್ನು ತಿಳಿಸಬೇಕೆಂಬುದೇ ನನ್ನ ಅಭಿಲಾಷೆ. ನಾನು ನನ್ನ ಜಡೆಯನ್ನು ಕತ್ತರಿಸಿಬಿಟ್ಟೆನು. ಸ್ನಾನವಿಲ್ಲದೆ ಇದ್ದವನು ಸ್ನಾನಮಾಡಿದನು. ತಿರಿಗಿ ಈ ಲೋಕದ ಸಾಮಾನ್ಯ ವಾದ ಬಾಳಿನೊಳಗೆ ಪ್ರವೇಶಮಾಡಿದೆನು. ನಾನು ವಿದ್ಯಾವಂತನಾಗಿದ್ದುದರಿಂದ ಜನರು ನನ್ನನ್ನು ಮರ್ಯಾದೆಯಿಂದ ಕಾಣುತ್ತಿದ್ದರು. ಒಂದು ದಿನ ಒಬ್ಬನು ನನ್ನ ಬಳಿಗೆ ಬಂದು–ನೀವು ನನ್ನ ಜತೆಗೆ ಬನ್ನಿರಿ; ನಾವಿಬ್ಬರೂ ಸೇರಿ ಒಂದು ಪಾಠಶಾಲೆಯನ್ನು ಪ್ರಾರಂಭಿಸೋಣವೆಂದು ಹೇಳಿ ನನ್ನನ್ನು ಕರೆದನು. ನಾನು ಅದಕ್ಕೆ ಒಪ್ಪಿ ಅವನ ಜತೆಗೆ ಸೇರಿಕೊಂಡೆನು. ಅವನಾದರೋ ಮೋನಗಾರನು. ಮನೆಯ ಬಾಡಿಗೆ ಮುಂತಾದ ಕರ್ಚುಗಳಿಗೆ ಹಣ ಕೊಡಬೇಕಾದ ಕಾಲ ಬಂದಾಗ ಆ ಆಸಾಮಿ ತಲೆತಪ್ಪಿಸಿಕೊಂಡು ಹೊರಟುಬಿಟ್ಟನು. ಅವನು ಎಲ್ಲಿಗೆ ಹೋದನೋ ನನಗೆ ತಿಳಿಯದು. ಸಾಲ ತೀರಿಸುವುದಕ್ಕೆ ನನ್ನಲ್ಲಿ ಹಣವಿರಲಿಲ್ಲ. ಆದಕಾರಣ ಆ ಮನೆಯ ಮಾಲೀಕನು ನನ್ನನ್ನು ಹಿಡುಕೊಂಡು ತನ್ನ ಮನೆಗೆ ಕರಕೊಂಡು ಹೋಗಿ ಜೀತ ಮಾಡಬೇಕೆಂದು ಒತ್ತಾಯಮಾಡಿದನು. ಅವನಿಗೆ ಒಂದು ಅಂಗಡಿಯೂ ಇದ್ದಿತು. ಅವನ ಬಳಿಯಲ್ಲಿ ನಾನು ಎಡೆಬಿಡದೆ ಕೆಲಸಮಾಡಬೇಕಾಗಿ ಬಂದಿತು. ಕೆಲಸವೇನೋ ಕಷ್ಟಕರವಾದುದು. ಸಂಬಳವಾದರೋ ಏನೂ ಇಲ್ಲ. ಪೆಟ್ಟುಗಳು ಬೈಗಳಗಳಿಗಂತೂ ಲೆಕ್ಕವಿಲ್ಲ. ಒಂದು ದಿನ ನಾನು ನದೀ ತೀರದಲ್ಲಿ ನರಕುಗಳನ್ನು ಇಳಿಸುತ್ತಿದ್ದಾಗ ಕಾಲುಜಾರಿ ನೀರಿನೊಳಗೆ ಬಿದ್ದೆನು. ದೇವರು ನನ್ನನ್ನು ಕಾಪಾಡದೆ ಕೈ ಬಿಟ್ಟಿದ್ದರೆ ಒಂದು ಪೊನ ಳೆಗೆ ಗ್ರಾಸವಾಗುತ್ತಿದ್ದೆನು. ಆ ಕಾಲದಲ್ಲಿ ನಡೆದ ನಂಗತಿಗಳನ್ನು ನೆನಪಿಗೆ ತಂದುಕೊಳ್ಳುವುದು ಅನಿಷ್ಟ, ವ್ಯಸನಕರ. ನನಗೆ ಇನ್ನೊಂದು ನಂಗತಿಯು ಪ್ಲಾಷಕದಲ್ಲಿರುತ್ತದೆ. ಅದೇನೆಂದರೆ–ಒಂದು ದಿನ ನಾನು ಒಂದು ಚಿಕ್ಕ ಕಾಡಿನಲ್ಲಿದ್ದ ಕಾಳಿಕಾ ದೇವಸ್ಥಾನದ ಮುಂದೆ ಹಾದುಹೋಗುತ್ತಾ ಅಲ್ಲಿ ಮನುಷ್ಯನ ಮುಂಡವಿಲ್ಲದ ರುಂಡ ಮಾತ್ರ ಬಿದ್ದಿರುವುದನ್ನು ಕಂಡೆನು. ಈಗಲೂ ಆ ನೋಟವನ್ನು ನೆನಸಿಕೊಂಡರೆ ನನಗೆ ತುಂಬಾ ಭಯವಾಗುತ್ತದೆ. ನನ್ನ ಮನಸ್ಸಿಗೆ ಸಮಾಧಾನವೇ ಇರಲಿಲ್ಲ. ನಾನು ತಿರಿಗಿ ಸನ್ಯಾಸಿಯಾಗಿ ಧ್ಯಾನ ಪಾರಾಯಣಗಳಲ್ಲಿ ಕಾಲವನ್ನು ಕಳೆಯಬೇಕೆಂದು ಯೋಚಿಸುತ್ತಿದ್ದೆನು.

ಚಿಕ್ಕನಾಯಕನಹಳ್ಳಿಯ ದೇವಾಂಗ ಮಂಡಲಯವರು ತಮ್ಮ ಡಿಸ್ಟ್ರಿಕ್ಟಿನ ದೇವಾಂಗ ಜನರ ಸಮ್ಮೇಳನವನ್ನು ಬರುವ ಆಷಾಢ ಶುದ್ಧ ಏಕಾದಶೀ (ಜೂಲೈ 23-24 ನೆಯ ತಾ.) ಸುಮಾರಿನಲ್ಲಿ ನಡೆಯಿಸಬೇಕೆಂಬುದಾಗಿ ಪ್ರಯತ್ನಮಾಡುತ್ತಿರುವರೆಂದು ತಿಳಿದುಬಂದಿದೆ.

ವಿಶೇಷ ವೃತ್ತಾಂತ

ಐರಾಕ್ (ಅಥವಾ ಮೆಸೊಪೊಟೇಮಿಯ) ಪ್ರದೇಶದ ಎಲ್ಲೆಕಟ್ಟುಗಳ ವಿಚಾರವಾಗಿ ಗ್ರೇಟ್ ಬ್ರಿಟನ್‌ನವರಿಗೂ ಟರ್ಕಿಯವರಿಗೂ ದೀರ್ಘಕಾಲ ಚರ್ಚೆಗಳು ನಡೆದು ಕತೆಗೆ ಎರಡು ರಾಜ್ಯಗಳವರೂ ಒಂದು ಒಪ್ಪಂದವನ್ನು ಮಾಡಿಕೊಂಡಿರುವುದು ಸಂತೋಷಪ್ರದವಾಗಿದೆ. ಉಭಯ ರಾಜ್ಯಗಳವರೂ ಹೇಗಾದರೂ ಪರಸ್ಪರ ಒಪ್ಪಂದವಾಡಿಕೊಳ್ಳಬೇಕೆಂಬ ಕುತೂಹಲವುಳ್ಳವರಾಗಿದ್ದರು. ಗ್ರೇಟ್ ಬ್ರಿಟನ್‌ನವರು ಟರ್ಕಿಯವರಿಗೆ ಶಿಟ್ಟುಂಟಾಗುವಂತೆ ಮಾಡಿ ಅವರನ್ನು ರೇಗಿಸಿಬಿಡಬೇಕೆಂಬ ಅಭಿಪ್ರಾಯವುಳ್ಳವರಾಗಿರಲಿಲ್ಲ. ಟರ್ಕಿಯವರಿಗೂ ಕೂಡ ಪಾಶ್ಚಾತ್ಯ ರಾಜ್ಯಗಳಲ್ಲಿ ಶತ್ರುಗಳನ್ನು ಕಲ್ಪನೆಮಾಡಿಕೊಳ್ಳಬೇಕೆಂಬ ಆಕೆ ಇರಲಿಲ್ಲ. ಯಾಕೆಂದರೆ ಟರ್ಕಿಯವರು ಪಶ್ಚಿಮದಿಕ್ಕಿನ ತಮ್ಮ ನೆರೆ ರಾಜ್ಯದವರಲ್ಲಿ ನಂಬಿಕೆಯನ್ನೂ ದುರಭಿಪ್ರಾಯವನ್ನೂ ಆಗಲೇ ಕಲ್ಪನೆಮಾಡಿಕೊಳ್ಳುವ ನಂಬಿಕೆ ಉಂಟಾಗಿದೆ ಎಂದು ತಿಳಿದಿರುವರು. ಈಗ ನಡೆದಿರುವ ಒಪ್ಪಂದವು ಉಭಯತ್ರರಿಗೂ ನಂತೋಷ ಸಮಾಧಾನಗಳನ್ನುಂಟುಮಾಡಿರುವಂತೆ ಕಾಣುತ್ತದೆ. ಐರಾಕ್ (ಮೆಸೊಪೊಟೇಮಿಯ) ಪ್ರದೇಶವು ಯೋಗಕ್ಷೇಮವು ನೆಲೆಯಾಯಿತು. ಇಷ್ಟೇ ಇಂಗ್ಲಾಂಡಿಗೆ ಬೇಕಾಗಿದ್ದದ್ದು. ಅತ್ತರಾಗಿ ಟರ್ಕಿಯವರಿಗೆ ಈ ಒಪ್ಪಂದದಿಂದ ಕೆಲವು ಹೊಸ ಪ್ರದೇಶಗಳು ದೊರಕಿದವು. ಇದಲ್ಲದೆ ಐರಾಕ್ ಪ್ರದೇಶದಲ್ಲಿ ತೆಗೆಯುವ ಎಣ್ಣೆಯಿಂದ ಬರತಕ್ಕ ರಾಧದಲ್ಲಿ ಒಂದು ಪಾಲು ಟರ್ಕ

ಮಕ್ಕಳು ಗಾಯಮಾಡಿಕೊಂಡಾಗ!

Zam-Buk

ಕತ್ತರಿಸಿದ ಗಾಯ, ಹುಣ್ಣುಗಳು ಮತ್ತು ಜಜ್ಜಿದ ನೋವುಗಳನು ತತ್‌ಕ್ಷಣ ಶಮನ ಮಾಡಿ ವಾಸಿಮಾಡುವುದೇ ಖಂಡಿತ ಸಾಂಬಕ್ ಮುಲಾಮು

ನೆಮ್ಮದಿಯಾಗಿ ವಿಪರೀತದಂತೆ ವಾಸಿಮಾಡುವ ಸಾಂಬಕ್ ಮುಲಾಮನ್ನು ತಕ್ಷಣವೇ ಉಪಯೋಗಿಸುವಂತೆ ಸರ್ವದಾ ಸವಿಾಪದಲ್ಲಿಟ್ಟುಕೊಂಡಿದ್ದರ್ಲಿ ಮಕ್ಕಳು ಅಕಸ್ಮಾತ್ತಾಗಿ ಗಾಯ ಮುಂತಾದ್ದು ಮಾಡಿಕೊಂಡಾಗ ನವರಿ ಅಪಾಯ ಸಂಭವಿನದಂತೆ ಚಿಕಿತ್ಸೆ ಮಾಡಿಕೊಳ್ಳುವುದಕ್ಕೆ ತುಂಬಾ ಅನುಕೂಲವಾಗುವುದು.

ಎಲ್ಲಾ ತರದ ಕತ್ತರಿಸಿದ ಘಾಯ, ಉರಿತಾಗಿದ್ದು, ಕಾದೆಣ್ಣೆ ಬಿದ್ದ ಹೊಪ್ಪಳೆ, ಜಜ್ಜಿದ ಘಾಯ, ಗುಮು ಅಥವಾ ಇತರ ಅಪಾಯಗಳಿಗೆಲ್ಲಾ ತಕ್ಷಣವೇ ಸಾಂಬಕ್ಕನ್ನು ಹಚ್ಚಿದರೆ ಭಯಂಕರವಾದ ನೋವನ್ನೆಲ್ಲಾ ಅದು ಕೂಡಲೇ ಶಮನವಾಮಾಡುವುದು. ಅದು ನಂಪೂರ್ಣ ಮೂಲಿಕೆಗಳ ತಯಾರಿ. ಅದು ಮರಣಕರವಾದ ವಿಷಕ್ರಿಮಿಗಳು ಬೆಳೆಯುವಕಾಶಕೊಡದೆ ತಡೆದು ವಾಸಿಮಾಡಬಲ್ಲದ್ದಾಗಿದೆ. ಅದನ್ನು ಹಚ್ಚಿಕೊಂಡಲ್ಲ ರಕ್ತಕ್ಕೆ ವಿಷ ಊತದಂತೆಯೂ, ಉರಿಯಾಗದಂತೆಯೂ ಕಾವಾಡುವುದು.

ಯಾವ ನಿಮಿತ್ತವಾದರೂ ಹುಣ್ಣು ಹರಡುತ್ತಾ ಉರಿ ಹೆಚ್ಚಿದ ಪಕ್ಷಕ್ಕೆ ಆಗಲೂ ಕೂಡಲೇ ಸಾಂಬಕ್ಕನ್ನು ಹಚ್ಚಬೇಕಾದ್ದು ಪರಮಾವಶ್ಯಕ. ಈ ಮುಲಾಮು ಉರಿಯನ್ನೂ, ಹುಣ್ಣನ್ನೂ ಗಾಯವನ್ನೂ ಪರಮಾಶ್ಚರ್ಯವಾಗುವಂತೆ ವಾಸಿಮಾಡುತ್ತದೆ. ಇತರ ಯಾವ ಮುಲಾಮು ಅಥವಾ ತೈಲಗಳಿಂದಲೂ ವಾಸಿಯಾಗದೆ ಇರುವಂಥಾ ಸಂದರ್ಭದಲ್ಲು ಕೂಡ ಸಾಂಬಕ್ ಮುಲಾಮನ್ನು ಹಚ್ಚಿದರೆ ಬೇಗನೆ ಸಂಪೂರ್ಣ ವಾಸಿಯಾಗುತ್ತದೆ.

ಈ ಪರಮಾಶ್ಚರ್ಯಕರವಾದ ಮೂಲಿಕಾ ಸಾಂಬಕ್ ಮುಲಾಮು ಒಂದು ಕುಪ್ಪಿಯನ್ನು ಸರ್ವದಾ ಸವಿಾಪದಲ್ಲೇ ಇಟ್ಟುಕೊಂಡಿರಿ. ಎಲ್ಲಾ ತರದ ಗಾಯಗಳಿಗೂ ಚರ್ಮರೋಗಗಳಿಗೂ ಸಾಂಬಕ್ಕನ್ನು ಬಿಟ್ಟರೆ ಮತ್ಯಾವುದೂ ಅದಕ್ಕೆ ಪ್ರತಿಯಾಗಲಾರದು. ಸಾಂಬಕ್ ಮುಲಾಮು ನಂಬಿಕೆಯಾದ ಸ್ನೇಹಿತನೆಂದೇ ತಿಳಿಯಿರಿ.

ಪ್ರಾಣಿಗಳ ಕೊಬ್ಬು ಸ್ವಲ್ಪವೂ ಮಿಶ್ರವಿಲ್ಲ;

ರೂ. 1; ರೂ. 2-4 ಕುಪ್ಪಿಗೆ, ಎಲ್ಲೆಲ್ಲೂ ಔಷಧ ಪಾಪ್ಪಗಳಲ್ಲೂ ವಿಜಿಂಟರಲ್ಲೂ ದೊರೆಯುತ್ತೆ.

ವಿಜಿಂಟರು—ದಾಧಾ ಕಂಪನಿ, ಎಸ್‌ಪ್ಲೆನೇಡ್, ಮದರಾಸ್.

ಆಯಿಲ್ ಮತ್ತು ಗ್ಯಾಸ್ ಇಂಜಿನ್‌ಗಳು.

ಫೀಲ್ಡಿಂಗ್‌ರಿಂದ ತಯಾರಾದ ಪ್ರಖ್ಯಾತಿಗೊಂಡ ಸ್ಕೆಫ್ಟ್ ಸೆಮಿ ಡೆಯೆಸೆಲ್ ಕ್ರೂಡ್ ಆಯಿಲ್ ಇಂಜಿನ್‌ಗಳು, ತೊಡಕುಗಳಿಲ್ಲ, ಅತ್ಯಂತ ಮಿತವಿಖರ್ಚಿನವು, ಬೆರುಕಾಗಿ ನಡೆಯುವವು, ಬಾಳಿಕೆಯಾದವು. ತನಿಯಲ್ಲೇ ಎರಡು ನಿಮಿಷದೊಳಗೆ ನಡಿಸಬಲ್ಲವು. ವಿಳಾಸ—ಸೋಲ್ ವಿಜೆಂಟರು

[5-8] ಡಿ. ಎಲ್. ಶಾಸ್ತ್ರಿ ಕಂಪನಿ,

12, ತಂಬುಚೆಟ್ಟಿ ಸ್ಟ್ರೀಟ್, ಜಿ.ಟಿ., ಮದರಾಸ್.

DEVANGA BANK Ltd

GENERAL BANKING BUSINESS TRANSACTED

CORRESPOND WITH THE SECRETARY FOR RULES OF BUSINESS, ETC.

D. A. ADINARAYANA,
Secretary.

[2-6]

ಸುಲಭಕ್ರಯ! ಸುಲಭಕ್ರಮ!!

ಡಾಕ್ಟರ್ ಜೇ. ಸಿ. ಯುವರ

ಸುಗಂಧ ನಶ್ಯದ ಪುಡಿ.



(Registered Trade Mark)

ರೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು ತಂತ ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪುಸಿದ್ಧವಾದ ಈ ನಶ್ಯದಿಂದ ಪುಡಿಯಿಂದ ನಿವಾರಣೆಯಾಗುವ ವ್ಯಾಧಿಗಳು ಯಾವುವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯೆಲ್ಲಾ ನರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೬೬ ವ್ಯಾಧಿಗಳನ್ನೂ ನಿವಾರಿಸಿ ಜ್ಞಾನಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ರಗನಟ್ಟೆ ಕಳುಹಿಸಲಾಗುವುದು.

ಬಿಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦.
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ಚಾರ್ಜು ೦ ಆಣೆ.

ದಯವಾಡಿ ನರಿಯಾಗಿ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ನರಿಯಾಗಿ ತಿಳಿಯುವಂತೆ ಬರೆಯಿರಿ. [222-4]

ವಿಳಾಸ—ಗುರುಜನವ ಅಂಡ್ ಕಂಪನಿ ಲಿಮಿಟೆಡ್,
ಪೋಸ್ಟ್ ಬಾಕ್ಸ್ ೫೧೦, ಪಾರ್ಕ್‌ಟೌನ್, ಮದರಾಸು.

ಕರೆಸ್‌ಪಾಂಡೆನ್ಸ್

ಚಾತ್ಮಿದಾರರು ಪಡುವ ಅಧ್ಯಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ನಕಲರೂ ತಿಳಿಯತಕ್ಕದ್ದು.

ಹೆನರು ವಿಳಾನಗಳಿಲ್ಲದೆ ಬರತಕ್ಕ ಚಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಚಾತ್ಮಿದಾರರು ಎಡಿಟರವರ ತಿಳುವಳಿಕೆಗೋಸ್ಕರ ತಮ್ಮ ನರಿಯಾದ ಹೆನರನ್ನೂ ನಂಪೂರ್ಣ ವಿಳಾಸವನ್ನೂ ಬರೆದು ತಿಳಿನತಕ್ಕದ್ದು. ಮತ್ತು ಚಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡರಾರೆವು. —ಎಡಿ.]

ನಂಜನಗೂಡು-ಚಾಮರಾಜನಗರದ ರೈಲ್ವೆ.

ಅಯ್ಯಾ,—ನಂಜನಗೂಡು—ಚಾಮರಾಜನಗರದ ರೈಲ್ವೆ ಸ್ಪೆಷಲ್ ಶೇಕದಾರರನ್ನು ನಿಯಮಿನಿ ರೈತರ ಕೆಲನಗಳಿಗೆ ಬಹಳ ಸಹಾಯ ಮಾಡಿದ್ದಕ್ಕಾಗಿಯೂ, ಈ ಕೆಲನಕ್ಕೆ ನಿನ್ಪೃಹರೂ, ಶಕ್ತರೂ ಆದವರನ್ನು ಚುನಾಯಿನಿದ್ದಕ್ಕಾಗಿಯೂ ಡೆಪ್ಟಿ ಕಮಿರ್ಷ ನಾಪೇಬರವರನ್ನು ವಂದಿನುತ್ತೇನೆ. ಅವರ ಭರವಸೆಯಂತೆ ಬವಲ ಜಮೀನುಗಳನ್ನೂ, ರೈತರಿಗೆ ಪರಿಹಾರ ದ್ರವ್ಯಗಳನ್ನೂ ಬೇಗಬೇಗನೆ ಕೊಡಿನುವರಾಗಿ ಬೇಡುತ್ತೇನೆ.

ಎ. ಸೂರ್ಯನಾರಾಯಣರಾವ್,
ಚಾಮರಾಜನಗರ.

ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿಯ ಸ್ಕೂಲು.

ಅಯ್ಯಾ,—ಈ ಜಿಲ್ಲೆಯ ಮಿಡ್ಲ್ ಸ್ಕೂಲಿನಿಂದ ರೋ. ಸೆ. ಪರೀಕ್ಷೆಗೆ ಹೋಗಿದ್ದ 20 ಮಂದಿ ವಿದ್ಯಾರ್ಥಿಗಳ ಪೈಕಿ 6 ಮಂದಿ ಮಾತ್ರ ತೇರ್ಗಡೆ ಹೊಂದಿರುವದು ತುಂಬಾ ಶೋಚನೀಯವಾಗಿದೆ. ಹಿಂದಿನ ವರುಷದಲ್ಲು ಶೇಕಡ 50 ಕಿಂತಲೂ ಹೆಚ್ಚಾಗಿ ವ್ಯಾನಾಗಿದ್ದರು. ಇರಪೆಯವರ ಗಮನವು ಇದಕ್ಕೆ ಬರುತ್ತದೆಂದು ನಂಬಿದೆ. ಹೊನವಾಗಿ ಆಗಿರುವ ಮಿಡ್ಲ್ ಸ್ಕೂಲುಗಳ ಸ್ಕೇಲು ಹೆಚ್ಚಿಸಿ, ಬಹಳ ದಿವನಗಳಿಂದಲೂ ಇರತಕ್ಕ ಈ ಸ್ಕೂಲಿನ ಹೆಡ್ ಮಾಸ್ತರ ಸ್ಕೇಲು ಹೆಚ್ಚಿನದೆ ಇರುವದೂ ಇರಾಪೆಯವರ ಗಮನಕ್ಕೆ ಬರುತ್ತದೆಂದು ನರೀಕ್ಷಿನಲ್ಪಟ್ಟಿದೆ. ನತ್ಯವಾದಿ.

ತಿಪಟೂರು ತಾಲ್ಲೂಕು ಬುಳುವನೇರಲು.

ಅಯ್ಯಾ,—ಈ ಪ್ರಾಂತ್ಯ ನರಿಯಾದ ಮಳೆಗಳು ಬರಲಿಲ್ಲ. ಕೋಟಗಳೆಲ್ಲಾ ನುಳಿಬಿದ್ದು ಹೋಗುತ್ತಾ ಇವೆ. ಈ ತಾಲ್ಲೂಕಿನ ಅಮಲ್ದಾರ್ ಮಿ। ರಂಗಯ್ಯನಾಯ್ಡುಯವರು ಇಲ್ಲಿಗೆ ದಯವಾಡಿಸಿದ್ದರು. ಈ ಜಿಲ್ಲೆಗೆ ಇವರ ಹೇಳಿಕೆ ಪ್ರಕಾರ ಮೂರು ಬೆಂಡುಗಳು ತಕ್ಷಣವೇ ಬಂದುಬಿಟ್ಟವು. ಇಲ್ಲಿನ ಮುನ್ಸಿಪಲ್ಟಿಯವರು ಕಟ್ಟಿನುತ್ತಿರುವ ಇಂಗ್ಲೀಷ್ ಸ್ಕೂಲು ಕಟ್ಟಡದ ಮತ್ತು ಮುನಾಫರ ಖಾನೆಗೆ ಚರ್ಚೆಯಲ್ಲಿ ನಿಂತಿದ್ದ ಕಾಮನ ಫಂಡು ಪೊಲೀಸಗನ್ನು ತಕ್ಷಣವೇ ಕೊಡುವುದಾಗಿ ವಾಗ್ದಾನ ಮಾಡಿದ್ದಲ್ಲದೆ ಇನ್ನೂ ಜನೋಪಯುಕ್ತವಾದ ಅನೇಕ ನಲಹೆಗಳನ್ನು ಕೊಟ್ಟರು. ಸ್ಕೂಲು ಒಳ್ಳೆಯ ಸ್ಥಿತಿಯಲ್ಲಿದೆ. ಇಂಗ್ಲೀಷು ಸ್ಕೂಲು ಜಾಗ್ರತೆ ಬರುವುದರಲ್ಲಿದೆ. ಆನ್ಪತ್ರೆ ವಿಚಾರ ಇತ್ಯರ್ಥವಾಗಿಲ್ಲ. ಸೆಕ್ರಿಟರಿ.

ಕೊಪ್ಪಾ ತಾಲ್ಲೂಕು [illegible]

ಅಯ್ಯಾ,—ನೆಂಟ್ರರ್ ರೆಕ್ರೂಟ್‌ಮೆಂಟ್ ಬೋರ್ಡ್ ಸೆಕ್ರಿಟರಿಗಳು ಖಾಲಿ ಬಿದ್ದ ಕೆಲನಗಳನ್ನು ಗೆಜೆಟ್ಟಿನಲ್ಲಿ ಮಾತ್ರವೇ ಪ್ರಚುರಪಡಿಸಿದರೆ ಹಳ್ಳಿಪಳ್ಳಿಗಳಲ್ಲಿರತಕ್ಕ ಅನೇಕರಿಗೆ ತಿಳಿಯದೆಹೋಗುತ್ತದೆಂತಲೂ, ತಮ್ಮ ಪತ್ರಿಕೆಯಲ್ಲಿ ಇನ್ನು ಮುಂದೆ ಪ್ರಕಟಪಡಿಸಲು ಕೇಳಿಕೊಂಡಿರುತ್ತಾರೆಂತಲೂ ನುಮಾರು ಮೂರು, ನಾಲ್ಕು ತಿಂಗಳಲ್ಲಿ ಪ್ರಚುರಪಡಿಸಿ ಆ ರಾಗಾಯಿತು 2-3 ವಾರಗಳು ಖಾಲಿ ಕೆಲನಗಳನ್ನೂ ತಮ್ಮ ಪತ್ರಿಕೆಯಲ್ಲಿ ಪ್ರಕಟಪಡಿಸಿದ್ದು ನರಿಯಿಪ್ಪೆ. ಈಚೆಗೆ ತಮ್ಮ ಪತ್ರಿಕೆಯನ್ನು ಹ್ಯಾಗೆ ಹ್ಯಾಗೆ ಮಾಗಾಚಕಾಕಿದರೂ ಆ ಕಲಮೇ ಸಿಕ್ಕುವುದಿಲ್ಲ. ಈ ವಿಚಾರವು ತಮ್ಮ ಪತ್ರಿಕೆಯಲ್ಲಿ ಪ್ರಕಟವಾಡುತ್ತಾ ಇದ್ದದ್ದು ಅನೇಕ ಪಳ್ಳಿಗಳ ಜನಗಳಿಗೆ ತುಂಬಾ ನಹಾಯವಾಗುತ್ತಾ ಇತ್ತು. ಈಗ ಇದನ್ನು ಏನುಕಾರಣ ನಿಲ್ಲಿನಿರುತ್ತೀರಿ ಎಂಬುದನ್ನು ತಿಳಿನಬೇಕಲ್ಲದೆ ನಾಧ್ಯವಾದರೆ ಇನ್ನು ಮುಂದೆ ಮೇಲ್ಕಂಡ ವಿಷಯವನ್ನು ಪ್ರಕಟನುವ ಏರ್ಪಾಡು ಮಾಡಿದರೆ ನಾನು ತಮಗೆ ಕೃತಜ್ಞನಾಗಿರುತ್ತೇನೆ. ಪಳ್ಳಿಮವ.

[ಸೆಕ್ರಿಟರಿಯವರಿಂದ ಕೆಲವು ವಾರ ಆ ಪಟ್ಟಿ ನಮಗೆ ತಲಪಿ, ಅದರಲ್ಲಿದ್ದ ಖಾಲಿ ಖಾಲಿ ನೌಕರಿಗಳನ್ನು ಎತ್ತಿ ಪ್ರಕಟನುತ್ತಿದ್ದೆವು. ಈಚೆಗೆ ಆ ಪಟ್ಟಿ ಬರುವುದು ನಿಂತುಹೋಯಿತು. ನಾವೂ ಪ್ರಕಟನುವುದನ್ನು ನಿಲ್ಲಿನಿಬಿಟ್ಟೆವು.—ಎಡಿ.]

ಹರಿಹರಪುರದ ಆನ್ಪತ್ರೆ—ಆಕ್ಷೇಪಣೆ.

ಅಯ್ಯಾ,—ನಮ್ಮ ಕೊಪ್ಪಾ ತಾಲ್ಲೂಕು ಹರಿಹರಪುರದ ಹರ್ಬ ಮತ್ತು ಆಜುಬಾಜು ಹಳ್ಳಿಗಳಲ್ಲಿ ಜನಗಳಿಗೆ ಕಾಯಿಲೆ ಅಂದರೆ ಒಂದ ಜ್ವರ 3-4 ದಿನಗಳ ವರೆಗೆ ಬಿಡುವುದಿಲ್ಲ. ಇಲ್ಲಿ ಜನಗಳ ತೊಂದರೆ ಹೇಳತೀರದು. ಇಲ್ಲಿ ಆನ್ಪತ್ರೆ ಡಾಕ್ಟರು ಮಿ। ಡಿ. ಎ. ನುಬ್ಬರಾಯರು 15 ದಿವನ ರಜಾ ತೆಗೆದು ಕೊಂಡು ಬೆಂಗಳೂರಿಗೆ ಹೊರಟುಹೋದ ರಾಗಾಯಿತು ಇಲ್ಲಿ ಜನಗಳ ತೊಂದರೆ ಎಷ್ಟು ಹೇಳಿದರೂ ತೀರದು. ಈಗ ಆನ್ಪತ್ರೆಯಲ್ಲಿ ಜ್ವರಕ್ಕೆ ಔಷಧಿ ಜನಗಳು ಕೇಳಿದರೆ ಜುರಾಬಿಗೆ ಕೊಡುತ್ತಾರೆ. ಜುರಾಬಿಗೆ ಕೇಳಿದರೆ 3-4 ದಿವನ ಜುರಾಬು ಆಗುವವೇ ಇಲ್ಲ.—ಹಾಗಾಧರೆ ಔಷಧಿಗೆ ಆನ್ಪತ್ರೆಗೆ ಜನಗಳು ಬರುವದಕ್ಕೆ ಬಹಳ ಭಯಪಟ್ಟು ನೇಟಿವ್ ಔಷಧಿ ಹಿಂದಿನ ಮಾಮೂಲು ನಂತೆ ಹಳ್ಳಿ ಜನಗಳು ಮಾಡುತ್ತಾರೆ. ಹಿಂದಿನ ನೇಟಿವ್ ಔಷಧಿ ಈಗಿನ ಕಾಯಿಲೆಗೆ ಹಿತವಿಡೆ ಜನಗಳು ನರಳುವದು ಹೇಳತೀರದು. ಈ ವಿಚಾರ ಮನವನ್ನೆ ವಿದ ಪ್ಯೆದ್ಯ ಇರಾಪಾ ನಾಪೇಬರು ಆನ್ಪತ್ರೆ ಬುಕ್ಕು ಆಜಮಾಯಿಷಿಮಾಡಿದರೆ ಜನಗಳು ಆನ್ಪತ್ರೆಗೆ ಬಗುವದೂ ಬಾರದೆ ಇರುವದೂ ಘನ ಚಿತ್ತಕ್ಕೆ ಪೇದ್ಯವಾಗುತ್ತೆ. ಸರ್ಕಾರದವರು ತಾ॥ ಡಿ. ಎ. ನುಬ್ಬರಾಯರನ್ನು ಕಳುಹಿಸಿದಲ್ಲಿ ಬಪಪ್ರಜೆಗಳು ಈ ನಾಂಕ್ರಾಮಿಕ ಜ್ವರದಿಂದ ಬದುಕ್ಕಾರೆಂಬುವ ದಕ್ಕೆ ನಂದೇಹವಿಲ್ಲ. ಕೆ. ವೆಂಕಟ್ರಾಯ.

ಲಂಬಾಣಿ ಪ್ರಜೆಗಳ ಏಳಿಗೆ—ನಂತೋಷದ ನುದ್ದಿ.

ಅಯ್ಯಾ,—ಹೊನ್ನೆ ನವೆದ ಲಂಬಾಣಿ 1 ನೇ ಮಹಾ ನಭೆಯಲ್ಲು ಆದ ಠರಾವ್ಗಳಂತೆ ಈ ಪ್ರಾಂತ್ಯದಲ್ಲಿ ಬಹುಮಟ್ಟಿಗೆ ಎಲ್ಲರೂ ಮುಖ್ಯವಾನ ಬೆಟ್ಟರುತ್ತಾರೆ. ಈಚಿಗೆ ಹಿರಿಯೂರು, ಪಿರಾ, ಹೊನಬುರ್ಗ, ಚಿಕ್ಕನಾಯ್ಕನಹಳ್ಳಿ ತಾಲ್ಲೂಕುಗಳಲ್ಲಿ ಆವ ಲಗ್ನ, ಎಳೆಯಶಾಸ್ತ್ರ, ಕುಲಪಂಚಾಯ್ತಿಗಳಲ್ಲಿ ಮುಖ್ಯ ವಾನವನ್ನು ವರ್ಜಿನಿ ಇತರ ಪತ್ಕರ್ಮಗಳನ್ನು ಮಾಡಿ ನೇವಿನಿರುತ್ತಾರೆ. ಮತ್ತು ತಮ್ಮ ತಮ್ಮ ತಾಂಡ್ಯಗಳಲ್ಲಿ ಮಕ್ಕಳಿಗೆ ನ್ಕೂಲುಗಳನ್ನು ತಿನಲೂ, ಜಮೀನು ಪಡೆಯಲೂ ಪ್ರಯತ್ನಮಾಡುತ್ತಲಿದ್ದಾರೆ.

ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಗಾಣಧಾಳು ಗ್ರಾಮದಲ್ಲಿ ಲಂಬಾಣಿ ನಹೋದರರಾದ ಮಿ। ಗೇಮಾನಾಯ್ಕರೇ ಮೊದಲಾದ ಕುರಾಭಿಮಾನಿಗಳು

ಶಾಲೀವಾಹನಶಕ ವರುಷಂಗಳು 1849 ನೇ ಶ್ರೀಮುಪಕ್ಷಮುನಾಮ ನಂವತ್ಸರೇ ಉತ್ತರಾಯಣೆ ಗ್ರೀಷ್ಮಋತೌ ಜ್ಯೇಷ್ಠ ಬಹುಳ ಅಪಾಪಾಸ್ಯೆ ಶುಕ್ರವಾರದಿಂದ ಆಶಾಢ ಶುದ್ಧ ಪಂಚಮಿ ಗುರುವಾರದ ವರೆಗಿನ ಒಂಬತ್ತು ವಾರದ ಪಂಚಾಂಗ. 1926 ನೇ ಜುಲೈ.

ತಾ.	ವಾರ	ತಿಥಿ	ಳಿಗೆ	ನಕ್ಷತ್ರ	ಳಿಗೆ	ಶೇದಿ ಮಿಥುನ ಮಾನ
9	ಶುಕ್ರ [1]	ಅಮಾವಾಸ್ಯೆ	52-5	ಆರಿದ್ರಾ	34-28	26
10	ಶನಿ	ಪಾಡ್ಯ	54-47	ಪುನರ್ವಸು	38-27	27
11	ಭಾನು [2]	ಬಿದಿಗೆ	58-42	ಪುಷ್ಯ	43-41	28
12	ಸೋಮ [3]	ತದಿಗೆ	60-0	ಆಶ್ಲೇಷ	49-38	29
13	ಮಂಗಳ	ತದಿಗೆ	3-34	ಮಖ	56-7	30
14	ಬುಧ [4]	ಚೌತಿ	8-33	ಪುಬ್ಬ	60-0	31
15	ಗುರು [5]	ಪಂಚಮಿ	13-35	ಪುಬ್ಬ	2-49	32

[1] ಸರ್ವತ್ಯಾಮವಾಸ್ಯೆ, ಮಳೆ ನಕ್ಷತ್ರ—ಪುನರ್ವಸು 2 ನೇ ಪಾದ.
[2] ವಾರ್ಷಿಕಂಪೇಜೋತ್ಸವ, ಚಂದ್ರೋದಯ, ಪೌಷರಂ ವ್ಯಾರಂಭ.
[3] ದೇವಾಂಬುಧೀಶ್ವರ ರಥ, ಮಳೆ ನಕ್ಷತ್ರ—ಪುನರ್ವಸು 3 ನೇ ಪಾದ.
[4] ರಾಜಕುಮಾರರು ದೇತರಾಜೇ ಅರಸಿನವರ ವರ್ಷಂತಿ.
[5] ಪಟ್ಟೀ ತಿಥಿ, ಅಮ್ಮನಲಕ್ಷ್ಮೀ ವ್ರತ.

ವೃತ್ತಾಂತ ಪತ್ರಿಕೆ

REGISTERED, M 20

ಕ್ರಯ ೬ ಕಾಸು — ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವುದು — ಕ್ರಯ ೬ ಕಾಸು

ಸಂಪುಟ ೩೮ — ಮೈಸೂರು—ನೇ ೧೯೨೫ನೇ ಇಸವಿ ಡಿಸೆಂಬರ್ ತಾರೀಖು ೩೧ನೇ ಗುರುವಾರ — ಸಂಚಿಕೆ ೫೩

"ಕನ್ನಡ ಲಾ ಪುಸ್ತಕಗಳು."

ಕನ್ನಡ ಇಂಡಿಯನ್ ಪೀನಲ್ ಕೋಡು ರೂ. 2. ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು ರೂ. 3. ಹಿಂದೂ ಲಾ ರೂ. 2-8-0. ಪಟೇಲರ್ ಮ್ಯಾನುಯಲ್ ರೂ. 1. ಟಪಾಲು ಖರ್ಚು ಬೇರೆ.

[10-25] ಬಿ. ನರಸಿಂಗರಾವ್, ಎಡಿಟರ್, ಲಾ ಗೆಜೆಟ್, ಬೆಂಗಳೂರು ಸಿಟಿ.

ಸುಗಂಧದ್ರವ್ಯಗಳು.

ಅಟೋ ಪುಷ್ಪಗಳು, ಜಾಜಿ, ಗುರಾಜಿ, ಲೈಲ, ಸಂಪಿಗೆ, ಹೈಸಿಂತ್, ಸುರಂಗಿ, ಅಂಬರ್, ವಯೊಲೆಟ್, ನಾರ್ಸಿಕಸ್ ಎಂಬೀ ಪುಷ್ಪಗಳು, ಪುನಗು ಪುಡಿ, ಅಂಬರ್ ಪುಡಿ, ಇತ್ಯಾದಿ ಸುಗಂಧಗಳೆಲ್ಲಾ ನಮ್ಮಲ್ಲಿ ಉಂಟು. ಏರೀದಿ ಪಟ್ಟಿ ತರಿಸಿನೋಡಿ. [135-3]

ವಿಳಾಸ—ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪನಿ, ಬೆಂಗಳೂರು ಸಿಟಿ.

ಪ್ರೊಫೆಸರ್ ಗಜ್ಜಾರ್ "ಅಯೊನಿಕ್" ಔಷಧಗಳು.

ಬುದ್ಧಿ ಕುಶಲತೆಯಿಂದ ಜ್ವರ, ಪ್ಲೇಗ್, ಕಾಲರಾ ಮುಂತಾದ ರೋಗಗಳಿಗೆ ಚಿಕಿತ್ಸೆ ಮಾಡುವ ಔಷಧಗಳು.

ಜ್ವರದ ಬೊಟ್ಟುಗಳು (ಜ್ವರ ಬಂದು) ಅಗ್ಗವೂ ಉತ್ಪತ್ತೋತ್ತಮವೂ ನಣ್ಣ ಬಾಟ್ಲಿ 0-5-0			ದೊಡ್ಡ ಬಾಟ್ಲಿ 1-0-0
ಏಗ್ಯೂ ಕಷಾಯ ಮಲೇರಿಯಾ, ವರಿಪೆ ಜ್ವರಗಳಿಗೆ	..	..	,, 1-0-0
ಇಷ್ಟ್ಲುಯಂಜಾ ತಡೆ ಮತ್ತು ಪರಿಹಾರ (ಪ್ರಖ್ಯಾತವಾದದ್ದು)		..	,, 1-0-0
ಪ್ಲೇಗ್-ಕಾಲರಾ ಕಷಾಯಗಳು (ಶೇ. 80 ರಂತೆ ಗುಣವಾಗಿದೆ)		..	,, 0-10-0
ಕ್ರಿಮಿನಾಶಿನಿ (ಸರ್ವರೋಗಗಳ ತಡೆ)	..	..	,, 0-10-0
ಲವರ್ (ಪಿತ್ರಕೋಶ) ಕಷಾಯ, ಶ್ರೇಷ್ಮಹಾರ ಛೇದಿಕಾರಿ	..	..	,, 1-4-0

ಹಲ್ಲುಪುಡಿ, ತುರಿಕಜ್ಜಿ ಮುಲಾಮು, ಹುಳಕಡ್ಡಿ ದಿವಸ, ಕೆಮ್ಮಿನ ಮಾತ್ರೆಗಳು, ಬಲಕಾರಿ ಮಾತ್ರೆಗಳು ಮುಂತಾದವೂ "ಸ್ಟಾಂಡರ್ಡ್" ಸುವಾಸನಾ ದ್ರವ್ಯಕಗಳೂ ಇವೆ. ಕೇಟಲಾಗ್ ಬಿಟ್ಟಿ ಕಳಿಸುವೆವು. ಮೈಸೂರು ಏಜಂಟರು ಯೂನಿವರ್ಸಲ್ ಯಂಪೋರಿಯಂ, ನಜ್ಯಾಬಾದ್ ರಸ್ತೆ, ಮೈಸೂರು. [143 1] ವಿಳಾಸ—ಎಂ. ಜಿ. ಗಜ್ಜಾರ್, ಎಂ.ಎ., ಎಫ್.ಸಿ.ಎಸ್., ನಂ. 1, ಎ. ಖೇತ್ವಾಡಿ ಮೆಯಿನ್ ರೋಡ್, ಬಾಂಬೆ.

ಈಸಾನೊಫೇಲಿನ್.

ಸೇವಿಸಿ ಮಲೇರಿಯಾ ಜ್ವರವು ಬರದಂತೆ ಮಾಡಿಕೊಳ್ಳಿ.

ಈಗಿನ ಕಾಲಕ್ಕೆ ಜ್ವರವನ್ನು ವಾಸಿಮಾಡುವುದರಲ್ಲೂ ಅದು ಬಾರದಂತೆ ಕಾಪಾಡುವುದರಲ್ಲೂ ಅತ್ಯಂತ ಮುಖ್ಯವಾದ ಔಷಧವೇ ಇದು.

[17-22] ಸೇವಿಸಿ ಸಾಮಾನ್ಯಜ್ವರವು ಬರದಂತೆ ಮಾಡಿಕೊಳ್ಳಿರಿ. ಜ್ವರವು ಬಂದಿದೆ ಎಂದು ಸೇವಿಸಿರಿ.

ಮಕ್ಕಳಿಗೆ ನೀರಿನೋಪಾದಿ ಇರುವ ಈಸಾನೊಫೇಲಿನಾವನ್ನು ಕೊಡಿ.

ಔಷಧ ಪಾಪುಗಳಲ್ಲೆಲ್ಲಾ ಜೋರಿಯುತ್ತದೆ. ನಕ್ಕರ್ ಔಷಧವನ್ನು ಕೊಂಡು ಮೋಸಹೋದೀರಿ!

ವಿಳಾಸ—ಗೋರಿಯೋ ಕಂಪನಿ, ಪೋಸ್ಟ್ ಬಾಕ್ಸ್ 159, ಬೊಂಬಾಯಿ.

ಇಂಡಿಯಾ ಗವರ್ನಮೆಂಟಿಗೆ ಕಂಟ್ರಾಕ್ಟರುಗಳು. — ರಾಯರ್ ಇಂಡಿಯನ್ ಮೆರೀನ್‌ಗೆ ಸಪ್ಲೈಮಾಡುವವರು.

ಗೊಡ್ರೆಜ್ ಅಂಡ್ ಬಾಯ್ಸ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ,

ಕಬ್ಬಿಣ ಪೆಟ್ಟಿಗೆ ಮತ್ತು ಬೀಗಗಳನ್ನು ಮಾಡತಕ್ಕವರು

7 ಭಾರೀ ಸೇಫ್ ಗಳನ್ನು ಮೆಸ್ಸರ್ಸ್ ಈವರ್ಟ್ ರಾಫಾಂ ಅಂಡ್ ಕಂಪನಿಗೆ ಸಪ್ಲೈಮಾಡಿದೆ. ಈ ಕಂಪನಿಯವರು ತಮ್ಮ ಆಫೀಸಿನಲ್ಲಿ ಬೆಂಕಿಬಿದ್ದ ಬಳಿಕ ಇತರ ಸೇಫ್‌ಗಳ ಅನುಭವವನ್ನು ನೋಡಿದ ಮೇಲೆ.

8 ಸೇಫ್ ಗಳನ್ನು ಸರ್ ಸನ್ಲೂಕ್ ಜೆ. ಡೇವಿಡ್ ಬಾರ್ಟ್ ಇವರಿಗೆ ಸಪ್ಲೈಮಾಡಿದೆ. ಈಚೆಗೆ ಜೊಂಬಾಯಿನಲ್ಲಿ ಸಂಭವಿಸಿದ ಬೆಂಕಿ ಅನಾಹುತದಲ್ಲಿ ಇತರ ಪ್ರಖ್ಯಾತಿಗೊಂಡ ಸೇಫುಗಳ ಪಾಡನ್ನು ತಿಳಿದು ಇವರು ತಮ್ಮಲ್ಲಿದ್ದ ಸೇಫುಗಳ ಸ್ಥಾನದಲ್ಲಿ ಇವನ್ನು ಇಟ್ಟುಕೊಂಡಿದಾರೆ.

400 ಸೇಫು ಗಳನ್ನು ಇಂಡಿಯಾ ಮತ್ತು ಬರ್ಮಾಗಳಲ್ಲಿ ಸೇವಿಂಗ್ಸ್ ಬ್ಯಾಂಕುಗಳಿಗೆ ಸಪ್ಲೈಮಾಡಿದೆ. ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖಾ ಡೈರೆಕ್ಟರ್ ಜನರಲ್‌ರವರು ಕಲ್ಕತ್ತೆಯಲ್ಲಿ 1912 ರಲ್ಲಿ ಎಲ್ಲಾ ಕಂಪನಿಗಳ ಸೇಫುಗಳಿಗೂ ಪೂರ್ತಾಪೋಟಿ ಇಟ್ಟು ಪರೀಕ್ಷೆ ಮಾಡಿಸಿರುತ್ತಾರೆ.

900 ಕಳ್ಳರಿಗೆ ಸಗದ ಸೇಫ್ ಗಳನ್ನು ಗವರ್ನಮೆಂಟಿನವರು ತರಿಸಿಕೊಂಡು ಕಳ್ಳರಿಂದ ಒಡೆಯಲ್ಪಟ್ಟ ಇತರ ಸೇಫುಗಳ ಸ್ಥಾನಗಳಲ್ಲಿ ತರಿಸಿಟ್ಟುಕೊಂಡಿದಾರೆ.



ಚಕ್ರವರ್ತಿ ನಾರ್ವೆಭೂಮರವರೂ ಮಹಾರಾಜ್ಞೀರವರೂ ಹಿಂದುಸ್ಥಾನದಲ್ಲಿ ಸಂಚಾರಮಾಡಿದಾಗ್ಗೆ ಗೊಡ್ರೆಜ್ ಸೇಫನ್ನೇ ತಮ್ಮ ಬಳಿ ಇಟ್ಟುಕೊಂಡಿದ್ದರು.

ಎಲ್ಲೆಲ್ಲಿ ಪ್ರದರ್ಶನಮಾಡಲ್ಪಟ್ಟಿಕ್ಕೋ ಅಲ್ಲೆಲ್ಲಾ (ಹಿನ್ನೀತಾಲ್ಕು ಪ್ರದರ್ಶನಗಳಲ್ಲಿ) ಅತ್ಯಂತ ಮೇಲಾದ ಬಹುಮಾನವನ್ನೆ ಪೊರಕಿದೆ. ಇತರ ಕಂಪನಿ ಸೇಫುಗಳಿಗೆ ಕಂಪರ್ಜಿಯ ಬಹುಮಾನ ಕೊಡಲಾಗಿದೆ.

ಗತಿಸಿದ ಲೇಡಿ ಕರ್ಜನ್ ಮತ್ತು ಕೌಂಟೆಸ್ ಆಫ್ ಮಿಂಟೋರವರು ಕೃಪಾಪೋಷಕರಾಗಿದ್ದರು.

ಚಕ್ರವರ್ತಿ ನಾರ್ವಭೌಮರವರ ಕ್ಯಾಂಪ್, ಇಂಡಿಯಾ.

ಲಾಹೋರ್, 5 ನೇ ಫೆಬ್., 1912.

ಆಯ್ಯಾ,—ನಿಮ್ಮ 2 ನೇ ಫೆಬ್ರವರಿ ಕಾಗದ ತಲುಪಿತು. ಚಕ್ರವರ್ತಿನಿ ಮಹಾರಾಜ್ಞೀರವರಿಗೆ ನೀವು ಸಪ್ಲೈಮಾಡಿದ ಸೇಫು ಸರ್ವಶ್ರೇಷ್ಠವಾಗಿದ್ದಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ. ನಿಮ್ಮ ಮಿತ್ರ

(ಸೈನ್) ಆರ್. ಇ. ಗ್ರಿಂಸನ್, ಸಿ.ಐ.ಇ., ಲೆಫ್ಟಿನೆಂಟ್ ಕರ್ನಲ್, ಏಕ್‌ಸ್ಟ್ರಾ ಎಕ್ವೆರಿ ಟು ಎಚ್. ಎಂ. ವಿ ಕಿಂಗ್.

ದಕ್ಷಿಣ ಇಂಡಿಯಾ, ಬರ್ಮಾ, ಸಿಲೋನ್‌ಗಳಿಗೆ ಸೋಲ್ ಏಜಂಟರು:

ದಿ ಇಂಡಿಯನ್ ಕೋಆಪರೇಟಿವ್ ನ್ಯೂಸ್ ಕಂಪನಿ ಲಿಮಿಟೆಡ್,

ಶ್ರೀನಿವಾಸಮಂದಿರಂ ರೋಡ್, ಬೆಂಗಳೂರು ಸಿಟಿ.

[73-19]

The United House Building and Engineering Society (India), Limited.

(Incorporated in Mysore State)

Engineers, Contractors, and House Builders

Preparation of projects for Engineering Works, Execution of Works on Contract, Supervision, etc., undertaken.

A few Investment Shares are available for investment.

For particulars apply to:—

THE MYSORE ENGINEERING SYNDICATE, LTD.,

Sri Krishna Buildings, Avenue Road,

[2-29] *Bangalore City.*

ಹಿಂದುಸ್ಥಾನದ ತಪಿಸುವ ಉಷ್ಣ ಹವಾದಲ್ಲಿ

ನಿತ್ರಿಯನ್ನೂ ಮೆದುಳನ್ನೂ ತಂಪಾಗಿಯೂ ಕೂದಲನ್ನು ಶುಭ್ರವಾಗಿ ನೊಗಸಾಗಿಯೂ ಇಟ್ಟುಕೊಳ್ಳುವುದಕ್ಕೆ ಪ್ರಯೋಗಿಸಿ.

ಕಾಮಿನಿಯೊ ಆಯಿಲ್ (ರೆಜಿ.)

ಪರಮಾವಶ್ಯವಾಗಿ ಉಪಯೋಗಿಸಿಕೊಳ್ಳಬೇಕಾದದ್ದೇ.

ಇದರಲ್ಲಿ ಕೂದಲನ್ನು ಬೆಳಸುವುದಕ್ಕೂ ಅದರ ಉಜ್ಜೀವನಕ್ಕೂ ದಿವ್ಯವಾದ ಗುಣಗಳಿರುತ್ತವೆ. ಹೊಟ್ಟು ಹುರುಕಲನ್ನು ನಿರ್ಮೂಲವಾತಿ ಕೂದಲನ್ನು ಮೃದುವಾಗಿಯೂ ರೇಷ್ಮೆಯಂತೆ ಕೋಮಲವಾಗಿಯೂ ಮಾಡಿಸುನ್ನಾದ ಮೆದುಳಿಗೆ ತಂಪು ಕೊಟ್ಟು ಕೆಲವು ಹೊತ್ತು ಹಿಡಿದ ಕಣ್ಣುಗಳಿಗೆ ಆರೋಗ್ಯವನ್ನೂ ಪ್ರಕಾಶವನ್ನೂ ತರುವುದು. ಉಪಯೋಗಕ್ಕೆ ಕಾಮಿನಿಯಾ ಎಣ್ಣೆ ಬಿಟ್ಟ ರೆಬೇರೊಂದಿಲ್ಲ. ಸ್ತ್ರೀ ಪುರುಷರಿಗೆ ದೊಡ್ಡ ಪ್ರದಾನವಾಗಿದೆ. ಈ ಹೊತ್ತೇ ಪರೀಕ್ಷಿಸಿ ನೋಡಿ.

1 ಬಾಟ್ಲಿಗೆ ರೂ. 1; ವಿ. ಪಿ. ಚಾರ್ಜು ಬೇರೆ 6 ಆಣೆ.
3 ,, ,, 2-10; ವಿ. ಪಿ. ,, ,, 12 ,, .

ಅತ್ಯಂತ ಆಕರ್ಷಣಾ ಪರಿಮಳವು.

ಒಟ್ಟೊ ದಿಲ್ ಬಹಾರ್. (ರೆಜಿ.)

ಸುಗಂಧಗಳ ಸಾರ.

ಪರಿಮಳ ರಾಜರಾಜೇಶ್ವರ. ಹಿಂದುಸ್ಥಾನದ ಪ್ರಾಮುಖ್ಯ ಪ್ರದರ್ಶನಗಳಲ್ಲೆಲ್ಲಾ ಮೆಡಲುಗಳನ್ನೂ ಸರ್ಟಿಫಿಕೇಟುಗಳೂ ಕೊಡಲ್ಪಟ್ಟಿವೆ. ಇದರಲ್ಲಿ ಅರ್ಕೊಹಾರ್, ಸ್ಪಿರಿಟ್ ಮುಂತಾದ ನಿಷಿದ್ಧ ಪದಾರ್ಥಗಳೇನೂ ಇಲ್ಲವಾಗ್ಗಿ ಮುಸಲ್ಮಾನರೂ ಧಾರಾಳವಾಗಿ ಉಪಯೋಗಿಸತಕ್ಕದ್ದು. ಚಾಮೇಲಿ, ಜೂಹಿ, ವೆಗ್ರೊ ಇತ್ಯಾದಿ ಘಮ ಘಮಿಸುವ ಜಾಜೀ ಪುಷ್ಪ ಜಾತಿಗಳ ಮನೋಹರ ಘಮಲರುತ್ತದೆ. ಕೆಲವು ತೊಟ್ಟುಗಳು ಈ ಪರಿಮಳವನ್ನು ಚಮಿಕಿಸಿದ ಒಡನೇ ಅಪರಿಮಿತವಾದ ಘಮಲು ಪ್ರಸರಿಸಿಕೊಳ್ಳುತ್ತದೆ. ಇನ್ಯಾವ ಪರಿಮಳದ ಘಮಲು ಇದರಷ್ಟು ದೀರ್ಘಕಾಲ ನಿಲ್ಲುವುದೇ ಇಲ್ಲ.

ದೊಡ್ಡ ಸೈಜು ½ ಔನ್ಸು ಬಾಟ್ಲಿ ರೂ. 2- 0-0.
ಮಧ್ಯಮ ,, 1 ಡ್ರಾಮ್ ,, ,, 0-12-0.
ನಣ್ಣ ,, ⅓ ,, ,, ,, 0- 8-0.
ಬಾಟ್ಲಿ 1 ಕ್ಕೆ ವಿ. ಪಿ. ಚಾರ್ಜು 5 ಆಣೆ ಪ್ರತ್ಯೇಕ.

ಸೋಲ್ ಏಜಂಟ್ರು:—ಮೇಲೆ ಕಂಡ ಎಲ್ಲಾ ಸುಗಂಧಗಳೂ ಸಿಕ್ಕುವ ಪತ್ರೆ.—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂ.,

[85-15] ೧೫೫೫, ಜುಮ್ಮಾಮಜಿದ್, ಮಾರ್ಕೆಟ್, ಬಾಂಬೆ.

ಕತ್ತರಿಸಿದ, ಜಜ್ಜಿದ ಗಾಯ, ಹುಣ್ಣುಗಳು

ಸಾಂಬಕ್ ಮುಲಾಮು ಅನುಕೂಲವಾದ ಕುಪ್ಪಿಗಳಲ್ಲಿ ರೂ. 1 ಮತ್ತು ರೂ. 2-4 ಕ್ಕೆ ಎಲ್ಲಾ ಔಷಧ ಷಾಪುಗಳಲ್ಲೂ ದೊರಕಿಗೆ ಇಟ್ಟಿದೆ.

ತತ್‌ಕ್ಷಣವೇ ವಿಷಹಾರಿಯಾದ ಸಾಂಬಕ್ ಮುಲಾಮು ಹಚ್ಚದೆ ಹೋದರೆ ಮೇಲ್ಕಂಡಂಥಾ ಗಾಯಗಳು ಊರಿ ವಿಷಪ್ರಾಯವಾಗುತ್ತವೆ. ಸಾಂಬಕ್ ಬೇಗನೆ ನೋವನ್ನು ಹರಿಸುತ್ತೆ. ರೋಗ ಜನಕ ಕ್ರಿಮಿಗಳನ್ನು ಕೊಲ್ಲುತ್ತೆ. ಬೇಗನೆ ಚೊಕ್ಕಟವಾಗಿ ವಾಸಿಮಾಡುತ್ತೆ.

ಸಾಂಬಕ್ಕಿನಲ್ಲಿ ಪ್ರಾಣಿಗಳ ಕೊಬ್ಬಾಗಲಿ ಲೋಹ ಮಿಶ್ರವಾದ ಔಷಧವಾಗಲಿ ಮಿಶ್ರವಿಲ್ಲ. ಅದು ಕತ್ತರಿಸಿದ ಗಾಯ, ಊರಿ ತಾಗಿದ ಹೊಪ್ಪಳೆ, ಕಾದೆಣ್ಣೆ ಬಿಸಿನೀರು ಬಿದ್ದ ಊರಿ, ಇವನ್ನೆಲ್ಲಾ ಬೇಗನೆ ವಾಸಿಮಾಡುವಂಥಾ ಮುಲಾಮು. ಇಷ್ಟೇ ಅಲ್ಲ. ಹುಣ್ಣುಗಳು, ಹೊಪ್ಪಳೆ, ಮಕ್ಕಳ ದೊಡ್ಡವರ ಚರ್ಮರೋಗ, ಕಜ್ಜಿ, ವಿಷಬಲು, ಹುಳಕಡ್ಡಿ, ಮೊಳೆರೋಗ, ಗಡ್ಡೆಗಳು, ವಿಷ ಹೂಡಿದ ಗಾಯಗಳು, ಇವುಗಳನ್ನೆಲ್ಲಾ ಸಾಂಬಕ್ ಬೇಗನೆ ವಾಸಿಮಾಡತಕ್ಕ ದ್ದಾಗಿದೆ.

ಪ್ರಾಣಿಗಳ ಕೊಬ್ಬು ಸ್ವಲ್ಪವೂ ಮಿಶ್ರವಿಲ್ಲದ್ದು

ಸಾಂಬಕ್ Zam-Buk

ಚರಪಸಂಯುಕ್ತ ಅಪ್‌ಷನ್ ಪಾಲಿಸಿಪತ್ರವನ್ನು

1897 ರಲ್ಲಿ ಸ್ಥಾಪಿತವಾದ ಯೆಂಪೈರ್ ಆಫ್ ಇಂಡಿಯಾ ಲೈಫ್ ಅಷೂರೆನ್ಸ್ ಕಂಪನಿ

ಯವರು ಜಾರೀ ಮಾಡಿರುತ್ತಾರೆ.

ಮುದುಕರಾದಾಗಲೂ ಸಂಸಾರಕ್ಕೂ ಇದು ಜೀವನಾಧಾರ; ಇದು ನೂತನವೂ ಅತ್ಯುತ್ತಮವೂ ಆದ ಏರ್ಪಾಡಾಗಿದೆ.

ಬೆಂಗಳೂರು ಶಾಖೆ:— ಕೇಳಿದವರಿಗೆ ಪ್ರಾಸ್ಪೆಕ್ಟಸ್ ಕಳಿಸುತ್ತೆ. ಮದರಾಸ್ ಶಾಖೆ:—

152, ಕಮ್ಮರ್ಷಿಯರ್ ಸ್ಟ್ರೀಟ್. [29-26] 9-10, ಸೆಕಂಡ್ ಲೈನ್ ಬೀಚ್.

ಮುದ್ದಾದ ಮುದ್ರಣ! ಮುದ್ದಾದ ಪುಸ್ತಕ!!

ಶರೀರ ಸುಖ, ಸಂಪತ್ತು, ಐಶರ್ಯಗಳನ್ನು ಸಂಪಾದಿಸಲು ಸಲಹೆಗಳನ್ನೂ, ಮತ್ತು ಮಾನವ ಶರೀರದ ಮರ್ಮ ವಿಷಯಗಳನ್ನೂ ಬೋಧಿಸುವ ಪತ್ರ

ವೆಂಬ ಈ ಕಾಮಶಾಸ್ತ್ರದ ಪುಸ್ತಕವು ಮೊದಲು ಫ್ರೆಂಚ್, ಇಂಗ್ಲೀಷ್, ಸಂಸ್ಕೃತ, ಹಿಂದುಸ್ತಾನಿ ಮುಂತಾದ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಇವನ್ನು ಬಹು ಪ್ರಯಾಸದಿಂದ ಸಂಪಾದಿಸಿ ಎಲ್ಲರಿಗೂ ಎವರವಾಗಿ ತಿಳಿಯುವಂತೆ ಕನ್ನಡಕ್ಕೆ ತರ್ಜುಮೆಮಾಡಿ (84 ಚಿತ್ರಪಠಗಳ ಸಹಿತ) ಧಳಧಳಿಸುವ ಕಾಗದದಲ್ಲಿ ಮುದ್ರಿಸಿದೆ. ಇದರಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮಶಾಸ್ತ್ರಗಳು, ಸ್ತ್ರೀ ಪುರುಷರ ಭೇದಗಳೂ, ಸ್ತ್ರೀ ಧರ್ಮ, ಸ್ತ್ರೀಯರ ಲಕ್ಷಣ, ಶಿಶು ಉತ್ಪತ್ತಿ, ಸ್ತ್ರೀ ಪುರುಷರಿಗುಂಟಾಗುವ ವ್ಯಾಧಿಗಳೂ ಮತ್ತು ಅವನ್ನು ಗುಣಮಾಡಿಕೊಳ್ಳುವ ಚಿಕಿತ್ಸೆಗಳೂ, ಇನ್ನೂ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ವಿಷಯಗಳೂ ಚಿತ್ರಪಠಗಳ ಸಹಿತ ತುಂಬಿ ತುಳುಕುತ್ತಿವೆ. ಇದರಲ್ಲಿರುವ ಚಿತ್ರಪಠಗಳು ನೋಡುತ್ತಾ, ಓದಲಕ್ಕೆ ಕೂತರೆ ಪುಸ್ತಕ ಮುಗಿಸುವ ವರಿಗೆ ಮೇಲಕ್ಕೇಳಲು ಮನಸ್ಸು ಬಾರದು. ಬೇಗನೆ ತರಿಸಿ ಓದಿನೋಡಿರಿ.

ಕ್ರಯ ಪುಸ್ತಕ 1 ಕ್ಕೆ ರೂ. 1-0-0.

ವಿಳಾಸ:—ಟಿ. ರಾಮಚಂದ್ರರಾವ್ ಅಂಡ್ ಕೊ, ಪೋಸ್ಟ್ ಬಾಕ್ಸ್ ನಂ. 232, ಮದರಾಸು.

[139-2]

T. RAMACHANDER RAO AND CO.,
Book Sellers, P. B. No. 232, G. P. O., Madras.

OUR SPECIAL 'CHRISTMAS' SALE

COMMENCES ON 1st NOVEMBER and CLOSES ON 5th JANUARY, 1926.

For 'VRITTANTA PATRIKE' Subscribers only.

Guaranteed for **FIVE YEARS**

22ct. ROLLED GOLD WRIST WATCHES



All Watches Guaranteed for **FIVE YEARS**

22ct. ROLLED GOLD WRIST WATCHES

The Best, the Cheapest and Perfect Wrist Watches.

[238-36] *FREE OFFER:* Every watch is given away with one Fountain pen FREE and a superior Silk Strap FREE. *WRITE NOW -*

PETER WATCH CO., Post Box 27, MADRAS

ಮಲ್ನಾಡು ಜನಗಳ ಸನ್ಮಾನ ಸಭೆ.

ಮಂಜರಬಾದು ತಾಲ್ಲೂಕು ಕೆಂಚಮ್ಮನ ಹೊಸಕೋಟೆ ಹೋಬಳಿ ರಾಮರ್‌ಕೊಪ್ಪ ಆಸ್ಪತ್ರೆಯಿಂದ ಬೆಂಗಳೂರು ಎಕ್ಕೋರಿಯಾ ಆಸ್ಪತ್ರೆಗೆ ವರ್ಗವಟ್ಟ ಮೆ॥ ಖ್ವಾಜಾ ಮಹಮ್ಮದ್ ನಾಹೇಬರು ಈ ಆಸ್ಪತ್ರೆಯಲ್ಲಿ ಡಾಕ್ಟರಾಗಿ 3 ವರ್ಷ 9 ತಿಂಗಳು ಸರ್ವಿಸ್‌ನಲ್ಲಿ ಈ ಮಲ್ನಾಡು ಪ್ರದೇಶದ ಜನಗಳಿಗೆ ಹೆಂಪಾ ಉಪಕಾರಿಗಳಾಗಿದ್ದು ಮಾಡಿದ ಸಹಾಯವನ್ನು ಸೂಚಿಸುವ ಒಂದು ಸಭೆಯು ತಾ. 16 ನೇ ಬುಧವಾರ ಮಧ್ಯಾಹ್ನ ನೇರಗಳಲೆ ಪ॥ ಜವರಪ್ಪಗೌಡರು ರಾಮರ್‌ಕೊಪ್ಪಲ್ಲಿ ಕಟ್ಟರುವ ಸ್ವಗೃಹದ ಮುಂಭಾಗದಲ್ಲಿ ಹಾಕಲ್ಪಟ್ಟಿದ್ದ ದಿವ್ಯವಾದ ತಳಿರು ತೋರಣಗಳಿಂದಲಂಕೃತವಾದ ವಿಶಾಲವಾದ ಮಂಟಪದಲ್ಲಿ ಹಾಸನ ಡಿಸ್ಟ್ರಿಕ್ಟ ಡೆಪ್ಯೂಟಿ ಕಮಿಷನರ್ ಮೆ॥ ಆರ್. ನಾನಾಸ್ವಾಮಿರಾಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಗೆ ಅನೇಕ ಜನ ಡಾಕ್ಟರುಗಳು, ಸರ್ಕಾರಿ ದೊಡ್ಡ ಆಫೀಸರುಗಳು, ಸಾಹುಕಾರರು, ವರ್ತಕರು, ಪ್ರೇಕ್ಷಕರು, ಸಂಗೀತಗಾರರು, ಬ್ಯಾಂಡ್ ಮತ್ತು ಮಲ್ನಾಡು ವಾದ್ಯಪರರು ಆದಿಯಾಗಿ ಸುಮಾರು 300-350 ಜನಗಳ ವರೆಗೆ ಸೇರಿದ್ದರು. ಛತ್ರಿ, ನೋಪಾನ ಮೊದರಾದ ಮರ್ಯಾದೆಗಳು ಸಹಾ ಇದ್ದುವು. ಸಭೆಯಲ್ಲಿ ಅನೇಕ ಹಿಂಮನ್ಸಾನಿ, ಇಂಗ್ಲೀಷ್ ಮತ್ತು ಕನ್ನಡ ಅಡ್ರೆಸ್ಸುಗಳು ಓದಲ್ಪಟ್ಟವು. ಸಭಾಧ್ಯಕ್ಷರ ಭಾಷಣವು ಪೂರ್ತಿಯಾದನಂತರ ಸಭಾಧ್ಯಕ್ಷರ ಹಸ್ತದಿಂದ ಖ್ವಾಜಾ ಮಹಮ್ಮದ್ ಸಾಹೇಬರಿಗೆ ಜಾನಾಹಾರವು ಹಾಕಲ್ಪಟ್ಟಿತಲ್ಲದೆ ಮಲ್ನಾಡು ಜನಗಳಿಂದ ತಯಾರ್ಮಾಡಿಸಲ್ಪಟ್ಟಿದ್ದ ಒಂದು ಅಮೋಘವಾದ ಭಂಗಾರದ ಮೆಡಲನ್ನೂ, ಒಂದು ಬೆಳ್ಳಿಯ ಕಪ್ಪು ನಾನರನ್ನೂ ಮತ್ತು ಒಂದು ಬೆಳ್ಳಿಯ ದೊಡ್ಡ ತಟ್ಟೆಯನ್ನೂ ಸಭಾಧ್ಯಕ್ಷರ ಹಸ್ತ ಮೆ॥ ಖ್ವಾಜಾ ಮಹಮ್ಮದ್ ಸಾಹೇಬರಿಗೆ ಕೊಡಿಸಲಾಯಿತು. ನಂತರ ಮೆ॥ ಖ್ವಾಜಾ ಮಹಮ್ಮದ್ ಸಾಹೇಬರು ತಮ್ಮ ವಂದನೆಗಳನ್ನು ಸಭಿಕರಿಗೂ ಸಭಾಧ್ಯಕ್ಷರಿಗೂ ಅರ್ಪಿಸಿದರು. ಆ ಮೇರೆ ಸಂಗೀತವು ಪ್ರಾರಂಭವಾಯಿತು. ವಾದ್ಯಗಳು ಘೋರ್ಗರೆದವು. ಸಭಾಧ್ಯಕ್ಷರಿಗೂ ಎಲ್ಲಾ ಆಫೀಸರುಗಳಿಗೂ ಪ್ರೇಕ್ಷಕರಿಗೂ ಹಾರಾ ತುರಾಯಿಗಳು ಹಂಚಲ್ಪಟ್ಟವು. ಶ್ರೀಮನ್ಮಹಾರಾಜರವರ ಶ್ರೇಯಸ್ಸನ್ನು ಸರ್ವರೂ ಏಕಕಾಲದಲ್ಲಿ ಬಯಸಿದನಂತರ ಎಲ್ಲರನ್ನೂ ಕೂಡಿಸಿ ಫೋಟೋ ತೆಗೆಯಲಾಯಿತು. ಆ ಮೇಲೆ ಅವರವರ ಮತಪದ್ಧತಿ ಪ್ರಕಾರ ಏರ್ಪಟ್ಟಿದ್ದಂತೆ ತಿಂಡಿ ಮತ್ತು ಫಲಹಾರಗಳೂ ವಾರ್ ನುಪಾರಿ ಸಹ ಹಂಚಲ್ಪಟ್ಟವು. ನಂತರ ಸಭೆಯು ಮುಕ್ತಾಯವಾಯಿತು. ಸಾಯಂಕಾಲ 7 ಘಂಟೆಯಿಂದ ರಾತ್ರಿ 10 ಘಂಟೆ ತನಕ ಬೆಂಗಳೂರಿನಿಂದ ದಯಮಾಡಿಸಿದ್ದ ರಾಮದಾಸರಿಂದ ಧ್ರುವ ಚರಿತ್ರೆ ಎಂಬ ಕಥೆಯು ನಡೆಯಿತು. ಸರ್ವರೂ ಆನಂದ ಭರಿತರಾಗಿ ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಈ ಕೆಲಸಗಳೆಲ್ಲಾ ನಡೆಯಲು ತುಂಬಾ ಮುತುವರ್ಜಿಯನ್ನು ದಹಿಸಿದ್ದ ನೇರಗಳಲೆ ಪ॥ ಜವರಪ್ಪಗೌಡರ ಅಭಿಮಾನವು ತುಂಬಾ ಶ್ಲಾಘನೀಯವಾದದ್ದು

ಕೆ. ಎಸ್. ಎ. ಅಲಿ.

ಪ್ರಪಂಚದ ಎಲ್ಲಾ ಕಡೆಗಳಲ್ಲೂ ಹಾಕಿರುವ ರೈಲು ಮಾರ್ಗಗಳು.

ಮೊದಲು ರೈಲು ಮಾರ್ಗವು ಇಂಗ್ಲೆಂಡಿನಲ್ಲಿರುವ ಸ್ವಾಕ್ ಪೋರ್ಟ್‌ಗೂ ಡಾರ್ಲಿಂಗ್‌ಟನ್‌ಗೂ ಮಧ್ಯೆ ಹಾಕಲ್ಪಟ್ಟು ಈಗ್ಗೆ ಸುಮಾರು ಒಂದುನೂರು ವರುಷಗಳಾದುವು. ಇದು ಪ್ರಯಾಣಿಕರು ಸಂಚಾರವ್ಯವಹಾರಮಾಡುವುದಕ್ಕೆ ಹಾಕಿದ ಮೊದಲ ರೈಲು ಮಾರ್ಗವೆಂದು ತಿಳಿದುಬರುತ್ತದೆ. ಆಗ್ಗೆ ಪ್ರಪಂಚದಲ್ಲೆಲ್ಲಾ ಹೊಸೆಯಲ್ಪಟ್ಟಿರುವ ರೈಲು ಮಾರ್ಗಗಳ ಫಾನರೆಗಳನ್ನು ಒಟ್ಟುಗೂಡಿಸಿದರೆ ಸುಮಾರು 7,40,000 ಮೈಲು ಫಾನರೆ ಇರುವುದೆಂದು ತಿಳಿದುಬರುವುದು. ಇದರ ಸಹಾಯವಿಲ್ಲದಿದ್ದರೆ ಈಗಿನ ಪ್ರಯಾಣಿಕರಿಗೆ ಎಷ್ಟರಮಟ್ಟಿಗೆ ಅನನುಕೂಲಗಳುಂಟಾಗುತ್ತೆಂದು ಗೊತ್ತಾಗುತ್ತಷ್ಟೆ.

ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಹಾಕಿರುವ ರೈಲು ಮಾರ್ಗಗಳ ಫಾನರೆಗಳನ್ನು ಒಟ್ಟುಗೂಡಿಸಿದರೆ ಎಷ್ಟು ಆಗುವುದೋ ಅದರಲ್ಲಿ ಅರ್ಧದಷ್ಟು ಅಂದರೆ 3,70,000 ಮೈಲುಗಳು ಅಮೇರಿಕ ದೇಶ ಒಂದರಲ್ಲಿಯೇ ಇವೆ. ಯೂರೋಪ್ ದೇಶದಲ್ಲಿ ಮೂರನೆಯ ಒಂದು ಭಾಗವೆಂದರೆ 2,30,000 ಮೈಲುಗಳಿವೆ. ಏಷ್ಯ ಖಂಡದಲ್ಲಿ ಹತ್ತನೆಯ ಒಂದು ಭಾಗವೆಂದರೆ 78,000 ಮೈಲುಗಳಿವೆ. ಸರಾಸರಿ 2,000 ಜನರಿಗೆ ಒಂದೊಂದು ಮೈಲು ರೈಲು ಮಾರ್ಗಗಳುಂಟು. ಆಸ್ಟ್ರೇದಲ್ಲಿ 11,500 ಜನರಿಗೆ ಒಂದೊಂದು ಮೈಲು ಮಾರ್ಗವಿದೆ.

ನಾವು ಪ್ರಪಂಚದಲ್ಲಿ ಹಾಕಿರುವ ರೈಲು ಮಾರ್ಗಗಳನ್ನು ಕುರಿತು ಯೋಚಿಸುವುದಾದರೆ ಇದರ ಮೂರನೆಯ ಎರಡು ಭಾಗವು ಖಾನಗಿ ಕಂಪನಿಗಳಿಂದ ನಡೆಯುತ್ತಿವೆ. ಇದಕ್ಕೆ ಉದಾಹರಣೆಯಾಗಿ ಅಮೇರಿಕ ದೇಶದ ಸಂಯುಕ್ತ ಸಂಸ್ಥಾನಗಳಲ್ಲಿ ಹಾಕಿರುವ ರೈಲು ಮಾರ್ಗಗಳು ಸರ್ಕಾರದ ಖರ್ಚಿನಿಂದ ಹಾಕಲ್ಪಟ್ಟಿಲ್ಲ. ಅವುಗಳೆಲ್ಲಾ ಸಾಹುಕಾರಿ ಕಂಪೆನಿಗಳಿಂದಲೇ ನಡಿಸಲ್ಪಡುತ್ತಿರುವುವು. ಇದೇ ರೀತಿಯಾಗಿ ಗ್ರೇಟ್ ಬ್ರಿಟನ್‌ನಲ್ಲಿಯೂ ನಡೆಯುತ್ತಿರುವುದು. ಈ ಪ್ರಪಂಚದ ಎಲ್ಲಾ ಕಡೆಗಳಲ್ಲಿ ಹಾಕಿರುವ ರೈಲು ಮಾರ್ಗಗಳಲ್ಲೆಲ್ಲಾ ಅಮೇರಿಕ ಮತ್ತು ಗ್ರೇಟ್ ಬ್ರಿಟನ್‌ಗಳಲ್ಲಿರುವ ರೈಲು ಮಾರ್ಗಗಳೇ ಅತ್ಯಂತ ಶ್ರೇಷ್ಠಮಾರ್ಗಗಳೆಂದೆನಿಸಿಕೊಂಡಿರುವವು. ಫ್ರಾನ್ಸ್ ದೇಶದಲ್ಲಿರುವ ಕೆಲವು ರೈಲು ಮಾರ್ಗಗಳಲ್ಲಿ ಕೆಲವು ಸಾಹುಕಾರಿ ಕಂಪೆನಿಗಳಿಂದಲೂ ಮತ್ತೆ ಕೆಲವು ಸರ್ಕಾರದಿಂದಲೂ ನಡಿಸಲ್ಪಡುತ್ತಿರುವುವು. ಸಾಹುಕಾರಿ ಕಂಪೆನಿಗಳಿಗೆ ಇದರಿಂದ ಲಾಭ ಬರುತ್ತಿರುವುದು. ಸರ್ಕಾರದಲ್ಲೇ ನಡೆಯುತ್ತಿರುವ ಕಾರ್ಯಗಳಿಂದ ಸರ್ಕಾರಕ್ಕೆ ನಷ್ಟವಾಗಿರುವುದು. ಇದರಂತೆಯೇ ಕೆನಡಾ ರಾಜ್ಯದಲ್ಲಿಯೂ ಇದೆ.

ಈಗ್ಗೆ ಪ್ರಪಂಚದ ಎಲ್ಲಾ ಭಾಗಗಳಲ್ಲಿರುವ ರೈಲು ಮಾರ್ಗಗಳು ಎಷ್ಟು ಕಷ್ಟದ ದೆಸೆಗಳಲ್ಲಿರುವುವೆಂದು ತಿಳಿದುಬರುವುದಿಲ್ಲವೆ? ರೈಲು ಮಾರ್ಗಗಳನ್ನು ಹಾಕಿ ಸಿದ್ಧಪಡಿಸುವುದಕ್ಕೆ ತಗಲುವ ಖರ್ಚು ಅಪಾರವಾಗುವುದು. ಇಂಗ್ಲೆಂಡಿನಲ್ಲಿ ಕೆಲಸಗಾರರಿಗೆ ಈಗ ಕೊಡಬೇಕಾಗಿರುವ ಕೂಲಿಯಾದರೋ ಯುದ್ಧಕ್ಕೆ ಪೂರ್ವ ಕೊಡುತ್ತಿದ್ದ ಕೂಲಿಗಿಂತ ಮೂರರಷ್ಟು ಹೆಚ್ಚು ಕೂಲಿ ಕೊಡಬೇಕಾಗಿ ಬಂದಿದೆ. ರೈಲು ಧಾರ್ಜುಗಳನ್ನು ಹೊದಲು ಹೆಚ್ಚುಮಾಡುವುದೂ ಅನಂತರ ಹುಟ್ಟುವಳಿಯ ಹಣವನ್ನು ಅತ್ಯಂತ ಮಿತವ್ಯಯಮಾಡುವುದೂ ಇವುಗಳ ವಿಷಯದಲ್ಲಿ ವಿಶೇಷ ಗಮನಕೊಡಬೇಕೆಂದು ತುಂಬ ತಿಳಿವಳಿಕೆಯುಳ್ಳವರು ಅಭಿಪ್ರಾಯಪಡುವರು.

ಬೊಂಬಾಯಿನಗರದಲ್ಲಿ ಪ್ರಾಥಮಿಕ ವಿದ್ಯಾಭ್ಯಾನವನ್ನು ಮಾಡಿಸುವುದಕ್ಕೆ ಅಲ್ಲಿನ ಮ್ಯುನಿಸಿಪಾಲಿಟಿಗೆ ಬೊಂಬಾಯಿ ಸರ್ಕಾರದವರು 1917-18 ರಲ್ಲಿ ಅಗಿವ್ಯ ಒಪ್ಪಂದದಂತೆ ಸಹಾಯ ದ್ರವ್ಯವನ್ನು ಕೊಡದೆ ತಪ್ಪಿದ್ದಕ್ಕಾಗಿ, ಪ್ರಾಥಮಿಕ ವಿದ್ಯಾಭ್ಯಾನವನ್ನು ತ್ಯಪ್ತಿಕರವಾಗಿ ಮುಂದುವರಿಸಲು ಅನಾನುಕೂಲವಾಯಿತೆಂದೂ, ಈ ತೊಂದರೆಗೆ ಈಗಿರುವ ವಿದ್ಯಾಭ್ಯಾನದ ಮಂತ್ರಿಯು ಕಾರಣಭೂತರೆಂದೂ, ಹೀಗೆ ಅನಾದರಣೆ ಮಾಡಿ ಸಹಾಯ ದ್ರವ್ಯವನ್ನು ಇನ್ನೂ ಕೊಡದೆ ಇರುವುದಕ್ಕಾಗಿ ಬೊಂಬಾಯಿ ಸರ್ಕಾರದ ಮೇಲೆ ದಾವಾ ಹೂಡಬೇಕೆಂದೂ ಬೊಂಬಾಯಿ ಮ್ಯುನಿಸಿಪಾಲಿಟಿಯವರು ತೀರ್ಮಾನಿಸಿಕೊಂಡಿರುವರು.

ಮೈಸೂರು ಸರ್ಕಾರಿ ನೌಕರಿಗಳು.

ಖಾಲಿ ಇರುವ ಖಾಯಂ ನೌಕರಿಗಳು.

ನಂ. 649 ತಿಪಟೂರು ಗವರ್ನಮೆಂಟ್ ಮಿಡ್ಲ್‌ಸ್ಕೂರ್ ಅ॥ ಮಾಸ್ಟರು (ಬಿ. ಎ. ಆಗಿರಬೇಕು) ತಲಬು ರೂ. 50; ನಂ. 650 ಡ್ರಾಫ್ಟ್‌ಸ್‌ಮೆನ್, ಎಂ. ಪಿ. ಎರ್. (ಅಪ್ಪರ್ ಸಬಾರ್ಡಿನೇಟ್ ಪರೀಕ್ಷೆ ಆಗಿರಬೇಕು) ತಲಬು ರೂ. 50-5-75; ನಂ. 651 ಗಾರ್ಡನ್ ಓವರ್‌ಸಿಯರ್ ರೂ. 40; ನಂ. 652 ಸ್ಟೆನೊ ಟೈಪಿಸ್ಟ್ ತಲಬು ರೂ. 35 ರಿಂದ ರೂ. 45; ನಂ. 658 ಅರಸಿಕೆರೆ ಎಕ್ಸೈಸ್ ರೇಂಜ್ ಆಫೀಸ್ ಗುಮಾಸ್ತೆ ತಲಬು ರೂ. 20; ನಂ. 661 ಕಂಪೌಂಡರ್ ತಲಬು ರೂ. 15.

ಮೇಲ್ಕಂಡ ಸರ್ಟಿಫಿಕೇಟುಗಳನ್ನು ಪಡೆದಿರುವವರು ಆಯಾ ನಂಬರು ನೌಕರಿ ಕಾಣಿಸಿ ಜನವರಿ ತಾ. 6 ರೊಳಗಾಗಿ ತಲಪುವಂತೆ–"ಸೆಕ್ರಟರಿ, ಸೆಂಟ್ರಲ್ ರೆಕ್ರೂಟ್‌ಮೆಂಟ್ ಬೋರ್ಡ್, ಬೆಂಗಳೂರು" ಎಂಬೀ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.

ರೇಷೆ ಕೈಗಾರಿಕೆ ಕಾರ್ಯಧರ್ಶಿನಿ.

ಚನ್ನಪಟ್ಟಣದಲ್ಲಿ ನಡೆದ 2 ನೇ ಕೂಟವು.

ನೂರಾರು ಜನರು ಒಂದೆಡೆಯಲ್ಲಿ ಸೇರಿ ತಮ್ಮ ಅನಕ್ಷಿ, ಅನಕ್ಷರತೆಗಳನ್ನು ಸೂಚಿಸುವುದರಿಂದ ಬಡವರು ಭಾಗ್ಯವಂತರೂ, ಚಿಕ್ಕವರು ದೊಡ್ಡವರೂ, ಪ್ರಜೆಗಳು ಸರ್ಕಾರೀ ಉದ್ಯೋಗಸ್ಥರೂ ಇಂತಹ ಸಭೆಗಳಲ್ಲಿ ಏಕವಾಗಿ ಬಳಸಿದರೆ ಅಜ್ಞಾನಾಂಧಕಾರದಲ್ಲಿಯೇ ನರಳುತ್ತಿರುವ ನಮ್ಮ ಪ್ರಜಾವರ್ಗದ ಬಹುಮಂದಿಯ ಮೌಢ್ಯಾಚಾರವು ನಶಿಸಿ, ತಿಳುವಳಿಕೆಯು ಹೆಚ್ಚಿ, ನಮ್ಮ ದೇಶದ ವ್ಯವಸಾಯ, ಕೈಗಾರಿಕೆ, ಕುಶಲವಿದ್ಯೆಗಳು ವೃದ್ಧಿಯಾಗುವುದೆಂದೂ, ತನ್ಮೂಲಕ ದೇಶದ ಸಾಂಪತ್ತಿಕ ಪರಿಸ್ಥಿತಿಯೂ ಉತ್ತಮಗೊಳ್ಳುವುದೆಂದೂ ಮಹನೀಯರು ಅಭಿಪ್ರಾಯಪಡುವರು.

ಯಾವುದೊಂದು ಕಸಬು ವೃದ್ಧಿಯಾಗಬೇಕಾದರೂ ಇಂತಹ ಸಮ್ಮೇಳನಗಳು ಅತ್ಯಾವಶ್ಯಕವಾಗಿವೆ. ಅದರಲ್ಲಿಯೂ ನಿದ್ರಾವಸ್ಥೆಯಲ್ಲಿಯೇ ಕಲವರಿ ಸುತ್ತಿರುವ ನಮ್ಮ ರೈತರಿಗೆ ಈ ಸಭೆಗಳು ಅತ್ಯಂತ ಪ್ರಯೋಜನಕಾರಿಗಳಾಗಿವೆ. ಅವರಲ್ಲಿ ಅನಕ್ಕಿಯನ್ನು ಹುಟ್ಟಿಸಿ ಕಾರ್ಯತತ್ಪರರಾಗುವಂತೆ ಮಾಡುತ್ತವೆ. ಕಾರ್ಯತತ್ಪರರಾದವರು ಹಿಮ್ಮೆಟ್ಟಲು ಅವಕಾಶಕೊಡದೆ ಮುಂದುವರಿಯಬೇಕೆಂಬ ಲವಲವಿಕೆಯನ್ನು ಹುಟ್ಟಿಸುತ್ತವೆ. ಹೀಗಿರುವಲ್ಲಿ ಇಂತಹ ಮಹದುಪಕಾರಿಯಾದ ಸಮ್ಮೇಳನಗಳನ್ನು ನಡೆಯಿಸಿ ನಮ್ಮ ದೇಶದ ಒಂದು ಪ್ರಾಮುಖ್ಯ ಕಸಬಾದ ರೇಷ್ಮೆ ವ್ಯವಸಾಯವನ್ನು ಉತ್ತಮಗೊಳಿಸಬೇಕೆಂಬ ಭಾವವು ಹಿಂದೆ ಅಲ್ಲಿ ಅವರಾರ್ಡಾರರಾಗಿದ್ದ ಮಾ॥ ರಾಮಚಂದ್ರರಾಯರ ಮನಸ್ಸಿನಲ್ಲಿಯೂ, ಸರ್ಕಾರೀ ರೇಷ್ಮೆ ಫಾರಂ ಭಾರ್ಜಿನಲ್ಲಿರುವ ಮಾ॥ ಎಚ್. ಎಸ್. ಗೋವಿಂದರಾಯರ ಮನಸ್ಸಿನಲ್ಲಿಯೂ ಅಂಕುರವಾಯಿತು. ಈ ಅಭಿಪ್ರಾಯವನ್ನು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಮೆ॥ ಅಬ್ದುರ್ರಹಮಾರವರಿಗೆ ಸೂಚಿಸಲು ಅವರು ಅತ್ಯಾನಕ್ತಿಯಿಂದ ತಮ್ಮ ಪೂರ್ಣ ಸಹಾಯವನ್ನಿತ್ತರು. ಚನ್ನಪಟ್ಟಣದ ತಾಲ್ಲೂಕ್ ಬೋರ್ಡು ವೈಸ್ ಪ್ರೆಸಿಡೆಂಟರಾದ ನಾ॥ ಅಬ್ದುರ್ ಖುದ್ದುಸ್‌ರವರು ಈ ಕಾರ್ಯಕ್ಕೆ ನೆರವಾದರು. ಅನೇಕ ದೊಡ್ಡಮನುಷ್ಯರು ತಮ್ಮ ಕ್ಯೆರಾದ ಸಹಾಯವನ್ನೆಲ್ಲಾ ಮಾಡುವುದಾಗಿ ವಾಗ್ದಾನಮಾಡಿದರು. ಇರಾಖಾ ಮೊಖ್ತೇಸರರಾದ ಮಾ॥ ನವರತ್ನ ರಾಮರಾಯರು ತಮಗುಂಟಾದ ಪರಮಾನಂದವನ್ನು ಸೂಚಿಸಿ ಮುಂದಾಗಿ ಬಂದು ಎಲ್ಲಾ ಕಾರ್ಯಧರ್ಶಿಗಳನ್ನೂ ನಜ್ಜುಗೊಳಿಸಿದರು. ಸ್ವಾಗತಮ್ಮಂಡಲಿಯ ಅಧ್ಯಕ್ಷರಾಗಿ ಮಾ॥ ಅಬ್ದುರ್ರಹಮಾನ್‌ರವರೇ ಕ್ಷಾಗತಮಂಡಲಿಯ ಅಧ್ಯಕ್ಷರಾಗಿ ನಿಂತರು. ಸಮ್ಮೇಳನಕ್ಕೆ 352 ಜನ ಪ್ರತಿನಿಧಿಗಳು ದಯಮಾಡಿಸಿದ್ದರು. ಮೈಸೂರು ಡಿಸ್ಟ್ರಿಕ್ಟಿನವರು 24 ಮಂದಿ; ಹಾಸನ ಡಿ॥ ನಿಂದ ಒಬ್ಬರು; ತುಮಕೂರು ಡಿ॥ ನಿಂದ ಇಬ್ಬರು ಬಂದಿದ್ದರು; ಕೋಲಾರ ಡಿ॥ ನಿಂದ 8 ಮಂದಿ; ಉಳಿದವರು ಬೆಂಗಳೂರು ಡಿಸ್ಟ್ರಿಕ್ಟ್‌ನಿಂದ ಬಂದಿದ್ದರು. ಹೈದರಾಬಾದಿನಿಂದ ಒಬ್ಬ ದೊಡ್ಡಮನುಷ್ಯರೂ ಮದ್ರಾನು ದೇಶಕ್ಕೆ ಸೇರಿದ ಕುಪ್ಪಂನಿಂದ ಒಬ್ಬ ದೊಡ್ಡಮನುಷ್ಯರೂ ದಯಮಾಡಿಸಿ ಈ ಕೂಟದಲ್ಲಿ ಭಾಗಿಗಳಾಗಿದ್ದರು. ಇವರಲ್ಲದೆ ಸುಮಾರು 300 ಮಂದಿಯ ಪರೆಗೂ ನೋಟಕರು ದಯಮಾಡಿಸಿದ್ದರು. ಇವರಲ್ಲಿ ಬಹುಮಂದಿ ಸ್ವತಃ ರೇಷ್ಮೆ ವ್ಯವಸಾಯಗಾರರು. ಉಳಿದವರಲ್ಲಿ ಅನೇಕರು ರೇಷ್ಮೆ ವ್ಯವಸಾಯದಲ್ಲಿ ಅನುಭವವನ್ನೂ ಪಾಂಡಿತ್ಯವನ್ನೂ ಸಂಪಾದಿಸಿದವರಾಗಿದ್ದರು. ಈ ಸಮ್ಮೇಳನದ ನಂದರ್ಭದಲ್ಲಿ ರೇಷ್ಮೆ ನೂಲು ಬಿಚ್ಚುವುದು, ಹುಳು ಸಾಕುವುದು, ಬಿತ್ತನೆಯನ್ನು ತಯಾರುಮಾಡುವುದು, ಉಪ್ಪುನೇರಳೆಯ ತೋಟ, ಇವೆಲ್ಲಾ ಪ್ರದರ್ಶನಲ್ಲಿಟ್ಟಿದ್ದವು. ಇವುಗಳ ವಿಷಯವಾಗಿ ನೋಟಕರಿಗೆ ಸಕಲ ವಿಷಯಗಳನ್ನೂ ವಿವರಿಸುವುದಕ್ಕಾಗಿ ಸಿಬ್ಬಂದಿಯನ್ನು ನೇಮಿಸಲಾಗಿತ್ತು. ನಕಲರೂ ವಿಮರ್ಶಾಪೂರ್ವಕವಾಗಿ ಈ ಪ್ರದರ್ಶನಗಳನ್ನು ಪರಾಂಬರಿಸಿ ಅನಂದಪಟ್ಟರು.

ಸ್ಪರ್ಧೆಗಳು.–ರೇಷ್ಮೆನೂಲು ಬಿಚ್ಚುವುದರಲ್ಲಿಯೂ, ಹುಳ ಕಾಣಿಸಿಕೊಳ್ಳುವುದರಲ್ಲಿಯೂ ಸ್ಪರ್ಧೆಗಳು ನಡೆದವು. ರೇಷ್ಮೆ ಬಿಚ್ಚಾಣಿಕೆ ಸ್ಪರ್ಧೆಗೆ 13 ಮಂದಿ ಉಮೇದುವಾರರಿದ್ದರು. ಇದರಲ್ಲಿ ಬಹುಮಾನವು ಕ್ಲೋಸ್‌ಪೇಟೆಯ ಅಬ್ದುರ್ ನತಾರ್ ಸಾಬರಿಗೂ, ಕ್ಲೋಸ್‌ಪೇಟೆಯ ಅಬ್ದುಲ್ ರಹಿಮಾನ್ ಸಾಹೇಬರಿಗೂ, ಕ್ಲೋಸ್‌ಪೇಟೆಯ ಗೌಸ್‌ಬೇಗ್ ಸಾಬರಿಗೂ, ಕ್ಲೋಸ್‌ಪೇಟೆಯ ಇಬ್ರಾಹೀಂ ಸಾಬರಿಗೂ ದೊರೆತವು. ರೇಷ್ಮೆ ಇಲಾಖೆಯವರು ತಯಾರಿಸಿದ ಮನೆಯಲ್ಲಿ ಉಪಯೋಗಿಸಬಹುದಾದ ಯಂತ್ರದಲ್ಲಿ ನೂಲು ಬಿಚ್ಚುವ ಸ್ಪರ್ಧೆಯಲ್ಲಿ ಮೈಸೂರು ಮುಕುಂದರಾಯರಿಗೆ ಸಿರಿಕಲ್ಚರ್ ಸೂಪರ್‌ಟೆಂಡೆಂಟ್ ಮಿ॥ ಎಚ್. ರಾಮರಾಯರವರ ಭಂಗಾರದ ಪದಕವು ದೊರೆಯಿತು. ಸಾಕಾಣಿಕೆ ಮೈಪೋಟಿಗೆ 19 ಮಂದಿ ಉಮೇದುವಾರರಿದ್ದರು. ಇದರಲ್ಲಿ ಕೋದಾವಪಲ್ಲಿ ರಾಮೇಗೌಡರಿಗೂ, ಮಳೂರು ಸಿದ್ದಯ್ಯನಿಗೂ, ನೋಗಾಲದ ಮುನಿರಾಕನಿಗೂ, ಕ್ಲೋಸ್‌ಪೇಟೆ ರಹಿಮಾನ್ ಖಾರ್ಕಿರಿಗೂ ಬಹುಮಾನಗಳು ದೊರಕಿದವು.

ಮಾ॥ ಎಸ್. ಎಸ್. ನೇಟ್ಲೂರವರು ಗ್ರಾಮಾಂತರಗಳ ಅರ್ಥಸಾಧನೆಗೆ ರೇಷ್ಮೆ ವ್ಯವಸಾಯದ ಸ್ಥಾನವೆಂಬ ವಿಷಯವನ್ನೂ, ಅಮರ್ಥಾರ್ಯು ಮೈಸೂರು ರೇಷ್ಮೆ ಕೈಗಾರಿಕೆ ವಿಷಯವಾಗಿಯೂ, ಮಾ॥ ಎಚ್. ರಾಮರಾಯರು ಮೈಸೂರು ಬಿತ್ತನೆಯ ವಿಷಯವಾಗಿಯೂ, ಕಾರ್ಕಳಾನಹಳ್ಳಿ ಮಾ॥ ಮುನಿಸಿದ್ದಯ್ಯನವರು ಹೊಸ ಜಾತಿ ಹುಳುಗಳನ್ನು ಸಾಕುವುದರ ಪ್ರಯೋಜನವನ್ನೂ ಕುರಿತು ಭಾಷಣಗಳನ್ನು ಮಾಡಿದರು. ಮೈಸೂರು ಸಿರ್ಕ್ ಫಾರಂನಿಂದ ಮಿ॥ ಗಳಾದ ಷಂಷುದ್ದೀಕ್ ಖಾರ್ಕ, ಅವ್ವಾ ದೊರೆಸೊದಲಯಾರ್, ಎಚ್. ಆರ್. ಕೃಷ್ಣಮೂರ್ತಿ, ಅಬ್ದು ಬಾಸಿದ್, ಇವರುಗಳು ಉಪನ್ಯಾಸಗಳನ್ನು ಮಾಡಿದರು. ಈ ಸಮ್ಮೇಳನದಲ್ಲಿ ಮಾಡಿದ ತೀರ್ಮಾನಗಳನ್ನೂ ಅವುಗಳಿಂದ ಉಂಟಾಗುವ ಪರಿಣಾಮಗಳನ್ನೂ ಸೂಚಿಸರಾಗುವುದು:–

(1) ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಗೆ ಸಾಕಾದಷ್ಟು ರೇಷ್ಮೆ ಹುಳದ ಬಿತ್ತನೆಯನ್ನು ಒದಗಿಸತಕ್ಕದ್ದು ಅವಶ್ಯಕವಾದುದರಿಂದ ಇರಾಖಾದ "ಗ್ರೇನೇಜು" ಗಳನ್ನು ಬಲಪಡಿಸುವುದಕ್ಕೂ "ಏಡೆಡ್ ಗ್ರೇನೇಜು" ಗಳನ್ನು ಎಲ್ಲಾ ಕಡೆಗಳಲ್ಲಿಯೂ ಸ್ಥಾಪಿಸಲಕ್ಕೂ ಅವಶ್ಯಕವಾದಷ್ಟು ಹಣವನ್ನೂ, ಸಿಬ್ಬಂದಿಯನ್ನೂ, ಇತರ ಅನುಕೂಲತೆಗಳನ್ನೂ ಒದಗಿಸುವಂತೆ ಸರ್ಕಾರದವರನ್ನು ಕೇಳಿಕೊಳ್ಳಬೇಕು. (2) ಹಸನಾದ ಫಸಲು ಫಾರಂಗಳಲ್ಲಿ ಬೀಜಕ್ಕಾಗಿ ದೊರೆತಾಗ ಹೆಚ್ಚು ಮೊಟ್ಟೆಗಳನ್ನು ತಯಾರಿಸಿ ಗಿರಾಕಿ ಇಲ್ಲದೆ ನಿಂತ ಮೊಟ್ಟೆಗಳನ್ನು "ಕೋರ್ಡ್ ಸ್ಕೋರೇಜ" ನಲ್ಲಿ ಕಾಪಾಡಿ ಅವಶ್ಯಬಿದ್ದಾಗ ಉಪಯೋಗಿಸಿಕೊಳ್ಳಲು ಅನುಕೂಲಿಸುವಂತೆಯೂ, ರೈತರಿಗೆ ಕೇಳಿದ ಸಮಯಗಳಲ್ಲಿ ವಿಶ್ರಜಾತಿಯ ಮೊಟ್ಟೆಯನ್ನು ಒದಗಿಸುವುದಕ್ಕೆ ಅನುಕೂಲವಾಗಿರುವಂತೆಯೂ ಒಂದು "ಕೋರ್ಡ್ ಸ್ಕೋರೇಜ" ನ್ನು ಕಟ್ಟಿಸಲು ಬೇಕಾದಷ್ಟು ಹಣವನ್ನು ಸರ್ಕಾರದವರು ಒದಗಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳಬೇಕು. (3) ರೇಷ್ಮೆ ವ್ಯವಸಾಯದ ಅಭಿವೃದ್ಧಿಗಾಗಿ ಮುಖ್ಯವಾಗಿರುವ ವಿಷಯಗಳನ್ನು ಚರ್ಚಿಸಲು ಮೈಸೂರು ದೇಶದ ರೇಷ್ಮೆ ವ್ಯವಸಾಯಗಾರರ ಒಂದು ಸಭೆಯನ್ನು ಶೀಘ್ರದಲ್ಲಿಯೇ ಏರ್ಪಡಿಸಬೇಕು. ಮತ್ತು ಒಂದು ರಾಷ್ಟ್ರೀಯ ರೇಷ್ಮೆ ವ್ಯವಸಾಯಗಾರರ ಸಂಘವನ್ನು ಏರ್ಪಡಿಸಿಕೊಳ್ಳಬೇಕು. ಈ ಸಂಘಕ್ಕೆ ಅದಷ್ಟು ಸಹಾಯವನ್ನೂ, ರಿಯಾಯಿತಿಗಳನ್ನೂ ಕೊಡಬೇಕೆಂದು ಸರ್ಕಾರದವರನ್ನು ಕೇಳಬೇಕು. (4) ರೇಷ್ಮೆ ಕೈಗಾರಿಕೆಯು ಈ ದೇಶದ ಸಂಪದಭಿವೃದ್ಧಿಗೆ ಬಹಳ ಮುಖ್ಯ ಸಾಧನವಾಗಿರುವುದರಿಂದ ಇದರ ಸಹಾಯಕ್ಕೆ ಸರ್ಕಾರದವರು ನ್ಯಾಯವಿಧಾಯಕ ಸಭೆಯಲ್ಲಿ ಒಬ್ಬ ಪ್ರತ್ಯೇಕ ಪ್ರತಿನಿಧಿಯನ್ನು ಈಚೆಗೆ ಕಾಫೀ ವ್ಯವಸಾಯಕ್ಕೆ ಕೊಟ್ಟಿರುವಂತೆ ಈ ಕೈಗಾರಿಕೆಗೂ ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಬೇಕು. (5) ರೇಷ್ಮೆ ಇಲಾಖೆಯಿಂದ ತಯಾರಿಸಲ್ಪಟ್ಟಿರುವ ಮಾದರಿಯಂತೆ ಮನೆಯಲ್ಲಿ ಉಪಯೋಗಿಸಬಹುದಾದ "ಡೊಮೆಸ್ಟಿಕ್ ಬೇಸಿನ್" ಗಳನ್ನು ಹೆಚ್ಚಾಗಿ ತಯಾರಿಸಿ ರೈತರಿಗೆ ಮಾರಿ ಹಣವನ್ನು ಸುಲಭ ಕಂತಿನಿಂದ ವಸೂಲ್ ಮಾಡುವಂತೆ ಸರ್ಕಾರದವರು ಏರ್ಪಡಿಸಬೇಕು. ಇದಕ್ಕೆ ಬೇಕಾದ ಹಣವನ್ನು ಒದಗಿಸಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳಬೇಕು. (6) ಪರಸ್ಪರಸಹಾಯ ಸಂಘಗಳ ಸಹಾಯದಿಂದ ರೇಷ್ಮೆ ವ್ಯವಸಾಯವನ್ನು ಹೆಚ್ಚಾಗಿ ಅಭಿವೃದ್ಧಿ ಮಾಡಲು ಅವಕಾಶವಿರುವುದರಿಂದ ರೇಷ್ಮೆ ವ್ಯವಸಾಯಗಾರರನ್ನೇ ಸೇರಿಸಿಕೊಂಡು ಪರಸ್ಪರ ಸಹಾಯ ಸಂಘಗಳನ್ನು ಹೆಚ್ಚಾಗಿ ಏರ್ಪಡಿಸಬೇಕು. ಈ ಸಂಘಗಳನ್ನು ಸ್ಥಾಪಿಸಲು ಮತ್ತು ತರುಣದಲ್ಲಿ ಈ ಸಂಘಗಳ ಕೆಲಸಗಳನ್ನು ನಡಿಸಲು ಬೇಕಾದ ಅನುಕೂಲತೆಗಳನ್ನು ಕಲ್ಪಿಸಿ ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕು. [ಈ ತೀರ್ಮಾನವನ್ನು ಸರ್ಕಾರದವರು ಅಂಗೀಕರಿಸಿ ಒಬ್ಬ ಸಿರಿಕಲ್ಚರರ್ ಕೋಆಪರೇಟಿವ್ ಇನ್‌ಸ್ಪೆಕ್ಟರನ್ನು ನೇಮಕಮಾಡಿರುತ್ತಾರೆ. ಈಗ ಮಳೂರು, ಚಕ್ಕೆರೆ, ಮಂಗಳವಾರಪೇಟೆ, ಮೊಗೇನಹಳ್ಳಿ, ಕ್ಲೋಸ್‌ಪೇಟೆ, ಈ ಸ್ಥಳಗಳಲ್ಲಿ ಸೊಸೈಟಿಗಳನ್ನು ಏರ್ಪಡಿಸಿರುವರಲ್ಲದೆ ಇನ್ನೂ ಕೆಲವು ಗ್ರಾಮಗಳಲ್ಲಿ ಸೊಸೈಟಿಗಳು ಏರ್ಪಾಡಾಗುವುದರಲ್ಲಿವೆ. ಪ್ರತಿಯೊಂದು ಸೊಸೈಟಿಗೂ 400 ರೂಪಾಯಿ ಸಾಲ ಕೊಡುವಂತೆ ಹುಕುಂ ಸಾದರುಮಾಡಿರುತ್ತಾರೆ.]

ಈಚೆಗೆ ಜನರು ಹೆಚ್ಚುಹೆಚ್ಚಾಗಿ ಸರ್ಕಾರೀ ರೇಷ್ಮೆ ಫಾರಂಗಳಿಗೆ ಬಂದು ಅನೇಕ ವಿಷಯಗಳನ್ನು ತಿಳಿದುಕೊಂಡು ಹೋಗುತ್ತಿರುವರಲ್ಲದೆ ವಿಶ್ರಜಾತಿಯ ಬಿತ್ತನೆಯನ್ನು ತೆಗೆದುಕ್ಕೊಂಡುಹೋಗಿ ಸಾಕಿ ಅತ್ಯಧಿಕ ಪ್ರಯೋಜನವನ್ನು ಪಡೆಯುತ್ತಿರುವರು. ನಾವು ಏರ್ಪಡಿಸಿದ್ದ ಸ್ಪರ್ಧೆಗಳಿಂದಲೂ, ಪ್ರದರ್ಶನಗಳಿಂದಲೂ ಜನಗಳಲ್ಲಿ ಉತ್ತೇಜನವೂ, ತಿಳುವಳಿಕೆಯೂ ಬಹಳವಾಗಿ ಆಗಿರುವುದರಲ್ಲಿ ಏನೂ ಸಂದೇಹವಿಲ್ಲ. ಈ ಸಮ್ಮೇಳನದಿಂದ ಆದ ಮತ್ತೊಂದು ಪ್ರಯೋಜನವೇನೆಂದರೆ–ಬಡರೈತರ ಕೊರತೆಗಳು ಸರ್ಕಾರದವರ ಚಿತ್ತಕ್ಕೆ ಬಂದಿದೆ. ಈ ಕಸಬು ಪ್ರಖ್ಯಾತಿಹೊಂದಲು ಕಾರಣವಾಯಿತು. ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡನ್ನು ಅನುನರಿಸಿ ದೇವನಹಳ್ಳಿಯ ತಾಲ್ಲೂಕ್ ಬೋರ್ಡಿನವರು ಎರಡು ವಿದ್ಯಾರ್ಥಿವೇತನಗಳನ್ನು ಏರ್ಪಡಿಸಿರುವರು. ಇತರ ಬೋರ್ಡಿನವರು ಇದೇ ಹೇರಿಗೆ ಮಾಡುವಂತೆ ಈ ರೇಷ್ಮೆ ವ್ಯವಸಾಯವು ತಕ್ಕಷ್ಟು ಪ್ರಚಾರವಾಗಲು ಸಂದರ್ಭವಾಯಿತು.

ಈ ಸಮ್ಮೇಳನವು ಒಬ್ಬರ ಪ್ರಯತ್ನ ಸಾಹಸಗಳಿಂದ ಆಗತಕ್ಕದ್ದಲ್ಲ. ಅನೇಕ ಮಂದಿ ದ್ರವ್ಯಸಹಾಯದಿಂದಲೂ, ವಾಕ್ ಸಹಾಯದಿಂದಲೂ, ಕಾಯಕಷ್ಟದಿಂದಲೂ ಒತ್ತಾಸೆಮಾಡಿದರು. ಇರಾಖೆಯ ಮೊಖ್ತೇಸರರೂ, ಇತರ ಅಧಿಕಾರಿಗಳೂ ಬಹಳವಾಗಿ ಸಹಾಯಮಾಡಿರುತ್ತಾರೆ.

ಎಂ. ಬೋರಪ್ಪ,
ಸಹಾಯ ಕಾರ್ಯದರ್ಶಿ.

ಹೆಚ್ಚು ಪ್ರಯೆದಿಂದಾಗುವ ನಷ್ಟಗಳು.

ಮೋಟಾರ್ ಬಂಡಿಯೆಂದರೇನೆಂಬುದೂ ಇದರಿಂದಾಗುವ ಪ್ರಯೋಜನವೆಷ್ಟೆಂದೂ ಈಗ ಅನೇಕರಿಗೆ ತಿಳಿದಿರುವುದಷ್ಟೆ. ಈಚೀಚೆಗೆ ಮೋಟಾರ್ ಬಂಡಿಗಳು ಬಹು ಸುಲಭಕ್ರಯಕ್ಕೆ ದೊರೆಯುತ್ತಿರುವುದೆಂಬ ವಿಷಯವು ಬಹು ಜನಗಳಿಗೆ ತಿಳಿಯದೆಂದು ತೋರಿಬರುವುದು. ಇದಕ್ಕೆ ಕಾರಣವೇನೆಂದರೆ–ಮೋಟಾರ್ ಗಾಡಿಗಳನ್ನು ತಯಾರುಮಾಡುವ ಕೆಲವು ಕಂಪೆನಿಯವರು ಮೋಟಾರು ಬಂಡಿಗೆ ಉಪಯೋಗಿನಬೇಕಾಗಿರುವ ಸಾಮಾನುಗಳೆಂದರೆ ಕಬ್ಬಿಣದ ನರಾಕಿ, ಚಕ್ರ, ಮರಸುತ್ತು, ಮೊಳೆ, ಇವುಗಳನ್ನು ಒಂದೇ ವಿಧವಾದ ಅಳತೆಗೆ ತಯಾರ್ಮಾಡಿ, ಅವಕ್ಕೆ ನಂಬರು ಹಾಕಿ ಮಾರಲು ಸಿದ್ಧವಾಗಿಟ್ಟಿರುವರು. ಈ ರೀತಿ ಸಾವಿರಗಟ್ಟಲೆ ಮೋಟಾರುಗಾಡಿಗಳನ್ನು ತಯಾರ್ಮಾಡುವ ವಿಧಾನಗಳನ್ನು ಅನೇಕರು ಕಲತುಕೊಂಡಿರುವರು. ಮೇಲೆ ಹೇಳಿದ ಸಾಮಾನುಗಳಲ್ಲಿ ಯಾವುದಾದರೂ ಒಂದು ಸಾಮಾನು ಮುರಿದುಹೋದುದಾದರೆ ಅದಕ್ಕೆ ತಕ್ಕದ್ದಾದ ಮತ್ತೊಂದು ಸಾಮಾನನ್ನು ಅಂಗಡಿಗಳಿಂದ ಕೊಂಡುತಂದು ಅದಕ್ಕೆ ಸೇರಿಸಿ ಭದ್ರಪಡಿಸಿಕೊಂಡು ಉಪಯೋಗಿಸಿಕೊಳ್ಳಬಹುದಾಗಿದ್ದಿತು. ಈ ರೀತಿಯಾದ ಪದಾರ್ಥಗಳು ಕ್ರಯಕ್ಕೆ ಸಿಕ್ಕುವ ಅಂಗಡಿಗಳು ಪ್ರಪಂಚದಲ್ಲಿ ಅನೇಕವಾಗಿರುವುದರಿಂದ ಮುರಿದ ಬಂಡಿಗಳನ್ನು ಕೂಡಲೆ ರಿಪೇರಿಮಾಡುವ ಸೌಕರ್ಯವ್ಯೂ ಹೆಚ್ಚಾಗುತ್ತಾ ಬಂದಿತ್ತು. ಆದರೆ ಕೆಲವು ಕಾಲದ ಹಿಂದೆ ಮೋಟಾರ್ ಬಂಡಿಯನ್ನು ತಯಾರ್ಮಾಡುವ ಒಬ್ಬ ಇಂಜನೀಯರು ಮೋಟಾರ್ ದಾಡಿಗೆ ಹಾಕಬೇಕಾಗಿರುವ ಒಂದು ಮರಸುತ್ತನ್ನು 1-16 ನೆಯ ಭಾಗದ ಇಂಚಿನಷ್ಟು ಮಾತ್ರ ಸ್ವಲ್ಪ ಉದ್ದವಾಗಿ ತಯಾರ್ಮಾಡಿದನು. ಹೀಗೆ ಮಾಡಿದ ಅವನ ತಪ್ಪನ್ನು ತಾನೇ ತಿದ್ದಿಕೊಳ್ಳಬಹುದಾಗಿದ್ದಿತು. ಹಾಗೆ ಅವನು ತಿದ್ದಿಕೊಳ್ಳಲಿಲ್ಲ. ಆಗ್ಗೆ ತಯಾರ್ಮಾಡಿಟ್ಟ ಒಂದು ಲಕ್ಷ ಬಂಡಿಗಳು ಬಕರಿಗೆ ಕೊಡಲು ಸಿದ್ಧವಾಗಿದ್ದವು. ಅದಕ್ಕೆ ಜೋಡಿನಬೇಕಾಗಿರುವ ಮೇರೆ ಹೇಳಿದ ಮರಸುತ್ತಿನಂತಿರುವ ಮೊಳೆಯು ಒಂದು ಲಕ್ಷದಷ್ಟು ತಯಾರ್ಮಾಡಿದ ಹೊರತು ಆ ಬಂಡಿಗಳು ವಿಕ್ರಯಿಸಲು ಅವಕಾಶವಾಗಲಿಲ್ಲ. ಈ ಕಾರಣಗಳಿಂದ ಆ ಕೋಠಿ ಅಂಗಡಿಯವರಿಗೆ ಸಾವಿರಾರು ಪೌಂಡುಗಳು ನಷ್ಟವಾದುವು.

ಮೋಟಾರು ಬಂಡಿಗಳಿಗೆ ಸೇರಿಸುವ ಒಂದೇ ವಿಧವಾದ ಅಳತೆಯ ಮರಸುತ್ತುಗಳನ್ನು ಲಕ್ಷಾಂತರ ಗಟ್ಟಿಯಾಗಿ ತಯಾರ್ಮಾಡಿ ಸಿದ್ಧವಾಗಿರುವುದರಿಂದ ಈಗ ಮೋಟಾರ್ ಬಂಡಿಗಳು ಬಹು ಸುಲಭ ಕ್ರಯಗಳಿಗೆ ಸಿಕ್ಕುವಂತಾದುವು. ಈ ಕಾರಣದಿಂದ ಬಂಡಿಯನ್ನು ತಯಾರ್ಮಾಡುವ ಕಂಪೆನಿಯವರು ತಮ್ಮ ಬಂಡಿಗಳಿಗೆ ಸೇರಿಸಬೇಕಾಗಿರುವ ಭಾಗಗಳನ್ನು ಒಂದೇ ಅಳತೆಗೆ ತಯಾರ್ಮಾಡಿಸಿ, ಪೋರ್ಡ್ ಕಂಪೆನಿಯವರಿಂದ ತಯಾರ್ಮಾಡಲ್ಪಟ್ಟ ಬಂಡಿಗಳಿಗೆ ಸೇರಿಸಲಕ್ಕೆ ಅವಕಾಶವಾಗಿರುವುದರಿಂದರೇ ಈಗ ಸಾವಿರಾರು ಗಟ್ಟಲೆಯಾದ ಗಾಡಿಗಳು ಬಹು ಸುಲಭವಾಗಿ ದೊರೆತು, ಜನರೆಲ್ಲರೂ ವಿಶೇಷವಾಗಿ ಉಪಯೋಗಿಸುವುದಕ್ಕೆ ಅವಕಾಶವುಂಟೆಂಬುದೇ ಮುಖ್ಯ ಕಾರಣವೆಂದು ತಿಳಿಯಬೇಕು.

For Sale.

ESSEX LIGHT SIX.

Latest Model, new last May, driven 5,000 miles only, perfect condition, many extras; Price, Rs. 3,000.

Also old Model 7-9 Harley-Davidson and Side-Car; No reasonable offer refused.

[144-1] *Apply:* THE HUNSUR WORKS, HUNSUR.

ನೋಟಿಫಿಕೇಷನ್

ಹಾಸನ ಟವರ್ ಮ್ಯುನಿಸಿಪಾಲಿಟಿ.

1926 ನೇ ಜನವರಿ ಮಾಹೆ 3, 4 ಮತ್ತು 5 ನೇ ತಾರೀಖುಗಳಲ್ಲಿ ಹಾಸನ ಟವರ್‌ನಲ್ಲಿ ನಡೆಯುವ ಕ್ಯಾಟಲ್ ಷೋ ಸಂಬಂಧದಲ್ಲಿ ಹಾಸನ ಟವರ್ ಮ್ಯುನಿಸಿಪರ್ ಸರಹದ್ದಿನೊಳಕ್ಕೆ ದನಗಳ ಅಂಟು ಜಾಡ್ಯವಿರತಕ್ಕ ಪ್ರದೇಶದಿಂದ

ವೃತ್ತಾಂತ ಪತ್ರಿಕೆ.

—:0:—

ಸರ್ ೧೯೨೫ನೇ ಇಸವಿ ಡಿಸೆಂಬರ್ ತಾ. ೩೦ ನೇ ಗುರುವಾರ.

ಹಿಂದುಸ್ಥಾನದ ರಾಷ್ಟ್ರಕೂಟವು.

ಹಿಂದುಸ್ಥಾನದ ಮಹಾಜನರಲ್ಲಿ ಈ ರಾಷ್ಟ್ರದ ಜನಾಂಗಕೂಟಕ್ಕೆ (ನ್ಯಾಷನರ್ ಕಾಂಗ್ರೆಸ್) ವಿಶೇಷ ಗೌರವವೂ ಮೇಲಾದ ಸ್ಥಾನವೂ ಇದ್ದವು. ಅದರಲ್ಲಿ ಬಗೆ ಬಗೆಯ ರಾಜಕೀಯ ಕಕ್ಷಿಗಳ ಪ್ರತಿನಿಧಿಗಳು ತಕ್ಕಮಟ್ಟಿಗೂ ನೇರುತ್ತಿದ್ದರು. ಆ ಕೂಟದಲ್ಲಿ ನಡೆದ ಚರ್ಚೆಗಳ ವಿಷಯದಲ್ಲೂ ತೀರ್ಮಾನಗಳ ಮೇಲೂ ಅನೇಕಾನೇಕರು ಭಕ್ತಿ ಶ್ರದ್ಧೆಗಳನ್ನು ಇಟ್ಟುಕೊಂಡಿದ್ದರು. ಈಗಲಾದರೋ ಆಂಧಾ ಕಾಲವು ಕಳೆದು ಹೋಗಿರುವುದು. ಆ ಕೂಟದಲ್ಲಿ ವ್ಯಾಪಕಿಸ್ಫುಲಕ್ಷಣವೇನೂ ಕಂಡುಬರುವುದಿಲ್ಲ. ಪ್ರಾಮುಖ್ಯವಾದ ವಿಚಾರಗಳಲ್ಲಿ ಆ ಸಭೆಯೊಳಗೆ ನಡೆಯುವ ಚರ್ಚೆಗಳನ್ನು ಓದಿ ನೋಡಿದ ಪಕ್ಷದಲ್ಲಿ ವಿವೇಕವನ್ನು ಹೇಳಿಕೊಡುವ ಅಂಶಗಳ್ಯಾವುವೂ ಹೊರಪಡುವ ಹಾಗಿಲ್ಲ.

ಹಿಂದುಸ್ಥಾನ ಅಧ್ಯಂತಕ್ಕೂ ಸಂಬಂಧಪಟ್ಟಿರುವ ಈ ರಾಷ್ಟ್ರಕೂಟದಲ್ಲಿ ಒಟ್ಟು 12,500 ಜನರು ಮಾತ್ರವೇ ಮೆಂಬರುಗಳಾಗಿರುತ್ತಾರೆಂದು ಹೇಳುವಾಗ್ಗೆ ಯಾರಿಗೂ ಆಶ್ಚರ್ಯ ಉಂಟಾಗದೆ ಹೋಗದು. ಮಿ॥ ಗಾಂಧಿಯವರಾದರೋ ಮೆಂಬರುಗಳ ಸಂಖ್ಯೆಯು ಕಡಮೆಯಾಗಿದ್ದಾಗ್ಯೂ ಈ ಜನಾಂಗ ಸಭೆಯ ಸ್ಥಾನವೂ ಅದರ ಗೌರವವೂ ಮೊದಲಿಗಿಂತ ಎಷ್ಟೋ ಹೆಚ್ಚಿರುವುದೆಂದು ಹೇಳುತ್ತಾರೆ. ಆದರೆ ಅನೇಕಾನೇಕರಿಗೆ ಆ ರೀತಿಯಾವ ಅಭಿಪ್ರಾಯವೂ ಇರುವುದಿಲ್ಲ. ಇಷ್ಟಲ್ಲದೆ ಈ ಮಹಾಸಭೆಯವರು ಬಹಳ ಬಲವಾಗಿ ಪ್ರತಿಪಾದಿಸುವ ವಿಚಾರಗಳನ್ನು ನೋಡಿದ ಪಕ್ಷದಲ್ಲಿ ಅದರ ಗೌರವವೂ ಸ್ಥಾನವೂ ಕುಗ್ಗಿ ಹೋಗಿರುವುದೇನೂ ಆಶ್ಚರ್ಯವಾಗಿಲ್ಲ.

ಪ್ರಥಮತಃ ರಾಷ್ಟ್ರಕೂಟವು ಬಾಡಿಯೇ ಸರ್ವಾರ್ಥ ಸಿದ್ಧಿಯೆಂದು ಹೇಳುತ್ತದೆ. ಮೊನ್ನೆ ಕಾಕಿನಾಡದಲ್ಲಿ ಮಿ॥ ಗಾಂಧಿಯವರು ಭಾಷಣಮಾಡುತ್ತಾ "ಜನಗಳು ವಿದೇಶೀ ಬಟ್ಟೆಗಳನ್ನು ತ್ಯಜಿಸಿಬಿಡುವುದಾದರೆ ಒಂದು ವರುಷದೊಳಗಾಗಿ ಅವರಿಗೆ ಸ್ವರಾಜ್ಯವು ದೊರಕುವುದು" ಎಂದು ನುಡಿದರು. ಆದರೆ ಅದೇ ರಾಷ್ಟ್ರಕೂಟದ ಅನೇಕ ಮೆಂಬರುಗಳೂ ಈ ರಾಷ್ಟ್ರ ಅಧ್ಯಂತದಲ್ಲೂ ಇರುವ ಅನೇಕಾನೇಕ ಜನಗಳೂ ರಾಜ್ಯಧಾರವ ಲಕ್ಷಣಗಳನ್ನು ಉಪರಾವಣೆಮಾಡಿಕೊಳ್ಳಬೇಕೆಂದು ಹೋರಾಡುವಂಥಾ ಮಹಾಜನ ಸಭೆಗೂ ಖಾದೀ ಪ್ರಚಾರಕ್ಕೂ ಗಂಟು ಹಾಕುವುದು ವ್ಯರ್ಥವೂ ಅಪ್ರಕೃತವೂ ಆಗಿದೆ ಎಂಬುದಾಗಿ ತಿಳಿದಿರುತ್ತಾರೆ.

ಎರಡನೆಯದಾಗಿ ರಾಷ್ಟ್ರಕೂಟವು ಸಹಾಯ ನಿರಾಕರಣ ತತ್ವವನ್ನು ಮತ್ತೆ ಸ್ಥಾಪನೆಮಾಡಿ, ಪ್ರಜೆಗಳು ಪ್ರಜಾಪಾಲಕರೊಡನೆ ಆಳ್ವಿಕೆಯಲ್ಲಿ ಕರೆತು ಅವರಿಗೆ ಸಹಾಯಮಾಡಕೂಡದೆಂದು ಹೇಳಿರುತ್ತದೆ. ಆದರೆ ಪ್ರಜಾಬಾಹುಳ್ಯದ ಅಭಿಮತವು ಅದಕ್ಕೆ ವಿರೋಧವೇ ಆಗಿದೆ.

ತಿ ಒಂದಕ್ಕೂ "ನಮಗೆ ಬೇಡ," "ನಾವು ತಟಸ್ಥರಾಗಿರೋಣ" ಎಂದು ಹೇಳುವುದರಿಂದ ಈ ರಾಷ್ಟ್ರಕ್ಕೆ ಯಾವ ಹಿತವೂ ಆಗುವುದಿಲ್ಲವೆಂಬ ಅಭಿಪ್ರಾಯವೇ ಅನೇಕಾನೇಕರಲ್ಲಿ ವ್ಯಾಪನೆಯಾಗಿರುವುದು. [illegible] ಸಭೆಗಳಲ್ಲೂ ಇತರ ಸಂಸ್ಥೆಗಳಲ್ಲೂ ಹಾಜರಾಗಿ ಆಳ್ವಿಕೆಯಲ್ಲಿ ಪ್ರಜೆಗಳಿಗಿರುವ ಕುಂದುಕೊರತೆಗಳನ್ನು ಹೊರಹಾಕಿ ಚರ್ಚಿಸಿ ಹೋರಾಡಬೇಕೆಂದು ಅಭಿಪ್ರಾಯಪಡತಕ್ಕವರಾಗಿದಾರೆ" ಎಂಬುದಾಗಿ ಮಿ॥ ಕೇಳಕರು ಹೇಳಿರುವ ಮಾತು ನಿಜವಾಗಿರುತ್ತದೆ. ಆದರೆ ರಾಷ್ಟ್ರಕೂಟವು—"ಅದೊಂದೂ ಬೇಡ; ದೂರವಾಗಿರುವುದೇ ಸರ್ವೋತ್ತಮ" ಎಂದು ಹೇಳುವುದು. ವಿದ್ಯಮಾನಗಳು ಈ ರೀತಿ ಇರುವಲ್ಲಿ ರಾಷ್ಟ್ರಕೂಟದ ಸ್ಥಾನ ಗೌರವಗಳು ಕಂದಿಕುಂದಿ ಹೋದವೆಂಬುದರಲ್ಲಿ ಆಶ್ಚರ್ಯವೇನೂ ಕಾಣುವುದಿಲ್ಲ.

ಹಿಂದುಸ್ಥಾನದ ಮಹಾಜನರಿಗೆ ಈ ರಾಷ್ಟ್ರದ ಮೇಲಿದ್ದ ಅಭಿಮಾನವೂ ಗೌರವವೂ ಕಡಮೆಯಾದದ್ದಕ್ಕೆ ಬೇರೆ ಕಾರಣಗಳೂ ಇರುತ್ತವೆ. ಮಸಲಾ, ರಾಷ್ಟ್ರಕೂಟದ ಹಣಕಾಸಿನ ವಿಚಾರವನ್ನು ನೋಡಿದಲ್ಲಿ ಅದರ ಮೂಲಧನದಲ್ಲಿ ಒಂದೂವರೆ ಲಕ್ಷಕ್ಕಿಂತಲೂ ಹೆಚ್ಚು ದ್ರವ್ಯ ವಿರುವುದಿಲ್ಲ. ದ್ರವ್ಯವನ್ನು ಕೂಡಿಸುವುದಕ್ಕೆ ಇತರ ಉಪಾಯಗಳನ್ನು ಹುಡುಕದೆ ಹೋದಲ್ಲಿ ನಮಗೆ ಬಹು ವಿಶೇಷವಾದ ಕಷ್ಟಗಳುಂಟಾಗುವವು ಎಂಬುದಾಗಿ ಕಾರ್ಯಗೆನ್ ಸಹಾ ಸೆಕ್ರಟರಿಗಳು ಹೇಳುತ್ತಾರೆ. ಈ ಸಂದರ್ಭದಲ್ಲಿ ಪಂಜಾಬ್ ಅಧಿಪತ್ಯದ ಕಾಂಗ್ರೆಸ್ ಫಂಡಿನ ವಿಚಾರವು 45,000 ರೂಪಾಯಿ ಫಂಡಿತ ಮೌಲ್ಯದ್ದಿರುವುದೆಂದೂ, ಆದನ್ನವರು ಪಾಪತಿಮಾಡುವುದಾಗಿ ಹೇಳಿದ್ದರೂ ಕೊಡದೆ ನಾವಕಾಶ ಮಾಡಿದಾರೆಂದೂ ತಿಳಿಯಬಂದಿದೆ. ಆತ್ಮರಾಗಿ, ನಾಗಪುರದಲ್ಲಿ ಹೋದ ವರುಷ ನಡೆದ ರಾಷ್ಟ್ರಕೂಟದ ರಿಸೆಪ್ಷನ್ ಕಮಿಟಿಯವರು ಒಂಭತ್ತರೆ ಲಕ್ಷ ರೂಪಾಯನ್ನು ಜಮಾಯಿಸಿ, ಆ ಪೈಕಿ 40,000 ರೂಪಾಯಿ ಮಾತ್ರ ರಾಷ್ಟ್ರಕೂಟದ ಫಂಡಿಗೆ ಪಾವತಿಮಾಡಿ, ಇನ್ನೇನೂ ಉಳಿಯಲಿಲ್ಲವಾದ್ದರಿಂದ ಬಾಕಿ ಹೊಬಲಗನ್ನು ಕೊಡಲು ನಾಧ್ಯವಿಲ್ಲವೆಂದು ತಿಳಿಸಿಬಿಟ್ಟಿರುವಂತೆ—ಪ್ರಕಟವಾಗಿದೆ. ಮಿ॥ ಗಾಂಧಿಯವರು [illegible] ಇಂಥಾ ರಾಷ್ಟ್ರಕೂಟದ ಫಂಡಿಗೆ ಪ್ರಜೆಗಳು ದ್ರವ್ಯಸಹಾಯ ಮಾಡಲುದ್ಯಮವಾಗಿಲ್ಲವೆಂಬುದರಲ್ಲಿ ಆಶ್ಚರ್ಯವೇನೂ ಕಾಣುವುದಿಲ್ಲ.

ಈ ಕೂಟದ ತತ್ವ ಇಷ್ಟೇ. ಅದರಿಂದಾಗುವ ಕೆಲಸ ಬಹಳ ಸ್ವಲ್ಪ. "ನನ್ನ ಸಂಕಲ್ಪಕ್ಕೆ ನೀವು ಮನಃಪೂರ್ವಕವಾಗಿ ಒಪ್ಪಿ ರುಜು ಹಾಕುತ್ತೀರಿ; ಆದರೇನು? ರಾಷ್ಟ್ರಕೂಟದ ತೀರ್ಮಾನಗಳನ್ನು ಅಲಕ್ಷ್ಯ ಮಾಡಿ ತಿರಸ್ಕರಿಸುವಿರಿ" ಎಂಬುದಾಗಿ ಮಿ॥ ಗಾಂಧಿಯವರು ಸ್ಪಷ್ಟವಾಗಿಯೇ ಹೇಳಿದಾರೆ. ಈ ರಾಷ್ಟ್ರಕೂಟದಲ್ಲಿ ಬಹು ವಿಶೇಷವಾದ ಮತ್ತು ನ್ಯಾರನ್ಯವಾದ ವಾಚಾಳಿಕತ್ವವೂ ವಾಗ್ಧುರಿಯೂ ತುಳುಕಾಡುವವು. ಕಾರ್ಯಕಾರಿಯಾವ ಸಲಹೆಯಾಗಲಿ, ವಿವೇಕ ಪೂರ್ವಕವಾದ ಮಾರ್ಗದರ್ಶಕವಾಗಲಿ ಕಂಡುಬರುವುದಿಲ್ಲ. ಸದ್ಯ ಹಿಂದುಸ್ಥಾನದಲ್ಲಿ ಹಿಂದೂ ಮಹಮದಿಯರಿಗೆ ಐಕಮತ್ಯ ಉಂಟಾಗಬೇಕಾದದ್ದು ಪರಮಾವಶ್ಯವಾದ ವಿಷಯ. ಈ ವಿಚಾರಕ್ಕೆ ಸಹಕಾರಿಯಾಗುವಂಥಾ ಸಲಹೆಯಾಗಲಿ, ಸೂಚನೆಯಾಗಲಿ ಯಾವುದೊಂದೂ ಕಂಡುಬರುವುದಿಲ್ಲ. ನಮ್ಮ ರಾಷ್ಟ್ರದಲ್ಲಿ ಪರಿಹರವಾಗಬೇಕಾಗಿರುವಂಥಾ ನ್ಯೆಜವಾದ ಕಷ್ಟ ಅನಾನುಕೂಲಗಳು ಹಲವು ಇದ್ದಾಗ್ಯೂ ಈ ರಾಷ್ಟ್ರಕೂಟವು ಅವುಗಳನ್ನೆಲ್ಲಾ ಪರಿಗಣಿಸದೆ ಹೋಗಿದೆ. ಹಿಂದುಸ್ಥಾನದ ಪ್ರಜಾ ಕೋಟಿಗಳಿಗೆ ಸಂಬಂಧಪಡುವಂಥಾ ಸತ್ಯಪಾದ ಅಂಶಗಳಿಗೆ ಮನಸ್ಸುಕೊಟ್ಟು ಅವನ್ನು ಶಿದ್ಧಿ ಕ್ರಮಪಡಿಸಬೇಕೆಂಬುದಾಗಿ ಶ್ರಮ ಪಡುವ ಹಾಗಾಗುವ ತನಕ ಈ ರಾಷ್ಟ್ರಕೂಟಕ್ಕೆ ಹಿಂದೆ ಇದ್ದ ಸ್ಥಾನವೂ ಗೌರವವೂ ಮತ್ತೆ ಲಭ್ಯವಾಗುವುದಾಗಿಲ್ಲ.

ಬಡಗಿಯ ಮನೆಯಲ್ಲಿ ನಡೆದುದು.

ಒಬ್ಬ ರೈತನ ಮನೆಯಲ್ಲಿ ಆರಂಭಿಸ ಕೆಲಸಕ್ಕಾಗಿ ಇನ್ನೊಂದು ಜತೆ ಎತ್ತುಗಳನ್ನು ಕೊಂಡುಕೊಂಡು ಬಂದಿದ್ದರು. ಆದಕಾರಣ ಅವರಲ್ಲೊಬ್ಬನು ಬಡಗಿಯ ಮನೆಗೆ ಹೋಗಿ ತನಗೊಂದು ಒಳ್ಳೆಯ ನೊಗವನ್ನು ಮಾಡಿಕೊಡ ಬೇಕೆಂದು ಕೇಳಿದನು. ಆದರಂತೆ ಆ ಬಡಗಿಯು ಒಂದು ನೊಗವನ್ನು ಮಾಡಿ ಹೊಲ್ಯೆಸಿದ ಮೇಲೆ ಎತ್ತುಗಳನ್ನು ತನ್ನ ಬಳಿಗೆ ಹೊಡೆದುಕೊಂಡು ಬರಬೇಕೆಂದು ಆ ರೈತನಿಗೆ ಹೇಳಿಕಳುಹಿಸಿದನು. ಎತ್ತುಗಳು ಬರಲು, ಆ ಬಡಗಿಯು ತಾನು ಮಾಡಿದ್ದಿದ್ದ ನೊಗವನ್ನು ಎತ್ತುಗಳ ಕತ್ತಿನ ಮೇಲಿಟ್ಟು ನೋಡಿ ತಿರಿಗಿ ಅವನ್ನು ತೆಗೆದು ಅಲ್ಲಲ್ಲಿ ಸ್ವಲ್ಪಸ್ವಲ್ಪ ಕೆತ್ತಿ, ಅತ್ತರಿಸಿದಿದು ನುಣುಪು ಮಾಡಿ ಅದು ಆ ಎತ್ತುಗಳ ಕತ್ತಿನ ಮೇರೆ ಬಿಚಿತವಾಗಿ ಕೂತುಕೊಳ್ಳುವಂತೆ ಮಾಡಿದನು. ರೈತನು ಇದನ್ನು ನೋಡಿ ಆ ಬಡಗಿಯಜನಿಗೆ—ನೀನು ಇಷ್ಟೆಲ್ಲಾ ತೊಂದರೆಯನ್ನು ತೆಗೆದುಕೊಳ್ಳುವುದಕ್ಕೆ ಕಾರಣವೇನು? ಇತರ ಬಡಗಿಯವರು ಒಂದೇ ನಮೂನೆಯ ನೊಗಗಳನ್ನು ಮಾಡಿ ಹಾಕುತ್ತಾರಲ್ಲಾ; ನೀನು ಈ ನೊಗವನ್ನು ಹಾಗೇ ಕೊಟ್ಟಿದ್ದರೂ ಈಗ ನಾನು ನಿನಗೆಷ್ಟು ದುಡ್ಡು ಕೊಡುತ್ತೇನೋ ಅಷ್ಟನ್ನೇ ಕೊಡುತ್ತಿದ್ದೆನು; ಆದರೂ ನೀನು ಇಷ್ಟು ಚಿಂತೆಪಟ್ಟು ಇಷ್ಟನ್ನು ಮಾಡಿಕೊಟ್ಟುದಕ್ಕಾಗಿ ನಾನು ಕೃತಜ್ಞನಾಗಿರುತ್ತೇನೆಂದು ಹೇಳಿದನು. ಅದಕ್ಕಾ ಬಡಗಿಯವನು—ಈ ಮೂಗುವ್ರಾಣಿಗಳು ನಮಗೋಸ್ಕರವಾಗಿ ದುಡಿಯುತ್ತವೆ; ಅವುಗಳ ಕೆಲಸಕ್ಕೆ ಇಕ್ಕುವ್ಯಾಗದಾರದು; ಅವುಗಳೂ ದೇವರ ಸೃಷ್ಟಿಗಳೇ ಎಂದು ಹೇಳಿದನು. ಆ ರೈತನು ಹಿಂದಿರುಗಿ ಮನೆಗೆ ಹೋಗುತ್ತಾ—ಆ ಬಡಗಿಯವನು ಎಷ್ಟು ಒಳ್ಳೆಯವನು! ಎಷ್ಟು ಚೆನ್ನಾಗಿ ಮಾತನಾಡುತ್ತಾನೆ! ಅವನ ಕೆಲಸವಾದರೋ ಬಹಳ ಮುದ್ದಾಗಿದೆ; ನನಗೆ ಏನು ಬೇಕಾದರೂ ಇನ್ನು ಮುಂದೆ ಯಾವಾಗಲೂ ಅವನ ಬಳಿಗೇ ಹೋಗುತ್ತೇನೆಂದು ತನ್ನ ಮನಸ್ಸಿನಲ್ಲಿ ಅಂದುಕೊಂಡನು.

ಕೆಲವು ತಿಂಗಳುಗಳು ಕಳೆದ ತರುವಾಯ ಆ ರೈತನ ಬಂಡಿಯ ಚಕ್ರವನ್ನು ಸರಿಮಾಡಿಸಬೇಕಾದ ಪ್ರಯೋಜನವು ಬಿದ್ದುದರಿಂದ ಅವನು ತಿರಿಗಿ ಆ ಬಡಗಿಯವನ ಕಾರ್ಖಾನೆಗೆ ಹೋದನು. ಆದರೆ ಆ ಬಡಗಿಯು ಅಲ್ಲಿರಲಲ್ಲ. ಅತನ ತಮ್ಮಂದಿರು ಮಾತ್ರ ಇದ್ದರು. ಅತನನ್ನು ಕುರಿತು ವಿಚಾರಮಾಡಿದಾಗ—ಅತನು ಹೊರಟುಹೋಗಿ ಒಂದು ತಿಂಗಳ ಮೇರಾಯಿತು; ಎಲ್ಲಿ ಹ್ವಾನೋ ಒಬ್ಬರಿಗೂ ತಿಳಿಯದು; ಅವನು ಎಲ್ಲೋ ಕಾಡಿನಲ್ಲಿರಬಹುದು ಎಂದು ಹೇಳಿದರು.

ಕೆಲವು ದಿನಗಳ ತರುವಾಯ—ಆ ಬಡಗಿಯವನು ಬೋಧನೆಮಾಡುವುದಕ್ಕೆ ಪ್ರಾರಂಭಿಸಿರುತ್ತಾನೆ; ಅತನ ಬೋಧನೆಯು ಅತ್ಯಂತ ಆಶ್ಚರ್ಯಕರವಾಗಿಯೂ, ಬೇರೆ ಗುರುಗಳ ಬೋಧನೆಗೆ ಪೂರ್ಣ ವ್ಯತ್ಯಾಸವಾಗಿಯೂ ಇರುತ್ತದೆ; ಜೇರೆಬೇರೆ ಗ್ರಾಮಗಳವರು ಅತನ ಮಧುರವಾದ ಮಾತುಗಳನ್ನು ಅತ್ಯಾದರದಿಂದ ಕೇಳುತ್ತಿದ್ದಾರೆ; ಇಷ್ಟೇ ಅಲ್ಲ; ಅತನು ಇದ್ದ ಕ್ಕಿದ್ದ ಹಾಗೆ ಘನವೈದ್ಯನಾಗಿರುತ್ತಾನೆ; ಬರೀ ಬಾಯಿಮಾತಿನಿಂದಲೇ ಒಬ್ಬ ಕುರುಡ ಭಿಕ್ಷಗಾರನಿಗೆ ಕಣ್ಣುಕೊಟ್ಟನು; ಅತನು ಕೆಲವು ಮಂದಿ ಕುಷ್ಠರೋಗಿಗಳನ್ನು ಮುಟ್ಟಿದನು; ಅವರಿಗೆ ಗುಣವಾಯಿತು ಎಂಬೀ ನುದ್ದಿಯು ಮುಟ್ಟಿತು. ಆ ಗ್ರಾಮಸ್ಥರು ಇದನ್ನೆಲ್ಲಾ ಕೇಳಿ—ನಾವಿದನ್ನು ನಂಬುವುದೇ ಇಲ್ಲ. ಅವನು ಇಲ್ಲಿ ಬಡಗಿಯ ಕೆಲಸ ಒಂದು ಹೊರತು ಇಂಥ ಯಾವ ಕೆಲಸವನ್ನಾದರೂ ಎಂದೂ ಮಾಡಿದವನಲ್ಲ. ಅವನು ಇಲ್ಲಿಗೆ ಬಂದು ಕೆಲವು ಮಹತ್ಕಾರ್ಯಗಳನ್ನು ಮಾಡಲು; ಆಗ ನಂಬುತ್ತೇವೆಂದು ಹೇಳುವವರಾದರು.

ಒಂದು ದಿನ ಆ ಬಡಗಿಯವನಾದ ಯೇಸುವು ತನ್ನ ಸ್ವಂತ ಊರಿಗೆ [illegible] ಶಾಸ್ತ್ರದ ಒಂದು ಭಾಗವನ್ನು ಪಾರಾಯಣ ಮಾಡಿ ಬೋಧನೆ ಮಾಡುವುದಕ್ಕೆ ಪ್ರಾರಂಭಿಸಿದನು. ಅಲ್ಲಿ ಕೂಡಿಬಂದಿದ್ದ ರೈತರೂ ಕೈಗಾರಿಕೆಯ ಕೆಲಸದವರೂ ಇತರರೂ ಅತನ ಬಾಯಿಯಿಂದ ಹೊರಟಂಥ ಕೃಪಾಪೂರಿತವಾದ ಮಾತುಗಳನ್ನು ಕೇಳಿ ಆಶ್ಚರ್ಯಭರಿತರಾಗಿ—ಇವನು ಆ ಬಡಗಿಯವನಲ್ಲವೇ! ಇವನಿಗೆ ಈ ಪಾಂಡಿತ್ಯವೂ ಜ್ಞಾನವೂ ಎಲ್ಲಿಂದ ಬಂದಿದ್ದಾವು? ಇವನು ಅಧಿಕಾರದಿಂದ ಮಾತನಾಡುತ್ತಾನಲ್ಲಾ; ಇದು ಹೇಗಾಯತೋ ನಾವರಿಯೆವೆಂದು ಮಾತಾಡಿಕೊಂಡರು. ಆದರೆ ಅಲ್ಲಿದ್ದ ಯಾಜಕರೂ ಧರ್ಮೋಪದೇಶಕರೂ ಕೋಪೋದ್ರೇಕರಾಗಿ—ಇವನು ಸಾಮಾನ್ಯವಾದ ಒಬ್ಬ ಬಡಗಿಯವನು ಅಷ್ಟೆ; ಇವನ ಮನೆಯವರನ್ನೆಲ್ಲಾ ನಾವು ಬಲ್ಲೆವು; ಇಂಥವನು ನಮಗೆ ಬೋಧನೆ ಮಾತುವುದು ಹೇಗೆ! ಎಂದು ಹೇಳುತ್ತ, ಅತನನ್ನು ಆ ವ್ಯಾರ್ಥನಾ ಮಂದಿರದಿಂದ ಹೊರಕ್ಕೆ ತಳ್ಳಿಬಿಟ್ಟರು. ಯೇಸುವಿಗೆ ದುಃಖವಾಯಿತು. ಏಕೆಂದರೆ ತನ್ನ ಸ್ವಂತ ಊರಿನಲ್ಲಿ ಕೆಲವು ಮಂದಿ ರೋಗಿಗಳನ್ನು ಗುಣಮಾಡುವುದಕ್ಕೆ ಮನಸ್ಸುಳ್ಳವನಾಗಿದ್ದನು. ಅವರು ಅತನನ್ನು ನಂಬುವ ಹೋಗುದರಿಂದ ಹೀಗೆ ಮಾಡುವುದು ಅತನಿಗೆ ಸಾಧ್ಯವಾಗಲಲ್ಲ.

ನಾವು ದೇವರನ್ನು ನೋಡುವುದಕ್ಕೆ ನಿರೀಕ್ಷಿಸದಿರುವಂಥ ಅನೇಕ ಸ್ಥಳಗಳಲ್ಲಿ ಅತನಿರುತ್ತಾನೆ. ಅತನು ಹೂವುಗಳು, ಗಾಳಿ, ಮಳೆ, ಬಿಸಿಲು ಮುಂತಾದ ಸಾಮಾನ್ಯವನ್ನುಗಳ ಮೂಲಕವಾಗಿಯೂ ಸಾಮಾನ್ಯ ಜನಗಳ ಮೂಲಕವಾಗಿಯೂ ತನ್ನನ್ನು ಪ್ರಕಟಪಡಿಸಿಕೊಳ್ಳುತ್ತಾನೆ. ನಮಗೋಸ್ಕರವಾಗಿ ಕೆಲಸಮಾಡುವಂಥ ಮೂಗುವ್ರಾಣಿಗಳು ದೇವರ ವಿಷಯವಾದ ಯೋಚನೆಯನ್ನು ಪುಟ್ಟಿಸುತ್ತವೆ. ಬಡವರೂ ಕಷ್ಟಪಟ್ಟು ಕೆಲಸಮಾಡುವುದಕ್ಕಾಗಿ ಬರಾತ್ಕಾರಿಸಲ್ಪಟ್ಟಿರುವವರೂ ಮೊದರಾದ ಕೇವಲ ಸಾಮಾನ್ಯ ಜನಗಳೂ ಕೂಡ ತಾವು ತಿಳಿದುಕೊಳ್ಳದೆ ಇದ್ದರೂ ದೇವರಲ್ಲಿ ಬದುಕುತ್ತಾ ಚಲಿಸುತ್ತಾ ಇರುತ್ತಾನೆ.

ದೇವರು ದೃಶ್ಯವಸ್ತುಗಳ ಹಿಂದೆ ಮರೆಯಾಗಿರುವ ಕಾರಣ: ಈ ದಿನ ನಮ್ಮ ದೃಷ್ಟಿಗೆ ಗೋಚರವಾಗುವ ಎಲ್ಲಾ ವಸ್ತುಗಳನ್ನೂ ಎಲ್ಲಾ ಜನಗಳನ್ನೂ ತುಂಬಾ ಗೌರವದಿಂದ ನೋಡೋಣ.

ಒಂದು ಸಂತೋಷಸಮಾಜ.

ಅರಕಲಗೂಡಿನಲ್ಲಿ ತಾಲ್ಲೂಕು ಅಮಲ್ದಾರ್ರು ಮತ್ತು ಮ್ಯುನಿಸಿಪಲ್ ಪ್ರೆಸಿಡೆಂಟರೂ ಆದ ಮಿ॥ ಜೆ. ಬಿ. ಮಲ್ಲಾರಾಧ್ಯರವರಿಗೆ ಶಿವಮೊಗ್ಗಾ ತಾಲ್ಲೂಕಿಗೆ ವರ್ಗವಾದ್ದರಿಂದ ಇಲ್ಲಿನ ಮ್ಯುನಿಸಿಪಲ್ ಮೆಂಬರುಗಳೂ, ಪೌರ ಪ್ರಮುಖರೂ ಸೇರಿ ಒಂದು ಸಭೆಯನ್ನು ನಡಿಸಿ ಅಮಲ್ದಾರರಿಗೆ ಮರ್ಯಾದೆಯನ್ನು ನಡಿಸಿದರು. ಪ್ರೈಮರಿ ಸ್ಕೂಲು ಕಟ್ಟಡವು ಮನೋಹರವಾಗಿ ಶೃಂಗರಿಸಲ್ಪಟ್ಟಿತ್ತು. ಊರಿನ ಎಲ್ಲಾ ಜನರೂ ಕಿಕ್ಕಿರಿಯುವಂತೆ ನೇರಿದ್ದರು. ವಾದ್ಯಘೋಷದೊಡನೆ ಅಮಲ್ದಾರರನ್ನು ಕರೆತಂದರು. ಬಂದಿದ್ದ ನರ್ವರಿಗೂ ಉಪಾಹಾರವನ್ನು ಹುಟಿದ ಮೇರೆ ಎಲ್ಲರೂ ಮಂಗಳಕರವಾದ ಸಭೆಯಲ್ಲಿ ನೇರಿ, ಸ್ವಲ್ಪ ಕಾಲ ಮನೋಹರವಾದ ಸಂಗೀತವನ್ನು ಕೇಳಿ ಆನಂದಿಸಿದರು. ಅನಂತರ ಪ್ರೆಸಿಡೆಂಟ್ ಮಿ॥ ನಾಗಣ್ಣನವರು ಅಮಲ್ದಾರ್ರವರ ಗುಣಕಥನಮಾಡಿ ಗಂಧಪುಷ್ಪಾದಿಗಳಿಂದ ಮಿ॥ ಮಲ್ಲಾರಾಧ್ಯರವರನ್ನು ಸನ್ಮಾನಿಸಿದರು. ಮಿ॥ ಪುಟ್ಟಸಾಮಯ್ಯನವರು ಅಮಲ್ದಾರ್ರವರನ್ನು ಪ್ರಜೆಗಳ ಪರವಾಗಿ ವಂದಿಸಿ ಚಿಕ್ಕವಯಸ್ಸಿನವರೂ ವಿದ್ಯಾವಂತರೂ ಆದ ಇವರು ತಮ್ಮ ದಿವ್ಯಗುಣಗಳಿಂದ ನರ್ವರ ಮನಸ್ಸನ್ನೂ ತಮ್ಮ ಕಡೆಗೆ ಆಕರ್ಷಿಸಿಕೊಂಡಿರುತ್ತಾರೆಂದು ಮುಂತಾಗಿ ಭಾಷಣಮಾಡಿದರು. ಇದಾದ ಮೇರೆ ಅಮಲ್ದಾರ್ರವರು ಎದ್ದು ಪ್ರಜೆಗಳು ಮಾಡಿದ ಸನ್ಮಾನಕ್ಕೆ ಅವರನ್ನು ವಂದಿಸುವುದಕ್ಕೆ ಮೊದಲು ಈ ಊರಿನ ಜಮಾನ್ದಾರರಾದ ಮಿ॥ ಎ. ವಿ. ಸೂರ್ಯ [illegible]

ವಿಶೇಷ ಸಮಾಚಾರಗಳು

ಬರೋಡಾ ಸಂಸ್ಥಾನದ ಶ್ರೀಮನ್ಮಹಾರಾಜರವರು ಕಳೆದ ವಾರ ಬರೋಡಾ ರಾಜಧಾನಿಯಲ್ಲಿ ಬಹು ಮಂದಿ ಮುಖ್ಯ ಪ್ರಜೆಗಳ ಮಧ್ಯೆ ದಯಮಾಡಿ ಆರ್ಯ ಕುಮಾರಾಶ್ರಮ ಎಂಬ ಮಂದಿರವನ್ನು ತೆರೆದು ಪ್ರತಿಷ್ಠೆ ಮಾಡಿಸಿದರು. ಆ ಮಹಾ ಸಭೆಯು ಅಂತ್ಯಜರಲ್ಲಿ (ಪಂಚಮರಲ್ಲಿ) ತಮಗಿರುವ ಸಹಾನುಭೂತಿ ಪ್ರೀತಿಗಳನ್ನು ತೋರಿಸುವುದಕ್ಕಾಗಿ ನೇರಿದ್ದಿತು. ಆ ಸಮಯದಲ್ಲಿ ಗಾಯಕವಾಡ ಮಹಾರಾಜರವರು ಭಾಷಣ ಮಾಡುತ್ತಾ ಅಪ್ಪಣೆ ಕೊಡಿಸಿದ್ದೇನೆಂದರೆ—ಹಿಂದೂ ಜನಗಳು ಮರಣಾ ನಂತರ ಸಂಭವವಾಗುವ ವಿಚಾರವನ್ನು ಕುರಿತು ಪ್ರಸ್ತಾಪಿಸುವುದೇ ವಿಶೇಷ. ಪುನರ್ಜನ್ಮ ವಿಚಾರವಾಗಿಯೂ ಮಿತಿ ಇಲ್ಲದಷ್ಟು ಮಾತನಾಡುವರು. ಈ ರೋಕದ ಜೀವಿಕೆಯನ್ನು ಕುರಿತು ಅವರು ಯೋಚಿಸುವುದೂ ಪ್ರಸ್ತಾಪಿಸುವುದೂ ಬಹಳ ಸ್ವಲ್ಪವಾಗಿದೆ. ಆಮುಷ್ಮಿಕ ವಿಷಯವನ್ನು ಆಲೋಚನೆಗೆ ತೆಗೆದುಕೊಳ್ಳಬೇಕೆಂದು ನಾನೇನೂ ಹೇಳತಕ್ಕವನಾಗಿಲ್ಲ. ಆದರೆ ಐಹಿಕಜೀವಿಕೆಯನ್ನು ಅಲಕ್ಷ್ಯ ಮಾಡುವುದು ಎಷ್ಟು ಪಾತ್ರಕ್ಕೂ ಕರವಲ್ಲ. ಹಿಂದುಸ್ಥಾನದಲ್ಲಿ ಒಂದು ಜನಾಂಗವು ರೂಢಿಗೊಳ್ಳಬೇಕಾಗಿದ್ದಲ್ಲಿ ಈಗಿನಿಂದಲೂ ಬಗೆಬಗೆಯ ಕಂಗತಗಳಲ್ಲೆಲ್ಲಾ ಪರಸ್ಪರ ಪ್ರೀತಿಯೂ ಸ್ನೇಹವೂ ಬೆಳೆಯಲೇ ಬೇಕು. ಇಪರೋಕದಲ್ಲಿ ಮುಂದುವರಿದವರ ಸಮಕ್ಕೆ ಹಿಂದೆ ಬಿದ್ದಿರ

ಒಳದೇಶದ ವೃತ್ತಾಂತಗಳು

ಕಳೆದ ಶನಿವಾರ (ತಾ. 26) ರಾಜಧಾನಿಯಲ್ಲಿ ಒಂದಾವರ್ತಿ ಮರಣವಾಗಿಲ್ಲವೆಂದು ತಿಳಿದು ನಂತೋಷಿಸುತ್ತೇವೆ.

ಹೆಗ್ಗದೇವನಕೋಟೆ ತಾಲ್ಲೂಕು ಮಿ॥ ಎಂ. ಸುಬ್ಬರಾಯರು 20 ವರುಷಗಳಿಂದ ಪ್ರಜಾಪ್ರತಿನಿಧಿ ನಘೆಯ ಮೆಂಬರಾಗಿರುತ್ತಾರಾದ್ದರಿಂದ ಅವರಿಗೆ ಅರಮನೆ ದರ್ಬಾರುಗಳಲ್ಲಿ ಜಾನಾ ಹಾರಾ ಹಾಕಿನತಕ್ಕದ್ದೆಂದು ಅಪ್ಪಣೆ ಆಗಿರುತ್ತದೆ.

ಪಾಗಡಿಯಲ್ಲಿ ಜನವರಿ ತಾ. 27 ನೇ ಬುಧವಾರ ರಥೋತ್ಸವವು, ತಾ. 30 ನೇ ಶನಿವಾರ ಎತ್ತಿನ ಪರಿಷೆಯೂ ನಡೆದು ಒಳ್ಳೆಯ ರಾನುಗಳಿಗೆ ಬಹುಮಾನಗಳು ಕೊಡಲ್ಪಡುವಪೆಂದು ಕಾರ್ಯದರ್ಶಿ ಮಿ॥ ಕರಣೀಕ ಕೃಷ್ಣ ಮೂರ್ತಿರಾಯರು ತಿಳಿಸಲಪೇಕ್ಷಿಸುತ್ತಾರೆ.

ಶಿವಮೊಗ್ಗಾ ತಾಲ್ಲೂಕು ಸಿದ್ಧಾಪುರ ತಾಂಡಾದಲ್ಲಿ ಎಕ್ಸೈಸ್ ಅಧಿಕಾರಿಗಳು ಹಿಂದಿನ ಶನಿವಾರ ಲಂಬಾಣಿಗಳ ಜೋಪಡಿಗಳನ್ನು ಜಪ್ತಿಮಾಡಿ ಗುಟ್ಟಾಗಿ ತಯಾರ್ಮಾಡುತ್ತಿದ್ದ ಸಾರಾಯನ್ನು ಕಂಡುಹಿಡಿದು ನುಮಾರು ಮೂವತ್ತು ಮಂದಿಯನ್ನು ದನ್ನಗಿರಿಮಾಡಿದಾರೆಂದು ತಿಳಿಮಬಿರುತ್ತದೆ.

ಅರಮನೆ ಆಸ್ಥಾನ ಜ್ಯೋತಿಷ ವಿದ್ವಾ॥ ಮಟ್ಟಾ ಸಂಪತ್ಕುಮ್ಮಣ್ಣ ಜೋಸ್ಯರು ಪ್ರವೃತಿಯಂತೆ ಅಕ್ಷಯ ಸಂವತ್ಸರದ ಸಿದ್ಧಾಂತ ಮತ್ತು ಪಾಕ್ಯ ಪಂಚಾಂಗವನ್ನು ಗುಣಿಸಿ ಮಿ॥ ಕೆ. ನರಸಿಂಹಮ್ಯನವರ ಪ್ರೆಸ್ಸಿನಲ್ಲಿ ಸ್ಪುಟವಾಗಿಯೂ ಅಂದವಾಗಿಯೂ ಮುದ್ರಿಸಿ ನಮಗೊಂದು ಪ್ರತಿಯನ್ನು ಕಳುಹಿಸಿರುವುದಕ್ಕಾಗಿ ಅವರನ್ನು ವಂದಿಸುತ್ತೇವೆ. ಈ ಪಂಚಾಂಗಕ್ಕೆ ಕ್ರಯ 2 ಆಣೆ.

ಒಬ್ಬ ಬಾತ್ಮಿದಾರರಿಂದ–ನೆಲಮಂಗಲ ತಾಲ್ಲೂಕು ಕನಮಾ ಹೋಬಳಿ ಮಡಲಕೋಟೆ ಗ್ರಾಮದ ಧರ್ಮದರ್ಶಿ ಮಿ॥ ಕೆಂಕರಂಗೇಗೌಡರವರು ಆ ಗ್ರಾಮದಲ್ಲಿ ಸಿಥಿಲವಾಗಿದ್ದ ಶ್ರೀ ಗೋಪಾಲ ಕೃಷ್ಣಸ್ವಾಮಿ ದೇವಸ್ಥಾನವನ್ನು ಹಾತರಾಗೋಡಿಸಿಂದ 1,500 ರೂಪಾಯಿ ತನಕ ಖರ್ಚು ಮಾಡಿ ಜೀರ್ಣೋದ್ಧಾರ ಮಾಡಿಸಿರುತ್ತಾರೆ. ಈ ಧರ್ಮಕಾರ್ಯವು ನಮ್ಮ ಪ್ರಾಂತ್ಯದಲ್ಲಿ ಬಹಳ ಸ್ತೋತ್ರಾರ್ಹವಾಗಿರುತ್ತ.

ಒಬ್ಬ ಬಾತ್ಮಿದಾರರಿಂದ–ರಾಜಧಾನಿಯಲ್ಲಿರುವ ಕೊಳ್ಳೇಗಾಲದ ಹೆಗ್ಗೆರೆ ಪರ್ಮೆಂಟಾರ್ ಮಿ॥ ವಿ. ಆರ್. ಶ್ರೀನಿವಾನಯ್ಯಂಗಾರ್ರವರ ಧರ್ಮಪತ್ನಿ ಸೌ॥ ಯಸ್. ಜೂಡಾಮಣಿಯಮ್ಮನವರು ಒಂದು ತಿಂಗಳಿಂದಲೂ ಬೇಯಿರೆ ಯಾಗಿರುವುದು ನಂತಾಪಕರವಾಗಿದ್ದು ಮಿ॥ ಟಿ. ಸಿ. ನಟರಾಜ್‌ರವರು ಬಹಳ ಮುತುವರ್ಜಿಯಾಗಿ ಚಿಕಿತ್ಸೆ ಮಾಮುತ್ತಿರುವುದರಿಂದ ಈಚೀಚೆಗೆ ಸ್ವಲ್ಪ ಗುಣ ಕಂಡುಬರುತ್ತಿದೆ. ಪ್ರಹಾ ಹಿತಚಿಂತಕರೂ ಧರ್ಮಬುದ್ಧಿಯುಳ್ಳವರೂ ಆದ ಇವರು ಜಾಗ್ರತೆ ಆರೋಗ್ಯಹೊಂದಲೆಂದು ಹಾರೈಸುತ್ತೇವೆ.

ಡಾ॥ ಕೊರವಂಡ್ರು ಅಪ್ಪಯ್ಯನವರು ಕಳೆದ ಶನಿವಾರ (ತಾ. 19) 74 ನೇ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಮೈನೂರು ವೈದ್ಯ ಇಲಾಖೆಯಲ್ಲಿ ಅನೇಕ ವರುಷ ಶ್ರೇಷ್ಠ ವಾದ ಸರ್ವಿಸ್ ಮಾಡಿ, ಅರಮನೆ ಡಾಕ್ಟರಾಗಿದ್ದು ರೀಟೈರಾದರು. ಒಳ್ಳೇ ವೈದ್ಯರೆಂಬು ಹೆಸರು ಪಡೆದಿದ್ದರು. ಇವರು ಕೊಡಗಿನಲ್ಲೂ ಮೈಸೂರಿನಲ್ಲೂ ಬಡವರಿಗೆ ಹಿತಕರವಾದ ಧರ್ಮಕಾರ್ಯವನ್ನು ನಡಿನಲು ತಮ್ಮ ಆಸ್ತಿಯಲ್ಲಿ [illegible] ಹೇಳಿಕೆ ಕೊಟ್ಟಿದ್ದಾರೆಂದು ಕೇಳಿಬರುತ್ತದೆ.

ಮೈಸೂರು ಮಹಾರಾಜರವರ ಗವರ್ನ್‌ಮೆಂಟ್ ಕೊರೆಯೇಟ್‌ಹೈ ಸ್ಕೂಲಿನಲ್ಲಿ ಸ್ಕೂಲ್ ಫೈನಲ್ ಎಂಬ ನಂತೋಷೋತ್ಪಾದಕ ಪರೀಕ್ಷೆಯು ಜನವರಿ ತಾ. 31 ನೇ ತಾರೀಖಿನಿಂದ ಪ್ರಾರಂಭವಾರ ನಡೆಯುವಂತೆ ನಿಶ್ಚರ್ಪೆಯಾಗಿದೆ. ಅದಕ್ಕಾಗಿ ಮಾಪೆ ವಿದ್ಯಾರ್ಥಿಗಳೂ ವಿದ್ಯಾರ್ಥಿಗಳ ಹಿತೈಷಿಗಳೂ ಪೋಷಕರೂ ದ್ರವ್ಯ ಸಹಾಯಮಾಡಬೇಕೆಂದು ಸೆಕ್ರೆಟರಿ ಮಿ॥ ಬಿ. ವೆಂಕಟರಾಮಯ್ಯನವರು ತಿಳಿಸಲಪೇಕ್ಷಿಸುತ್ತಾರೆ. ಚಂದಾ ಹಣವನ್ನು ಮಿ॥ ಕೆ. ವೆಂಕಟಸಾಮಿ ಅಯ್ಯರ್, ತುಮಕೂರು ಎಂಬೀ ವಿಳಾ ಸಕ್ಕೆ ಕಳುಹಿಸತಕ್ಕದ್ದಾಗಿದೆ.

ಮೈನೂರು ಸಂಸ್ಥಾನದ ರಾಯರುಗಳ ಮಹಾನಭೆಯು ಈ ಸಲ ತುಮಕೂರಿನಲ್ಲಿ ಬರುವ ಏಪ್ರೆಲ್ ತಿಂಗಳಲ್ಲಿ ನಡೆಯುವುದಾಗಿದೆ. ಸಂಸ್ಥಾನಾಮಳೆ ರಾಯರ್ ಸಂಘಗಳವರು ಅಧ್ಯಕ್ಷರನ್ನು ಚುನಾವಣೆಮಾಡಿ ಜನವರಿ ತಾ. 5 ರೊಳಗೆ ತುಮಕೂರು ರಾ ಅಸೋಸಿಯೇಷನ್ ಸೆಕ್ರೆಟರಿ ಮಿ॥ ಡಿ. ರಾಮಯ್ಯನವರಿಗೆ ತಿಳಿಸಲಪೇಕ್ಷಿಸುತ್ತಾರೆ. ರಿಸೆಪ್ಷನ್ ಕಮಿಟಿ ಮೆಂಬರುಗಳ ಫೀ 5 ರಿಂದ 10 ರೂ; ಪ್ರತಿನಿಧಿಗಳ ಫೀ ರೂ. 1. ಸಂಸ್ಥಾನಾಮಳೆ ರಾಯರುಗಳೆಲ್ಲಾ ಈ ಮಹಾನಭೆಗೆ ಸಹಾಯಕರಾಗಿ ನಂತು ನಡಿನಬೇಕೆಂದು ಕೋರಲಾಗಿದೆ.

ಶ್ರೀಮನ್ಮಹಾರಾಜರವರು ಅರಮನೆ ರಾಣೀವಾನದವರ ಸಮೇತ ಕಳೆದ ಗುರುವಾರ (ತಾ. 24) ಮಧ್ಯಾಹ್ನ 4-45 ಘಂಟೆಗೆ ರಾಜಧಾನಿಯಿಂದ ಸ್ಪೆಷಲ್ ರೈಲಿನಲ್ಲಿ ದಯವಾಡಿ ಬೆಂಗಳೂರು ಗುಂತಕಲ್ಲು ಮಾರ್ಗವಾಗಿ ಬೊಂಬಾಯಿಗೆ ಚಿತ್ತೈಸಿದರು. ಅವರು ಅಲ್ಲಿ ನುಮಾರು ಮೂರು ವಾರಗಳ ತನಕ ಇದ್ದು ಅಲ್ಲಿಂದ ಉತ್ತರ ದೇಶದ ಕೆಲವು ನಗರಗಳಲ್ಲಿ ಸಂಚಾರ ಮಾಡುತ್ತಾರೆಂದೂ, ಅವರು ಪಾಪನು ರಾಜಧಾನಿಗೆ ದಯಮಾಡಲು ನುಮಾರು ಎರಡೂವರೆ ತಿಂಗಳಾಗುವುದೆಂದೂ ಕೇಳುತ್ತೇವೆ. ಅವರ ಜೊತೆಯಲ್ಲಿ ಸರ್ದಾರರೂ ಏಡಿಕಾಂಗರೂ ಪ್ರೈವೇಟ್ ಸೆಕ್ರೆಟರಿಯವರೂ ದಯಮಾಡಿದಾರೆ. ಆ ದಿನ ರಾಜಧಾನಿಯ ರೈಲ್ವೆ ಸ್ಟೇಷನ್‌ನಲ್ಲಿ ಶ್ರೀಮದ್ಯುವರಾಜರವರೂ ರಾಜಪಿಂತೆಯವರೂ ಕೆಲವು ಅಧಿಕಾರಿಗಳೂ ಹಾಜರಿದ್ದರು. ಮ್ಯುನಿಸಿಪಲ್ ಪ್ರೆಸಿಡೆಂಟ್ ಮಿ॥ ಎಸ್. ಮಾಧವರಾಯರು ಶ್ರೀಮನ್ಮಹಾರಾಜರವರಿಗೆ ಹಾರಾ ತುರಾಯಿಗಳನ್ನೊಪ್ಪಿಸಿದರು.

ವಾಣೀವಿಲಾಸ ನಾಗರದ ನೀರಾವರಿ.

ಸರ್ಕಾರದವರು ಮಾಡಿರುವ ಪುನರ್ವ್ಯವಸ್ಥೆಯು.

ವಾಣೀವಿಲಾಸ ನಾಗರದ ಕೆಳಗೆ "ಬ್ಲಾಕ್ ಸಿಸ್ಟಮ್" ನೀರಾವರಿ ಕ್ರಮವು ಜೇರಿಗೆ ರೈತರುಗಳ ವಿಷಯದಲ್ಲಿ ವಿಧಾಯಕವಾಗಿದ್ದ, ಕೆಲವು ನಿರ್ಬಂಧಗಳನ್ನು ಕೆಗೆದುಹಾಕಬೇಕೆಂಬುದಾಗಿ 1925 ನೇ ಇಸವಿ ಜೂಲೈ 13 ನೆಯ ದಿನಾಂಕದಿನ ಸರ್ಕಾರಿ ಹುಕುಮಿನಲ್ಲಿ ಸರ್ಕಾರದವರು ಅಪ್ಪಣೆ ಮಾಡಿದ್ದರು. ಅಲ್ಲದೆ ಈ ರಿಯಾಯಿತಿಯನ್ನು ಕೋರಿಸಿರುವ ಕಾರಣದಿಂದಲೂ ಮಳೆಗಾಲದ ಮತ್ತು ಬೇಸಿಗೆ ಕಾಲದ ಫಸಲುಗಳಿಗಾಗಿ ತಪ್ಪದೆ ನೀರಾವರಿಯು ನತೆಯುವಂತಾಪುದರಿಂದಲೂ 1925 ನೇ ಇಸವಿ ಜುಲೈ 1 ನೇ ತಾರೀಖು ರಾಗಾಯಿತು ಐದು ವರುಷಗಳ ಕಾಲ ನೀರಾವರಿ ತೆರಿಗೆಯನ್ನು ಎಕರೆ ಒಂದಕ್ಕೆ 5 ರೂಪಾಯಿಗಳಿಂದ 8 ರೂಪಾಯಿಗಳಿಗೆ ಹೆಚ್ಚಿನಬೇಕೆಂಮೂ ಸಹ ಸರ್ಕಾರದವರು ಅಪ್ಪಣೆ ಮಾಡಿದ್ದರು. ಚೀಫ್ ಇಂಜನಿಯರವರ ಅಭಿಪ್ರಾಯದ ಮೇರೆಗೆ ಈ ಕೆಲಸ ಕೆಳಗಿನ ಅಚ್ಚಕಟ್ಟು ಪ್ರದೇಶವು 10,180 ಎಕರೆ ಗಳೆಂಬುದಾಗಿ ವಿಧಾಯಕ ಮಾಡರಾಯಿತು.

ಮಿ॥ ಡಿ. ಹೆಚ್. ಚಂದ್ರಶೇಕರಯ್ಯನವರು 1925 ನೇ ಇಸವಿ ಸೆಪ್ಟಂಬರ್ 7 ನೇ ತಾರೀಖಿನಲ್ಲಿ ನಡೆದ ನ್ಯಾಯವಿಧಾಯಕ ನಭೆಯ ಅಧಿವೇಶನದಲ್ಲಿ– (1) ನೀರಾವರಿ ತೆರಿಗೆಯನ್ನು ಎಕರೆಯೊಂದಕ್ಕೆ 5 ರೂಪಾಯಿಗಳಿಗೆ ತಗ್ಗಿನ ಬೇಕೆಂದೂ, (2) ಸಾಗುವಳಿಯ ಪ್ರದೇಶವನ್ನು 10,180 ಎಕರೆಗಳಿಂದ 12,000 ಎಕರೆಗಳಿಗೆ ಹೆಚ್ಚಿನಬೇಕೆಂದೂ, (3) ಸಾಗುವಳಿ ಪ್ರದೇಶವಿಂದ

ಇಂಡಿಯಾ ದೇಶದ ವೃತ್ತಾಂತಗಳು

ಇಂಗ್ಲಾಂಡಿನಲ್ಲಿರುವ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚನಾ ನಭೆಯಲ್ಲಿ ಮೆಂಬರಾಗಿರುವ ಸರ್ ಪಿ. ರಾಜಗೋಪಾಲಾಚಾರ್ಯಿರವರು ತಮ್ಮ ದೇಹಾರೋಗ್ಯದ ನಿಮಿತ್ತ ಆ ಮೆಂಬರುತನಕ್ಕೆ ರಾಜೀನಾಮೆ ಕೊಟ್ಟು ಇಂಗ್ಲಾಂಡಿನಿಂದ ಮೊನ್ನೆ ನೋಮವಾರ ಪಾಹನು ಏಂದಿದಾರೆ.

ಅಲಘದದ ಮುಸ್ಲಿಮ್ ಯೂನಿವರ್ಸಿಟಿ ಫಂಡಿಗೆ ಪಾಟಿಯಾಲಾ ಮಹಾರಾಜರವರು 10,000 ರೂಪಾಯಿ, ಟೋಂಕ್ ಸಂಸ್ಥಾನದ ನವಾಬರವರು 5,000 ರೂಪಾಯಿ, ಮಾಲೇರ ಕೋಟ್ಲಾ ಜಮೀರ್‌ದಾರರುಗಳು 20,000 ರೂ., ಮಾಲೇರ ಕೋಟ್ಲಾ ನವಾಬರವರು 10,000 ರೂಪಾಯಿ, ಈ ರೀತಿ ಚಂದಾ ಕೊಟ್ಟಿದ್ದಾರೆಂಮ ಪ್ರಕಟವಾಗಿದೆ.

ಕಳೆದ ವಾರ ಮದರಾಸ್ ಪಟ್ಟಣದ ಟಿಂತಾದ್ರಿಪೇಟೆಯಲ್ಲಿ ಸಾಧುಗಳ ಮಹಾನಭೆಯೊಂದು ನಡೆಯಿತು. ನೂರಾರು ಮಂದಿ ಸಾಧುಗಳು ಸೇರಿ ಮೂರು ದಿನ ಆಧ್ಯಾತ್ಮಿಕ ಸಂಬಂಧವಾದ ಉಪನ್ಯಾನಗಳನ್ನು ಮಾಡಿದರು. ಭಾನುವಾರದ ದಿನ ಸಾವಿರಾರು ಬಡಪ್ರಜೆಗಳಿಗೆ ಅನ್ನದಾನ ನಡೆಯಿತು. ರಿವರ್ಸ್ ಬಹದೂರ್ ಎಸ್. ಭಾವಾನಂದಂ ಪಿಳ್ಳೆ, ಬಿ. ಎಸ್. ಒ. ರವರು ಸಾಧುಗಳಿಗೆ ಹೂನ ವಸ್ತ್ರಗಳನ್ನು ಕೊಡಿಸಿ ನಂತೋಷಪಡಿಸಿದರು.

ವಾಯವ್ಯ ಪ್ರಾಂತ್ಯಕ್ಕೆ ಸೇರಿದ ಪಾನಿಪಾ ಎಂಬ ಸ್ಥಳದಲ್ಲಿ ಒಂದು ಭಾರೀ ಡಕಾಯಿತಿ ನಡೆದು ಪೋಲೀಸಿನವರು 93 ಜನರನ್ನು ಹಿಡಿದು ಅವರ ಮೇಲೆ ಮೊಕದ್ದಮೆ ಹೂಡಿದ್ದರು. ಸೆಷನ್ಸ್ ಜಡ್ಜರಾದ ಮಿ॥ ಅಗರನಾಥ ಮುಖರ್ಜಿಯವರು ಒಂಭತ್ತು ತಿಂಗಳಿಂದ ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ ಕಳೆದ ವಾರ ಜಡ್ಜಮೆಂಟು ಜೇಳಿದರು. ಅಪರಾಧಿಗಳಲ್ಲಿ 5 ಮಂದಿಗೆ ಖುರಾನ್ ಆಯಿತು. 55 ಜನರಿಗೆ ಬಂಕೋರ್ ಶಿಕ್ಷೆಯೂ, 25 ಜನರಿಗೆ ತರಾ 10 ವರುಷ ಕಠಿಣ ಸಜಾ ಶಿಕ್ಷೆಯೂ ವಿಧಿನಲ್ಪಟ್ಟಿದೆ.

ಗುತ್ತಿ ಟರ್ಮಿನಲ್ಲಿ ಲಂಡಕ್ ಮಿರ್ಜ ಹೈ ಸ್ಕೂರ್ ಹೆಡ್ ಮಾಸ್ಟರ್ ಮಿ॥ ವೆಂಕಟರಾಮು ಅಯ್ಯರವರು ಕಳೆದ ಶನಿವಾರ ನಮಮಧ್ಯಾಹ್ನ ಭೋಜನ ಮಾಡಿ ಹಾನಿಗೇ ಮೇಲೆ ಮಲಗಿರುವಾಗ್ಗೆ ಮಾಳಿಗೆಯ ಮೇಲೆ ಆಳುಗಳು ಧಾನ್ಯವನ್ನು ಬಿಡಿಮಿ ರೇಪೆಮಾಮುತ್ತಿರುವಲ್ಲಿ ಆ ಮಾಳಿಗೆಯು ಅಕಸ್ಮಾತ್ತಾಗಿ ಬಿದ್ದು ಮಿ॥ ಅಯ್ಯರು ಅವರ ಕೆಳಗೆ ಸಿಕ್ಕಿ ಮೃತಪಟ್ಟರು. ಮೂವತ್ತು ವರುಷಗಳಿಂದ ಭಕ್ತಿಯಾಗಿಯೂ ಶ್ರದ್ಧೆಯಿಂದಲೂ ಮಕ್ಕಳನ್ನು ತರಪೇತು ಮಾಡುತ್ತಿದ್ದ ಆತನಿಗೆ ಅಕಾಲ ಮರಣ ಪ್ರಾಪ್ತವಾದದ್ದು ವಿಷಾದಕರವಾಗಿದೆ.

ಕಾಶ್ಮೀರದಲ್ಲಿ ಮಿ॥ ಎಂ. ಕೆ. ಗಾಂಧಿಯವರು ಹಿಂದುಸ್ಥಾನದ ನ್ವದೇಶೀ ಬಟ್ಟೆಬರೆ ಮುಂತಾದ ವಸ್ತುಗಳ ಪ್ರದರ್ಶನ ಶಾಲೆಯನ್ನು ಕಳೆದ ವಾರ ಪ್ರಾರಂಭಮಾಡಿದರು. ಆ ಸಮಯದಲ್ಲಿ ಅವರು ಭಾಷಣಮಾಮುತ್ತಾ ಹೇಳಿದ್ದೇನೆಂದರೆ–ನನಗೆ ಬದ್ಧರಿನ ಹುಚ್ಚು ಹಿಡಿದಿದೆ. ನನ್ನ ಕನಸಿನಲ್ಲೂ ಬಾಧಿಯೇ ಆಗಿದೆ. ಪ್ರಪಂಚದ ಇನ್ಯಾವ ವಸ್ತುವಿನ ಮೇಲೂ ನನಗೆ ಅಭಿರುಚಿಯಿಲ್ಲ. ಜನಗಳು ಮಾತ್ರ ಪರದೇಶೀಯ ಮತ್ತು ಮಿಲ್ ಬಟ್ಟೆಗಳನ್ನು ತ್ಯಜಿಸಿದ ಪಕ್ಷದಲ್ಲಿ ಹಿಂದೂ ಮಹಮದೀಯರು ಒಂದಾಗದೆ ಹೋದಾಗ್ಯೂ ಒಂದು ವರುಷ ದೊಳಗಾಗಿ ನ್ವರಾಜ್ಯ ದೊರಕುವುದು. ಏದ್ದರ್ ಬಟ್ಟೆ ಧರಿಸಿದಲ್ಲಿ ಅವರದು ಪಂಗಡದವರೂ ಜಗಳವಾಡಲಾರರೆಂದು ನೆನುತ್ತೇನೆ ಎಂದು ಹೇಳಿದರು.

[illegible] ಸಿಕೊಳ್ಳತಕ್ಕ ಅಧಿಕಾರವನ್ನು ಚಿತ್ರದುರ್ಗದ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಗೆ ಕೊಡಬೇಕೆಂಮೂ, ಇದಕ್ಕನುನಾರವಾಗಿ ಈ ಮೇಲ್ಕಂಡ ನರ್ಕಾರಿ ಹುಕುಮನ್ನು ತಿದ್ದುಪಾಟು ಮಾಡಬೇಕೆಂಮೂ ಒಂದು ನಿರ್ಣಯವನ್ನು ನೂಚಿಸಿದ್ದರು. 1925 ನೇ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ನಡೆದ ಪ್ರಹಾಪ್ರತಿನಿಧಿ ನಭೆಯ ದನರಾ ಅಧಿವೇಶನದಲ್ಲಿಯೂ ನಹ ಇದೇ ವಿಧವಾದ ನಿರ್ಣಯವು ನೂಚಿನಲ್ಪಟ್ಟಿತು. ನರ್ಕಾರದವರು ಹೆಚ್ಚು ದರದ ನೀರಾವರಿಯ ತೆರಿಗೆಯನ್ನು ವಿಧಾಯಕಮಾಡಿರುವುದು ಯುಕ್ತವಾಗಿದೆಯೆಂಬುದನ್ನು ಈ ಎರಡು ನಂದರ್ಭಗಳಲ್ಲಿಯೂ ತಿಳಿಸಿರುತ್ತಾರೆ. ಆದಾಗ್ಯೂ ಈ ವಿಚಾರದಲ್ಲಿ ಅರಿಕೆಗಳಿರುವುದರಿಂದ ಇದಕ್ಕೆ ನಂಬಂಧಪಟ್ಟ ರೈತರುಗಳು ತಮಗೆ ಯಾವ ಯಾವ ಪ್ರತ್ಯೇಕ ತೊಂದರೆಗಳುಂಟಾಗಿರುವುದೆಂಬುದನ್ನು ನರ್ಕಾರದವರ ಗಮನಕ್ಕೆ ತರುವ ದಾದರೆ ರಿಯಾಯಿತಿ ತರೀಖು ಈ ವಿಚಾರವೆಲ್ಲವನ್ನೂ ಪುನಃ ಪರ್ಯಾಲೋಚಿನುವುದಾಗಿ ನರ್ಕಾರದವರು ವಾಗ್ದಾನ ಮಾಡಿದ್ದರು.

ಎಕರೆಯೊಂದಕ್ಕೆ ಐದು ರೂಪಾಯಿನಂತೆಯೇ ನೀರಾವರಿ ತೆರಿಗೆಯನ್ನು ಹಾಕಬೇಕೆಂಬುವಾಗಿ ವಾಣೀವಿಲಾನ ನಾಗರದ ಕೆಳಗೆ ಜಮೀನುಗಳನ್ನು ಪಡೆದಿರತಕ್ಕ ರೈತರುಗಳಿಂದ ಅನೇಕ ಅರ್ಜಿಗಳು ಬಂದಿರುತ್ತವೆ. ಈ ನಂಬಂಧದಲ್ಲಿ ಕೆಲವು ಪ್ರತಿನಿಧಿಗಳು 1925 ನೇ ಇಸವಿ ಅಕ್ಟೋಬರ್ 6 ನೇ ತಾರೀಖಿನ ದಿವಸ ಮೈನೂರಿನಲ್ಲಿ ದಿವಾನರವರ ಭೇಟಿಯನ್ನು ಪಡೆದು ಕೂಲಿಯವರನ್ನು ದೊರಕಿಸಿಕೊಳ್ಳಲು ತಮಗೆ ವಿಶೇಷ ತೊಂದರೆಗಳಿದ್ದುದಾಗಿಯೂ, ನದರಿ ಪ್ರದೇಶದಲ್ಲಿನ ಅನೇಕ ಭಾಗಗಳು ಫಲವತ್ತಾಗಿಲ್ಲದೆಂದೂ, ಎಕರೆ ಒಂದಕ್ಕೆ 3 ರೂಪಾಯಿನಷ್ಟು ನೀರಾವರಿ ತೆರಿಗೆಯನ್ನು ತಟಕ್ಕನೆ ಹೆಚ್ಚು ಮಾಡಿರುವುದರಿಂದಲೂ ನದರಿ ಪ್ರದೇಶದಲ್ಲಿ ಈಗಾಗಲೇ ನೆಲಸಿರತಕ್ಕವರಿಗೆ ವಿಶೇಷ ತೊಂದರೆಯೂ ಅನಾನುಕೂಲವೂ ಉಂಟಾಗಿರುವುದಾಗಿಯೂ ದಿವಾನರವರಲ್ಲಿ ಅರಿಕೆ ಮಾಡಿಕೊಂಡರು.

ಈ ವಿಷಯವೆಲ್ಲವನ್ನೂ ಸರ್ಕಾರದವರು ಸಾವಧಾನವಾಗಿ ಪರ್ಯಾಲೋಚಿಸಿ, ರೈತರುಗಳ ಅರಿಕೆಗಳನ್ನೂ ಪರಿಶೀಲಿಸಿರುತ್ತಾರೆ. ಅಲ್ಲದೆ ದಿವಾನ್ಯೂ ಕಮಿಷನರವರೊಂದಿಗೆ ಆಲೋಚನೆ ಮಾಡಿ 1925 ನ್ನೇ ಇನವಿ ಜೂಲೈ 1 ನೆಯ ತಾರೀಖಿನ ರಾಗಾಯಿತು 3 ವರುಷಗಳ ಕಾಲ ವಾಣೀವಿಲಾನ ನಾಗರದ ಕೆಳಗಿರತಕ್ಕ ಜಮೀನಿನ ವಿಷಯದಲ್ಲಿ ನೀರಾವರಿ ತೆರಿಗೆಯು ಎಕರೆ ಒಂದಕ್ಕೆ 6¼ ರೂಪಾಯಿಗಳಿಂತೆಯೂ, ಅನಂತರ ಐದು ವರುಷಗಳ ವರೆಗೆ ಎಕರೆಯೊಂದಕ್ಕೆ 8 ರೂಪಾಯಿಗಳಿಂತೆಯೂ ಇರತಕ್ಕುದೆಂದು ನರ್ಕಾರದವರು ಅಪ್ಪಣೆ ಮಾಡಿರುತ್ತಾರೆ. ಈ ಅವಧಿಯು ಕಳೆಯುವ ಮೇರೆಗೆ ನದರಿ ಪ್ರದೇಶದ ರೀ ಸೆಟ್ಲ್‌ಮೆಂಟ್ ಕೆಲನವೂ, ಹಿರಿಯೂರು ತಾಲ್ಲೂಕಿನ ರೀ ಸೆಟ್ಲ್‌ಮೆಂಟೂ ಪೂರ್ತಿನಿರಾತ್ತವೆ.

ನದರಿ ನಾಗುವಳಿ ಪ್ರದೇಶದಿಂದ ಜಮೀನನ್ನು ವಜಾ ಮಾಡತಕ್ಕ ಅಥವಾ ಈ ಪ್ರದೇಶದೊಂದಿಗೆ ನೇರಿನಿಕೊಳ್ಳತಕ್ಕ ಅಧಿಕಾರವನ್ನು ಪಬ್ಲಿಕ್ ವರ್ಕ್ಸ್ ಇರಾಖೆಯ ಆಫೀನರುಗಳು ಚಿತ್ರದುರ್ಗದ ಡೆಪ್ಯುಟಿ ಕಮಿಷನರ ನಮ್ಮತಿಯೊಂದಿಗೆ ಚರಾಯಿನಬೇಕೆಂದು ನರ್ಕಾರದವರು ಅಪ್ಪಣೆ ಮಾಡಿರುತ್ತಾರೆ. ಈಗಿನ ಸ್ಥಿತಿಯು ಬದರಾಯಿನಿರುತ್ತದೆ. ಹಾಲ ಇರತಕ್ಕ ಸ್ಥಿತಿಯಲ್ಲಿ ಜಲಾಶಯದಲ್ಲಿ ನಿಲ್ಲತಕ್ಕ ನೀರಿನ ಕರಿಮಾಣವನ್ನು ಗಮನದಲ್ಲಿಟ್ಟುಕೊಂಡು ನಾಗುವಳಿಯ ಒಟ್ಟು ವಿಸ್ತೀರ್ಣವು 10,180 ಎಕರೆಗಳಾಗಿರತಕ್ಕುದೆಂದು ವಿಧಾಯಕ ಮಾಡಲ್ಪಟ್ಟಿದೆ. ನಾಗುವಳಿಯ ಒಟ್ಟು ವಿಸ್ತೀರ್ಣವನ್ನು ಇದಕ್ಕಿಂತ ಹೆಚ್ಚಿನಕೂಡುಮ.

ಈ ನರ್ಕಾರಿ ಹುಕುಮಿಗನುಗುಣವಾಗಿ ಚೆಫ್ಯುಟಿ ಕಮಿಷನರವರು ಅವಶ್ಯಕವಾದ ಇನ್ಸ್ಪೆಕ್ಷಾರ್ನಾಮೆಯನ್ನು ಇದಕ್ಕೆ ನಂಬಂಧಪಟ್ಟ ಗ್ರಾಮಗಳಲ್ಲೆಲ್ಲಾ ಪ್ರಕಟನಬೇಕೆಂಬುದಾಗಿ ಕೋರರಾಗಿದೆ. ಅಲ್ಲದೆ ಇವರು ಹುಜೂರು ದವಾ ಬಂದಿಯ ಕಾಲವಲ್ಲಿ ನದರಿ ನೀರಾವರಿಯ ದರಗಳನ್ನು ಪ್ರಕಟಪಡಿನಲು ತಕ್ಕ ಏರ್ಪಾಡುಗಳನ್ನು ನಡಿನತಕ್ಕುದು.

ಮೈನೂರು ಸ್ಕೌಟ್ ಮೀಟಿಂಗು.

ಶ್ರೀಮದ್ಯುವರಾಜರವರು ಬಹುಮಾನಗಳನ್ನು ವಿನಿಯೋಗಿಸಿದರು.

ರಾಜಧಾನಿಯ ಸ್ಕೌಟ್ ಟ್ರೂಪುಗಳ ರ್ಯಾಲಿಯು ಶ್ರೀಮದ್ಯುವರಾಜರವರ ಅಧ್ಯಕ್ಷತೆಯಲ್ಲಿ ಕಳೆದ ತಾ. 22 ನೇ ಮಂಗಳವಾರ ನಾಯಂಕಾಲ ಮಹಾರಾಜಾ ಕಾಲೇಜ್ ಮೈದಾನಿನಲ್ಲಿ ಬಹಳ ಆಹ್ಲಾದಕರವಾಗಿ ನಡೆಯಿತು. ರಾಜಧಾನಿಯಲ್ಲಿರುವ ಅಧಿಕಾರಿಗಳೂ ಆರನುಗಳೂ ಪ್ರಜಾಪ್ರಮುಖರೂ ನೂರಾರು ಮಂದಿ ಹಾಜರಾಗಿದ್ದರು. ಸ್ಕೌಟ್ ವಿನೋದಗಳು ನಡೆದ ಬಳಿಕ ಮಿ॥ ಕೆ. ಎಸ್. ವೆಂಕಟನುಬ್ಬಾಶಾಸ್ತ್ರಿಗಳು ಸ್ಕೌಟ್ ವೀಕ್ ರಿಪೋರ್ಟನ್ನೂ ಡಾ॥ ಸೀರ್‌ರವರು ನುಪಾಗಮನ ನೂಚಕವಾದ ಅತ್ತೆನ್ನನ್ನೂ ಶ್ರೀಮದ್ಯುವರಾಜರವರ ನಮ್ಮುಖದಲ್ಲಿ ಅರಿಕೆಮಾಡಿ ಅವರಿಗೆ ಒಪ್ಪಿಸಿದರು.

ಶ್ರೀಮದ್ಯುವರಾಜರವ

ತಾರೀಖು ತೋರಿಸುವ ಗಡಿಯಾರ

ಬಹಳ ಖರಾರ್ವಾಕಾ ಕಾಲವನ್ನು ತೋರಿಸುತ್ತೆ, ಎರಡು ವರುಷಗಳು ಜಾಮೀರ್. ಶಾಶ್ವತವಾಗಿ ತಾರೀಖುಗಳನ್ನು ತೋರಿಸುವಂಥಾದ್ದು. ಉಷ್ಣ ಮಾಪಕ ಯಂತ್ರಸಹಿತವಾಗಿದೆ. ಮೆಮೊ ಹಲಿಗೆಯುಳ್ಳದ್ದು. ನಿಜವಾಗಿಯೂ ಅಪ್ಪ. ರೂ. 5-8-0 ಮಾತ್ರ. ಸೈಜ್ 9×6½ ಅಂಗುಲ.



ಪ್ರಪಂಚದಲ್ಲೆಲ್ಲಾ ಖ್ಯಾತಿಗೊಂಡ ಟೈಂ ಪೀಸ್. ಎರಡು ವರುಷ ಜಾಮೀರ್. ರೂ. 2-8-0 ಮಾತ್ರ.

ಏಜಂಟರು ಬೇಕು. ಈ ವಿಳಾಸಕ್ಕೆ ಬರೆಯಿರಿ :—

ವೀನಸ್ ಟ್ರೇಡಿಂಗ್ ಕಂಪನಿ,

[2-5] ಪೋಸ್ಟ್ ಬಾಕ್ಸ್ 325, ಮೌಂಟ್ ರೋಡ್, ಮದರಾಸ್.

ಷೇರು ಮತ್ತು ಲೋಕ್ ಬಾಂಡುಗಳು

ಷೇರುಗಳು :—

ಮೈಸೂರು ಬ್ಯಾಂಕ್ (100)	.. ..	140-0-0
ಬೆಂಗಳೂರು ಬ್ಯಾಂಕ್ (10)	.. ..	9¾/10
ಶ್ರೀಕೃಷ್ಣರಾಜೇಂದ್ರ ಮಿರ್ಸ್ ಮೈಸೂರು (50)	..	15/16
ಮಿನರ್ವ ಮಿರ್ಸ್, ಬೆಂಗಳೂರು (60)	.. ..	35-0-0
ಮೈಸೂರು ಮಿರ್ಸ್ (ಮಹಾರಾಜ) ಬೆಂಗಳೂರು (50)		110-0-0
ಬೆಂಗಳೂರು ಉಲ್ಲೂ ಮಿರ್ಸ್ (100)	.. ..	225-0-0
ಕೈನರಿ ಹಿಂಡ್ ಉಲ್ಲೂ ಮಿರ್ಸ್ (10)	.. ..	2-4-0
ಯುನೈಟೆಡ್ ಬ್ರೀವರಿಸ್ (75)	.. ..	130-0-0
ಬೆಂಗಳೂರು ಚಿಕ್ಕಬಳ್ಳಾಪುರದ ರೈಟ್ ರೈರ್ಟ್ (25)		12-8-0
ಬೆಂಗಳೂರು ಪ್ರಿಂಟಿಂಗ್, ಪಬ್ಲಿಷಿಂಗ್ (90)	..	70-0-0

ಮೈಸೂರು ಸ್ಪೇಟ್ ಲೋಕ್ ಬಾಂಡುಗಳು :—

5½% 85/87, 6¼% 100/103, 6½% 103/105, 7% 105/107½

ಈ ಮೇಲ್ಕಂಡ ಷೇರು ಮತ್ತು ಲೋಕ್ ಬಾಂಡುಗಳನ್ನು ಮಾರುವವರೂ, ಕೊಳ್ಳುವವರೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ :—

[110-8] ಎಚ್. ವೈ. ಪಿಸ್ಸೆ,

ಏಜಂಟ್ ಮತ್ತು ಬ್ರೋಕರ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಗೆಜಿಟ್ ಸಂಗ್ರಹ.

ಡಾ॥ ಎಂ. ಏ. ಗೋಪಾಲಸ್ವಾಮಿಯವರನ್ನು ಮೈಸೂರು ಮಹಾರಾಜರವರ ಕಾರೆಜ್ಜಿನಲ್ಲಿ ಪ್ರೊಫೆಸರಾಗಿ ಜನವರಿ ತಾ. 1 ರಿಂದ ಖಾಯಂ ಮಾಡಿದೆ.

ದಾವಣಗೆರೆ ಸಬ್ ಡಿವೀಜ್ಞ್ ಅ॥ ಕಮಿಷನರ್ ಮಿ॥ ಚಾರರ್ಸ್ ನೊರೊನ್ಹಾಯವರಿಗೆ ಕೊಟ್ಟಿರುವ ಒಂದು ತಿಂಗಳೂ ಇಪ್ಪತ್ತಾರು ದಿನಗಳ ಪ್ರಿವಿಲೆಜ್ ರಜವನ್ನು ಜನವರಿ ತಾ. 15 ರ ತನಕ ಜಾಸ್ತಿ ಮಾಡಿದೆ.

ಫಸ್ಟ್ ಗ್ರೇಡ್ ಪೂಲೀಸ್ ಇನ್ಸ್‌ಪೆಕ್ಟರ್ ಮಿ॥ ಪಿ. ಎಸ್. ಕೃಷ್ಣಮೂರ್ತಿ ನಾಯುಡುಯವರನ್ನು ಅ॥ ಸೂಪರಿಟೆಂಡೆಂಟರಾಗಿ ನೇಮಿಸಿ ದಾವಣಗೆರೆಗೆ ವರ್ಗ ಮಾಡಿದೆ.

ಮಂಡ್ಯ ತಾಲ್ಲೂಕು ಅಮರ್ದಾರ್ ಮಿ॥ ಪಿ. ನುಬ್ಬರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 1927 ನೇ ಆಗಸ್ಟ್ ತಾ. 8 ರ ತನಕ ರಜಾ ಕೊಟ್ಟಿದೆ. ರಜದ ಮೇಲಿರುವ ಅಮರ್ದಾರ್ ಮಿ॥ ಎ. ಅರುಣಾಚಲ ಮೊದಲಯಾರ್ರನ್ನು ಮಂಡ್ಯ ತಾಲ್ಲೂಕಿಗೆ ವರ್ಗಮಾಡಿದೆ.

ರೆವಿನ್ಯೂ ಪ್ರೊಬೇಷನರುಗಳಾದ ಮಿ॥ ಬಿ. ಟಿ. ಕೆಂಪಣ್ಣನವರು ಅರಕಲಗೂಡು ತಾಲ್ಲೂಕಿನ ಅಮರ್ದಾರರಾಗಿಯೂ, ಮಿ॥ ಎಂ. ರಾಮಸ್ವಾಮಯ್ಯನವರು ಮಿ॥ ಅರುಣಾಚಾಲ ಮೊದಲಯಾರ್ರವರು ರಜದಿಂದ ಬರುವ ತನಕ ಮಂಡ್ಯ ತಾಲ್ಲೂಕಿನ ಅಮರ್ದಾರರಾಗಿಯೂ ನೇಮಿನಲ್ಪಟ್ಟಿದಾರೆ.

ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮಿ॥ ಎಸ್. ರಂಗರಾವ್ ನಾಯುಡುಯವರಿಗೆ ಕೊಟ್ಟಿರುವ ರಜವನ್ನು ಇನ್ನೂ ಆರು ತಿಂಗಳು ಜಾಸ್ತಿಮಾಡಿದೆ.

ಮಿ॥ ಎಂ. ಬಿ. ಟಿ. ನಾರಾಯಣರವರನ್ನು ಮೈಸೂರು ಯೂನಿವರ್ಸಿಟಿಯವರ ಕೈಕೆಳಗೆ ಕೆಲಸಕ್ಕೆ ಒಪ್ಪಿಸಿರುವುದರಿಂದ ಡಾ॥ ಬಿ. ಕೆ. ರಾಮಪ್ರಸಾದರವರನ್ನು ವಿದ್ಯುಚ್ಛಕ್ತಿ ಇರಾಖೆಯಲ್ಲಿ 300 ರೂಪಾಯಿ ತಲಬಿನ ಮೇಲೆ ಅ॥ ಜನರಲ್ ಇನ್‌ಸ್ಪೆಕ್ಟರಾಗಿ ಹಂಗಾಮಿ ತರೀಖು ನೇಮಕ ಮಾಡಿದೆ.

ಮಿ॥ ಖರೀದಿ ಅನಂತಪ್ಪನವರನ್ನು ಚನ್ನಗಿರಿ ಮ್ಯುನಿಸಿಪಾಲಟಿಗೂ, ಮಿ॥ ಬಿ. ನಂಜುಂಡಾರಾಧ್ಯರನ್ನು ನಂಜನಗೂಡು ಮ್ಯುನಿಸಿಪಾಲಟಿಗೂ, ಮಿ॥ ಸಯ್ಯದ್ ಅಹಮದ್‌ರವರನ್ನು ಚಿಂತಾಮಣಿ ಮ್ಯುನಿಸಿಪಲ್ಲಿಗೂ ವೈಸ್ ಪ್ರೆಸಿಡೆಂಟರಾಗಿ ಚುನಾವಣೆ ಮಾಡಿರುವುದನ್ನು ಮಂಜೂರು ಮಾಡಿದೆ.

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ ಜಗತ್ಪ್ರಸಿದ್ಧವಾದ ಔಷಧಗಳು.

1 ಜಯಮಂಗಳರಸ :—ಪ್ಲೇಗು ಜ್ವರ-ನ್ಯುಮೋನಿಯಾ ಜ್ವರ-ಇನ್‌ಫ್ಲುಯೆಂಜಾ ಜ್ವರ-ಮೂರರ ಜ್ವರ-ನಾಲ್ಕರ ಜ್ವರ-ನಿತ್ಯವೂ ಬರುವ ಜ್ವರ-ಮಲೇರಿಯಾ ಜ್ವರಗಳು ಖಾತರಿಯಾಗಿ ಬೇಗನೆ ಗುಣವಾಗುತ್ತವೆ—ಅನುಭವಸಿದ್ಧವಾದುದು. ಬೆರೆ ಸೀಸೆ 1 ರೂಪಾಯಿ.

2 ಶ್ರೀಕರ ಕಸ್ತೂರಿ ಮಾತ್ರೆ :—ಈ ಧಳಿ ಮಳೆಗಾಲಕ್ಕೆ ಅದಾಲವ್ಯದ್ದರಿಗೂ ಅಮೃತಕ್ಕೆ ಸಮಾನವಾದ-ಅಮೋಘ ಸುವಾಸನೆಯುಳ್ಳ ಶ್ರೀಕರ ಕಸ್ತೂರಿ ಮಾತ್ರೆಗಳು ಪ್ರತಿ ಕುಟುಂಬದಲ್ಲೂ ಅವಶ್ಯ ಇರಬೇಕಾದುದು. ತಾಂಬೂಲದೊಡನೆ ನಿತ್ಯವೂ ಸೇವಿಸಿದರೆ ಯಾವ ರೋಗವೂ ಶರೀರಕ್ಕೆ ಅಂಟದೆ-ಆರೋಗ್ಯಸ್ಥಿತಿಯು ಚನ್ನಾಗಿರುತ್ತದೆ. ಕೆಮ್ಮು, ನೆಗಡಿ, ಮೈಕೈಭಾರ, ಅರೋಚಕ, ಗಂಟ್ಲುನೋವು, ಹಲ್ಲುನೋವು, ವಿಧವಿಧ ಜ್ವರ, ಶೀತವಾಯು, ಮತ್ತು ಮಕ್ಕಳ ರೋಗಗಳಿಗೆ ಸಿದ್ಧೌಷಧ. ಬೆರೆ ಸೀಸೆ 1 ಕ್ಕೆ 4 ಆಣೆ.

3 ದಾಲಸಂಜೀವಿನಿ :—ಮಕ್ಕಳಿಗೆ 1-2 ಮಾತ್ರೆಗಳನ್ನು ಹಾಲನಲ್ಲಿ ಹಾಕಿದರೆ ಸುಖವಾಗಿ-1-2 ವೇಳೆ ಭೇದಿಮಾಡಿಸಿ ಆರೋಗ್ಯವನ್ನು ಚನ್ನಾಗಿ ಕಾಪಾಡುತ್ತದೆ. ಹೊಟ್ಟೆಯುಬ್ಬರ, ಪಕ್ಕೆಶೆಳತ-ಪ್ರಬಲವಾದ ಜ್ವರ-ಮಲಬಂಧ-ವಿಧವಿಧ ವಾಯು-ಕೆಮ್ಮು-ನೆಗಡಿ-ಮುಂತಾದ್ದರಲ್ಲಿ 1-2 ವೇಳೆ ಭೇದಿ ಮಾಡಿಸಿ ಯಕ್ಷಿಣಿಯಂತೆ ಬಹು ಜಾಗ್ರತೆ ಗುಣಮಾಡುತ್ತದೆ. 50 ಮಾತ್ರೆ 4 ಆಣೆ.

4 ಬಾಧಾಮೃತ—ಅನಾಧ್ಯ ತಲೆನೋವು-ಧಳಕು-ಮೈಕೈನೋವು-ಶೀತವಾಯುವಿನಿಂದ ಮಂಡಿ-ನಡು-ಬೆನ್ನು-ಮುಂತಾದ್ದು ಹಿಡಿದಿರುವಿಕೆ ಅಥವಾ ಊದಲು-ಘಾಯ-ಪ್ಲೇಗು ಗೆಡ್ಡೆ-ಗಂಟ್ಲುನೋವು-ಹಲ್ಲುನೋವು-ಸರ್ವಾಂಗವೂ ಭಾರ-ಡೇಳು ಕಡಿದ ಯಾತನೆ ಇವೆಲ್ಲವೂ ತಕ್ಷಣ ಪರಿಹಾರವಾಗುವ ಅದ್ಭುತವಾದ ಔಷಧ. ಬೆರೆ 4 ಆಣೆ.

5 ಆಮೋದಿನಿ—(ಬಾಯಿ ಸುವಾಸನೆಗೆ ಮತ್ತು ಸಂಗೀತಗಾರರಿಗೆ) ಬೆರೆ 50 ಮಾತ್ರೆ 4 ಆಣೆ.

6 ಸುಖಭೇದಿ ಮಾತ್ರೆ—(ದೊಡ್ಡವರ ಸುಖಭೇದಿಗೆ) ಬೆರೆ 50 ಮಾತ್ರೆ 4 ಆಣೆ.

ವಿ.ಪಿ. ಧಾರ್ಜು ಪ್ರತ್ಯೇಕ. ವ್ಯಾಪಾರಸ್ಥರಿಗೆ ಮತ್ತು ವೈದ್ಯರಿಗೆ ಧಾರಾಳವಾದ ಕಮೀರ್ಷ—ಅನೇಕ ವಿಧ ಕೈಲ ರೇಹ ಮಾತ್ರೆ ಚೂರ್ಣ ಪರಬತ್ತು ಧನ್ಯ ಅಸವಗಳು ಸಿದ್ಧವಾಗಿವೆ. ಕ್ಯಾಟರಾಗು ಫ್ರೀ.

ನಮ್ಮ ಬ್ರಾಂಚುಗಳು—

[11-19] ನಯ್ಯಾಜಿರಾವ್ ರೋಡ್, ಮೈಸೂರು. ಚಿಕ್ಕಪೇಟೆ, ಬೆಂಗಳೂರು. ಹೆಡ್ ಆಫೀಸು—ಸದ್ವೈದ್ಯಶಾಲಾ, ನಂಜನಗೂಡು.

ಮೈಸೂರು ಪೇಟೆ ಧಾರಣೆ.

ಕಡ್ಡಿ ಅಕ್ಕಿ	ರೂ.	೧೮	೮ ೦
ಹನ್ಕ ಕಡ್ಡಿ ಅಕ್ಕಿ		೨೨	೮ ೦
ನಣ್ಣ ಅಕ್ಕಿ		೨೦	೮ ೦
ತೊಗರಿಬೇಳೆ ಪಲ್ಲಾ 1 ಕ್ಕೆ		೨೨	೦ ೦
ಹೈರ್ಕರಾಗಿ ಪಲ್ಲಾ 1 ಕ್ಕೆ		೧೩	೦ ೦
ಕಾರ್ಯಾಗಿ ಪಲ್ಲಾ 1 ಕ್ಕೆ		೧೨	೮ ೦
ಜೋಳ ಪಲ್ಲಾ 1 ಕ್ಕೆ		೧೩	೦ ೦
ಹಲಸಂದೆ ಪಲ್ಲಾ 1 ಕ್ಕೆ		೧೬	೦ ೦
ಹೆಸರು ಪಲ್ಲಾ 1 ಕ್ಕೆ		೧೭	೦ ೦
ದೊಡ್ಡ ಉದ್ದು		೨೨	೦ ೦
ನಣ್ಣ ಉದ್ದು ಪಲ್ಲಾ 1 ಕ್ಕೆ		೧೯	೦ ೦
ಕಡಲೆ ಪಲ್ಲಾ 1 ಕ್ಕೆ		೧೮	೦ ೦
.. ..		೮	೮ ೦
ಕೊತ್ತುಂಬರಿ ಪಲ್ಲಾ 1 ಕ್ಕೆ		೮	೪ ೦
ಸೀಗೇಕಾಯಿ ಮಣ 1 ಕ್ಕೆ		೨	೧೨ ೦
ಮೆಣಸಿನಕಾಯಿ ಮಣ 1 ಕ್ಕೆ ನ್ಹಳದ್ದು		೬	೪ ೦
ಗುಂಟೂರು ಮೆಣಸಿನಕಾಯಿ ಮಣ 1 ಕ್ಕೆ		೫	೪ ೦
ಕಡ್ಲೆಕಾಯಿ ಪಲ್ಲ 1 ಕ್ಕೆ		೭	೮ ೦
ಹುಣಸೆಹಣ್ಣು ಮಣ 1 ಕ್ಕೆ		೭	೮ ೦
ಅವರ್ ಕೋರಾರ್ ಬೂರಾ ಸಕ್ಕರೆ ಮಣ 1 ಕ್ಕೆ ..		೪	೧೨ ೦
ಬೆಲ್ಲ ಅಚ್ಚು 100 ಕ್ಕೆ		೧೦	೦ ೦
ಕೆಂಗಿನಕಾಯಿ 100 ಕ್ಕೆ		೯	೦ ೦
ಉಪ್ಪು 90 ಸೇರಿನ ಮೂಟೆ 1 ಕ್ಕೆ		೬	೬ ೦
ಧಾರಾಪುರ ತುಪ್ಪ ಮಣ 1 ಕ್ಕೆ		೨೬	೦ ೦
ಬೆಣ್ಣೆಕಾಯಿಸಿದ ತುಪ್ಪ ಮಣ 1 ಕ್ಕೆ		೨೨	೦ ೦
ಬೆಣ್ಣೆ ರಾತಲು ೩೭॥ ಗೆ		೨೧	೦ ೦
ಹುಚ್ಚೆಳ್ಳೆಣ್ಣೆ		೬	೧೨ ೦
ಕಡ್ಲೆಕಾಯಿನ ಎಣ್ಣೆ		೫	೧೨ ೦
ಹರಳೆಣ್ಣೆ ಮಣ 1 ಕ್ಕೆ ರಾತಲು 24 ಕ್ಕೆ		೫	೮ ೦
ಸೀಮೇ ಎಣ್ಣೆ ಪೆಟ್ಟಿ 1 ಕ್ಕೆ		೯	೨ ೦
ಯಾಲಕ್ಕಿ ಮಣ 1 ಕ್ಕೆ ರೂ.			೭೦–೯೦
ಚನ್ನ (ಪೌರ್)		೧೩	೬ ೯
ಚನ್ನ ಗಟ್ಟಿ ತೋಲ 1 ಕ್ಕೆ		೨೧	೦ ೦
ಬೆಳ್ಳ ಗಟ್ಟಿ ತೋಲ 100ಕ್ಕೆ		೭೬	೦ ೦

ನೋಡಬೇಕೆಂದಿರುವ ದೀರ್ಘಕಾಲದಿಂದ ಹುಡುಕುವ ಶಾಸ್ತ್ರ ಇದೇ.

ಶರೀರ ಮರ್ಮಶಾಸ್ತ್ರವು.

ಕನ್ನಡ ಭಾಷೆಯಲ್ಲಿ ಇಷ್ಟು ಸಂಪೂರ್ಣವಾದ ರಹಸ್ಯ ಶಾಸ್ತ್ರವು ಇದುವರೆಗೂ ಯಾರಿಂದಲೂ ಬಹಿರಂಗವಾಗಿ ಪ್ರಕಟ ಮಾಡಲ್ಪಟ್ಟಿಲ್ಲ. ಇದರೊಳಗೆ ಸ್ತ್ರೀ-ಪುರುಷ ಲಕ್ಷಣ, ಅವುಗಳ ಸರಿಯಾದ ಉಪಯೋಗ, ಗಂಡು ಹೆಣ್ಣು ಶಿಶು ಉತ್ಪತ್ತಿ ವಿವರ, ಸ್ತ್ರೀ ಪುರುಷರಿಗುಂಟಾಗುವ ರೋಗಗಳು, ಅವನ್ನು ವಾಸಿಮಾಡಿಕೊಳ್ಳುವ ಚಿಕಿತ್ಸೆಗಳು, ಮಹರುಷಿಗಳು ಪೂರ್ವದಲ್ಲ ಬರೆದ ನಂನಾರ ಸುಖದ ರಹಸ್ಯಗಳು ಎಲ್ಲಾ ಬಹಳ ಚೆನ್ನಾಗಿ ವಿವರಿಸಲ್ಪಟ್ಟಿವೆ. ಇದು ವಿವಾಹವಾಗಿರತಕ್ಕವರಿಗೂ ಇನ್ನು ಮೇಲೆ ವಿವಾಹ ಮಾಡಿಕೊಳ್ಳುವವರಿಗೂ ಸ್ತ್ರೀ ಪುರುಷರಿಗೆಲ್ಲಾ ಶ್ರೇಷ್ಠವಾದ ಶಾಸ್ತ್ರವಾಗಿದೆ. ತಪ್ಪದೆ ಪ್ರತಿ ಗೃಹಸ್ಥನೂ ಓದಿ ತೀರಬೇಕು. ವಿ. ಪಿ. ಖರ್ಚು 5 ಆಣೆ.

64 ಚಿತ್ರಗಳೊಡನೆ ಕ್ರಯ ರೂ. 1-0-0.

[134-3] ವಿಳಾಸೆ—ಎಂ. ಎನ್. ನೆರಸ್ವತಿ ಕಂಪನಿ,

ನಂ. 9, ಆರುಮುಗಂ ಬೀದಿ, ಸಾಹುಕಾರ್ ಪೇಟೆ, ಮದರಾಸ್.

ಸಿ. ಹೆಚ್. ಶಾಸ್ತ್ರಿ ಅಂಡ್ ಸನ್ಸ್

ಜನರಲ್ ಬ್ರೋಕರ್ಸ್, ಚಿಕ್ಕ ಪೇಟೆ, ಬೆಂಗಳೂರು ಸಿಟಿ

ಗೌರ್ನಮೆಂಟ್ ಸಾಲದ ಬಾಂಡುಗಳು: ಮೈಸೂರು ಸರ್ಕಾರಿ ಸಾಲದ ಬಾಂಡುಗಳನ್ನೂ, ಇಂಡಿಯಾ ಗೌರ್ನಮೆಂಟ್ ಸಾಲದ ಬಾಂಡುಗಳನ್ನೂ, ಡಿಸ್ಟ್ರಿಕ್ಟ್ ಬೋರ್ಡ್ ಬಾಂಡುಗಳನ್ನೂ ಮಾರುವವರು ಮತ್ತು ಕೊಳ್ಳುವವರು ನಮಗೆ ಬರೆಯಬಹುದು.

ಷೇರುಗಳು: ಬ್ಯಾಂಕುಗಳ, ಮಿಲ್ಲುಗಳ, ರೈಲ್ವೆಗಳ ಅಥವ ಇತರ ಕಂಪೆನಿಗಳ ಷೇರುಗಳನ್ನು ಮಾರಬೇಕಾದರೂ ಕೊಳ್ಳಬೇಕಾದರೂ ನಮಗೆ ಬರೆಯಿರಿ.

ಸಾಲ: ಹಣ ಸಾಲವಾಗಿ ಪಡೆಯಬೇಕಾದಲ್ಲಿ ನಮಗೆ ಬರೆಯಿರಿ. ಭಂಗಾತ, ಬೆಳ್ಳಿ, ಕೆಂಪು, ವಜ್ರ ವಗ್ಗೈರೆ ಒಡವೆಗಳ ಮೇಲೂ, ಗೌರ್ನಮೆಂಟ್ ಸಾಲದ ಬಾಂಡುಗಳ ಮೇಲೂ, ಬಿಕರಿಯಾಗಲು ಯೋಗ್ಯವಾದ ಷೇರುಗಳ ಮೇಲೂ ನಾವು ಸಾಲ ಕೊಡುತ್ತೇವೆ. ಬಡ್ಡಿದರ ವಗ್ಗೈರೆ ವಿಷಯಗಳನ್ನು ನಮ್ಮಿಂದ ತಿಳಿಯಬಹುದು.

[122-5]

G. R. S. III—3]

L 341.
Le. R. B

ROUTINE NOTES.

[To be used only for notes, requisitions, etc., not intended for permanent record.]

Extract from the Proceedings of the Central Recruitment Board held on 10th August 1925

"With a view to give wide publicity in rural parts to vacancies, especially in the Education Department, it was agreed that the Editors of the "Star" and the "Vokkaligara Patrike" may be communicated with to ascertain if they will advertise vacancies in their papers, free of cost"

Draft letter submitted for approval. Some

Cay 27.8.

27.8. Letter No E 1021-22 to the Editor, The 'Star' and the Vokkaligara Patrike.

N. B.—Should routine notes be written on small slips, the notes must be pasted, or slips pasted on this form.

341

G. E. S. III—3]

ROUTINE NOTES.

[To be used only for notes, requisitions, etc., not intended for permanent record.]

Letter No 420 dated 1st September 1925
from the Editor, Vokkaligara Patrike.
States that he will undertake
to publish the vacancies free of
cost provided such publication
is entrusted solely to Vokkaligara
Patrike for a period of 3 months
to begin with.
Subd for perusal and orders.
Reply from the Editor of the
"Star" will be subd for
3.9.25 perusal after receipt.

Chairman
CRB

cay
3/9

Put before
Board at next meeting

2226
4/9

lee
5/9

cay
7/9

The subject was considered at the meeting of the C. R. Board held on the 30th October 1925

N. B.—Should routine notes be written on small slips, the notes must be copied, or slips pasted on this form.

G. R. S. III—5]

ROUTINE NOTES. 387

[To be used only for notes, requisitions, etc., not intended for permanent record.]

and the Board was of opinion that copies of advertisements may be sent to the following papers on distinct understanding that no payment will be made for publication.

(1) The Vokkaligara Patrike.
(2) The Krittanta Patrike
(3) The Mysore Star
(4) Al-Kalam.

If approved copies of the list of vacancies sent to the Gazette will be sent in future to the above papers also

Yes from next week onwards.

CEY 19.11.25

CEY 14.11.25

CEY 25.11

N. B.—Should routine notes be written on small slips the notes must be copied, or slips pasted on this form.

App.F.VI G1.] B650

SUBJECT .....

.....

.....

Section C.R.S

File No.

Serial No.

No. 8 6021-22

Diary No. of letter replied to .....

To The Editors,
The Star, Mysore,
The Vokkaligara Patrike, Bangalore,

General and Revenue Secretariat
( )
, *the* *192*

Date of issue 21.8.22

Signed by M C A S

Dear Sir,

~~With a view to give wide publicity in rural parts to~~ vacancies, especially in the ~~Education Department, the Central~~ Recruitment Board ~~are~~ is of opinion that ~~it would greatly~~ the existing practice of advertising vacancies in the ~~facilitate candidates who are~~ Official Gazette, does not ensure ~~looking for~~ wide publicity, particularly in rural parts. With ~~this~~ object, the Board ~~not yet by the Central Recruitment~~ resolution for the purpose, is publication ~~of~~ of the vacancies in your paper. As

List of enclosures .....

Copied by .....

Examined by .....

over

your paper are the objects of your paper to the advancement of the cause
~~Can also be published in~~ in your
~~paper~~ of backward communities,
I am ~~accordingly~~ to request
you to kindly let me know for
the information of the Board, if you can undertake
~~find it convenient~~ to publish the
vacancies in your paper, free of
cost, Arrangements will be made
in this office to furnish the information
to you in the form in which you
find it suitable for insertion in your
paper and also to send it
so as to reach you in time.

The favour of an early
reply is requested.

Yours faithfully

Secretary C.R.B

CW

No 420 11330 A 381

VOKKALIGARA PATRIKE

EDITOR:
B. HANUMANTAIYA GAUDE.

Bangalore City, 1st September 1925

To,

The Secretary,

Central Recruitment Board, Bangalore.

Sir,

In reply to your letter No.E.1021-22 dated the 31st Aug., I have the honour to state that I shall be glad to undertake to publish the "vacancies" free of cost, provided such publication is entrusted solely to Vokkaligara Patrike for a period of 3 months to begin with. If the venture proves itself profitable by way of securing a large number of subscribers, the arrangements may be continued.

But if the publication is to be made in conjunction with other Patrikas, I cannot publish the "vacancies" free of cost in our Patrike.

I may here mention that Vokkaligara Patrike has the largest circulation in the rural parts of the State and hence, is the best medium for publication of the Vacancies.

I have the honour to be

Sir
Your most obedient Servant,
B. Hanumantaiya Gaud

APP. F. VI. Gl.]

SUBJECT.....

.....

.....

Section.

File No.

Seria No.

No. § 2771-74

Diary No. of letter replied to.....

To The Editors

1 The Vokkaligara Pathrika

2 The Vritthanta Pathrika

3 The Mysore Star

4. Nekalara

General and Revenue Secretariat

( )

the 192

Date of issue 26/11/25

Signed by

Dear Sir.

At the last meeting of the Central Recruitment Board it was resolved that this Notification be sent to the Mysore Gazette for publication with a request to send the usual circular letters also distinct understanding that no payment will be

List of enclosures.....

Copied by.....

Examined by.....

over

WD 0562—GPE—31,000—17-8-25

for publication. In pursuance of the above resolution

~~accordingly sending herewith~~
copies of letter of instructions for the
week ending Friday, the
2nd inst. is herewith sent. Such copies will
also be sent every week in future.

Yours faithfully

HS

Secretary C.D.F.

HS

APP. F. VI. Gl.]

SUBJECT.....

.....

.....

Diary No. of letter replied to.....

General and Revenue Secretariat

( )

the 192

Date of issue 8/12/25

Signed by

Send a print out whether any of the papers have published the vacancies

fvg 8/12

List of enclosures.....

Copied by.....

Examined by.....

Section

File No.

Seria No.

No. E 2871-24

To The Editors

1 The Vokkaligara Patrike.
2 The Vittharatha Patrike
3 The Mysore Star.
4 ~~The~~ Al-Kalam.

Sir,

In continuation of this office letter No E 2741-24. dated 26-11-1925, I am directed to send herewith, ~~for publication in your paper~~ a copy of the list of vacancies for the week ending Tuesday the 1st Dec 25 ~~for publication in your paper~~.

on the distinct understanding that no payment will be made for the same.

I am Sir,
Yours faithfully
fvg
Secretary to Board

over

BR.

TC

G. R. S. VI--G/32]

SUBJECT .....

.....

.....

Diary No. of letter replied to .....

General and Revenue Secretariat

( )

, the 192 .

Date of issue 11/12/25

Signed by

Section

File No.

Serial No.

No. 3124-27

To The Editors.

1. The Valkalipura Pathrike
2. The Vrithantha Pathrike
3. The Hyder & Star
4. D C Kolaru

Sir,

In continuation of this office letter no. 2891-27 dated 3-12-1927, I am directed to send herewith a copy of the light I wanted in the week ending Tuesday 8th Dec. 1927

I am, Sir, Your obedient servant

for Secy

over.

Secy

WD 0632 - GPB--1850--16-6 23

1891

G. R. S. VI—G/32]

SUBJECT .....

.....

.....

Diary No. of letter replied to .....

General and Revenue Secretariat

( )

, the *192* .

Date of issue 16/12/25

Signed by..... M.G.A.S.

Section

File No.

Serial No.

No. 3229-32

To The Editors
1) Vokkaligara Patrike
2) Nadavithana Patrike
3) Mysore Star.
4) Kalam.

Sir,

In continuation of this office letter No. 3124-27 dated 11-12-1925, I am directed to send herewith a copy of the proceedings for the week ending Sunday the 13th inst. [illegible] copies [illegible]

over. pg

W D 0632 - GPB—1500—16-8 23

G. R. S. VI--G/32]

SUBJECT .....

.....

.....

Diary No. of letter replied to .....

General and Revenue Secretariat

( )

, the *192* .

Date of issue 23/12/25

Signed by

Section

File No.

Serial No.

No. 8434-37

To The Editors.

1) The Vokkaligara Pathrike.
2) The Vritantha pathrike
3) The Mysore Star.
4) Al. Kalam

Please note acknowledgment how many copies have been sent so far & whether any paper has published this

23/12

Sir,

In continuation of this office letter No. 3229-32 dated 16-12-1925, I am directed to send herewith a copy of the list of Vacancies for the week ending Tuesday 22nd December 1925.

Yours faithfully

over.

Secretary C.R.S.

W D 0632-GPB—1500—16-8-23

App.F.VI G1.] B650

SUBJECT

Diary No. of letter replied to

General and Revenue Secretariat

( )

, the 192

Date of issue 7/1/26

Signed by

Section

File No.

Serial No.

No. 3573-76/Conf

To The Editors.

1) The Vokkaligara Pathrike.
2) The Vritthanta Pathrike
